ನಮ್ಮ ಗಮನಕ್ಕೆ ತಂದರೆ ಅಂಥಹವರ ಮೇಲೆ ಖಂಡಿತ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿರತಕ್ಕಂಥ ಮ್ಯಾನೇಜ್‌ಮೆಂಟಿನವರಿಗೂ ಮತ್ತು ಯೂನಿಯನ್ಸ್‌ಗಳಿಗೂ ಗಲಾಟೆ ಇದ್ದೇ ಇದೆ. ಒಂದು ಯೂನಿಯನ್‌ಗೂ ಮತ್ತೊಂದು ಯೂನಿಯನ್‌ಗೂ ಜಗಳ ಇದೆ. ಅದು ಎಲ್ಲಾ ಕಾರ್ಖಾನೆಗಳಿಗೂ ಆಗುತ್ತಲೇ ಇರುತ್ತದೆ. ಇಲ್ಲಿ ಅಡ್ಜರ್ನಮೆಂಟ್ ಮೋಷನ್ ತರತಕ್ಕಂಥ ವಿಚಾರ ಇಲ್ಲವೇ ಇಲ್ಲ. ಮಾನ್ಯ ರೆಡ್ಡಿಯವರಿಗೆ ಅಷ್ಟು ವಿಚಾರ ಇನ್ನೂ ಗೊತ್ತಾಗಿಲ್ಲವೆಂದು ಕಾಣುತ್ತದೆ. ಕಾನೂನು ಪ್ರಕಾರ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತದೆ. ಬೋನಸ್ ವಿಚಾರ ಬಂದಾಗ ಅಲ್ಲಿ ಸ್ವಲ್ಪ ಟೆನ್‌ಷನ್ ಇತ್ತು. ಪೋಲೀಸರಾದರೂ ಏತಕ್ಕೆ ಬರುತ್ತಾರೆ ಅವರು ಅಲ್ಲಿ ಲಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡಬೇಕಾಗುತ್ತದೆ. ಲಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡುವುದು ಪೋಲೀಸರ ಕರ್ತವ್ಯ.

If the Police do not give protection, tomorrow the Hon'ble Members would say that the Police have not acted. Wherever there is tension and wherever there are quarrells and wherever there are inter or interaparty rivalry, then the police will have to appear on the scene and see that the law and order is maintained. That is what the Police have done in the Binny Mills.

MADAM SPEAKER.—In view of the statement made by the Hon'ble Minister, I withhold my consent to the adjournment motion.

KARNATAKA (ENHANCEMENT OF CERTAIN CESSES) BILL 1976

Motion To Consider)

SRI M. Y. GHORPADE (Minister for Finance and Housing).—Madam, I beg to move :

"That the Karnataka (Enhancement of Certain Cesses) Bill, 1976 be taken into consideration".

MADAM SPEAKER : Motion moved.

"That the Karnataka (Enhancement of Certain Cesses) Bill, 1976 be taken into consideration.

2-00 P M.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯಅಧ್ಯಕ್ಷರೆ, ನಾನು ಬಡ್ಜೆಟ್ ಭಾಷಣದಲ್ಲಿ ಈ ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್ ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಬೇಕಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ, ಆ ಒಂದು ಉದ್ದೇಶದಿಂದಲೇ ಈ ಬಿಲ್ಲನ್ನು ತಂದಿರತಕ್ಕುದ್ದು. ಈಗ ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್ ಸ್ವಲ್ಪ ಜಾಸ್ತಿ ಮಾಡಬೇಕಾದರೆ ನೇರವಾದಂತ ಕಾರಣ ಇದೆ, ಈಗ ಹಳ್ಳಿಗಳಲ್ಲಿ ವಿಲೇಜ್ ಸ್ಕೂಲ ಬಿಲ್ಡಿಂಗ್ಸ್ ಬಹಳ ಕಡಿಮೆ ಇವೆ, ನಮ್ಮ ಲೆಕ್ಕದ ಪ್ರಕಾರ ಸುಮಾರು 10 ಸಾವಿರ ಶಾಲೆಗಳಲ್ಲಿ ಈಗ 30 ಸಾವಿರ ಹೊಸ ಸ್ಕೂಲು ರೂಮುಗಳ ಅವಶ್ಯಕತೆ ಇದೆ, ಆ ದೃಷ್ಟಿಯಿಂದ ವರ್ಷೇ ವರ್ಷೇ ಸ್ವಲ್ಪ ಮಟ್ಟಿಗಾದರೂ ಈ ಕೊರತೆ ನಿವಾರಣೆ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಸ್ಕೂಲ್ಕ ಬಿಲ್ಡಿಂಗ್‌ಗೋಸ್ಕರ ಕಳೆದ ವರ್ಷ 20 ಲಕ್ಷ ರೂಪಾಯಿ ಮಾತ್ರ ಕೊಡಲಿಕ್ಕೆ ಸಾಧ್ಯವಾಯಿತು, ಅಂತಾದ್ದರಲ್ಲಿ ಈ ವರ್ಷ 1 ಕೋಟಿ 25 ಲಕ್ಷ ರೂಪಾಯಿ ಬಡ್ಜೆಟ್ಟಿನಲ್ಲಿ ಸೇರಿಸಿದ್ದೇವೆ. ಅದು ಅಲ್ಲದೆ ಅದನ್ನು ಖರ್ಚು ಮಾಡುವ ವಿಧಾನವನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿದ್ದೇವೆ. ಹಳೆಯ ಪದ್ಧತಿ

ಪ್ರಕಾರ 2,500 ರೂಪಾಯಿಗಳನ್ನು ಕೊಟ್ಟರೆ ಸಾಲದು ಇದನ್ನು ಮಾರ್ಪಾಡು ಮಾಡಬೇಕೆಂದು ಹಲವಾರು ಸದಸ್ಯರು ಸಲಹೆ ಮಾಡಿದರು, ನಮ್ಮ ವಿದ್ಯಾಮಂತ್ರಿಗಳು ಇಲ್ಲೇ ಇದ್ದಾರೆ, ಅವರು ಕೂಡ ಇದರಲ್ಲಿ ಸಾಕಷ್ಟು ಆಸಕ್ತಿ ವಹಿಸಿ ಕ್ಯಾಬಿನೆಟ್ ಮಟ್ಟದಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ತೀರ್ಮಾನ ಕೈಗೊಂಡಿದ್ದೇವೆ. ಕ್ಯಾಬಿನೆಟ್ ತೀರ್ಮಾನ ಈ ರೀತಿ ಇದೆ :—

'Government grant may be enhanced from Rs 2,500 to Rs. 4,500 perclass room. The Taluk Development Boards need not give any grant in money which they may have made use of for repairs to school buildings.''

ಶ್ರೀ ಕೋಣಂದೂರು ಲಿಂಗಪ್ಪ.— ಕ್ಯಾಬಿನೆಟ್‌ನಲ್ಲಿ ಆಗತಕ್ಕ ತೀರ್ಮಾನವನ್ನು ಸಭೆಯಲ್ಲಿ ಓದುವುದು...

ಶ್ರೀ ಎಂ. ವೈ. ಘೋರ್ಪಡೆ: ಸ್ಪಷ್ಟವಾಗಿ ಗೊತ್ತಾಗಲಿ ಎಂದು ಪಾಯಿಂಟ್ಸ್ ಹೇಳುತ್ತಿದ್ದೇನೆ. ''No rigid type design may be given. However, new cheaper type designs to ensure certain minimum standards may be got developed in consultation with the Chief Engineer and Government Architect to facilitate construction of the type design to the extent possible by using locally available material so that construction costs can be considerably reduced. The Forest Department may be permitted to supply standard size of wood material such as rafters, reapers, windows, etc required for school buildings and the cost towards the same recovered from Taluk Development Boards out of the grants given to them for construction of school buildings.'' ಈಗ ಒಟ್ಟಿನಲ್ಲಿ ಹೇಳುವುದಾದರೆ 6,000 ರೂಪಾಯಿ ಕಟ್ಟಡ ಮಾಡಬೇಕು ಎಂದು ಸರ್ಕಾರದ ಉದ್ದೇಶ ಇದೆ, ಅದರಲ್ಲಿ 4,500 ರೂಪಾಯಿ ಗ್ರಾಂಟ್ ರೀತಿಯಲ್ಲಿ ಕೊಡಬೇಕು ಎಂದು, ಇನ್ನುಳಿದ 1 500 ರೂಪಾಯಿಯಷ್ಟು ಕೆಲಸವನ್ನು ಅಲ್ಲಿರತಕ್ಕ ಸ್ಥಳೀಯ ಜನರು ಮಾಡಬೇಕು ಎಂದು ಇದೆ. ಈ ರೀತಿ 6,000 ರೂಪಾಯಿ ಖರ್ಚು ಮಾಡುವಾಗ, ಅದರಲ್ಲಿ ಸರ್ಕಾರಿ ಗ್ರಾಂಟ್ಸ್ 4 500, ರೂಪಾಯಿ ಉಪಯೋಗ ಮಾಡುವಾಗ ಈ ಟೈಪ್ಸ್, ಡಿಸೈನ್ಸ್ ಏನು ಇದೆ ಅದನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಿ ಫ್ಲೆಕ್ಸಬಿಲಿಟಿ ಇಂಟ್ರಡ್ಯೂಸ್ ಮಾಡಿ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಅನುಭವ ಏನು ಇದೆ ಕಟ್ಟಡ ಯಾವರೀತಿ ಮಾಡಬೇಕು, ಎಂದು ಹೇಳಿ ಮಿನಿಮಮ್ ಸ್ಪೆಸಿಫಿಕೇಷನ್ ಕೊಟ್ಟು ಅದರ ಪ್ರಕಾರ ಇದ್ದರೆ ಸಾಕು ಈಗ 4,500 ರೂಪಾಯಿ ಉಪಯೋಗಿಸಿ ದೊಡ್ಡ ಪ್ರಮಾಣದಲ್ಲಿ ಒಂದು ರೂಮ್ ಕಟ್ಟಲಿಕ್ಕೆ ಸಾಧ್ಯವಾದರೆ ಮಾಡಲಿ ಎನ್ನುವ ಉದ್ದೇಶದಿಂದ ಮಾಡಿದೆ. ಈಗ ಸರ್ಕಾರಿ ಗ್ರಾಂಟ್ಸ್ 2,400 ರೂಪಾಯಿ, 4,500 ರೂಪಾಯಿಗೆ ಏರಿಸಿದ್ದೇವೆ. ಒಟ್ಟಿನಲ್ಲಿ ಹೇಳಬೇಕು ಎಂದರೆ 6,000 ರೂಪಾಯಿ ಬೆಲೆ ಬಾಳತಕ್ಕ ಒಂದು ಕಟ್ಟಡವನ್ನು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಲಿ ಎನ್ನುವ ಉದ್ದೇಶ ಒಂದು. ಅಲ್ಲದೇ ಫಾರೆಸ್ಟ್ ಡಿಪಾರ್ಟಮೆಂಟ್‌ನವರು ವುಡ್ ಮೆಟೀರಿಯಲ್ಸ್ ಕೊಡುವುದು, ಈ ಅಂಶಗಳು ಸೇರಿರತಕ್ಕ ತೀರ್ಮಾನ ಇದೆ, ಈ ರೀತಿ ಮಾಡಬೇಕು ಎಂದು ಬಜೆಟ್ಟಿನಲ್ಲಿ 1ಕೋಟಿ 25 ಲಕ್ಷ ರೂಪಾಯಿ ಹಣ ಒದಗಿಸಿದ್ದೇವೆ, ಈಗ 2,500 ರೂಪಾಯಿ ಪ್ರಕಾರ ಕೊಟ್ಟರೆ 5 ಸಾವಿರ ಸ್ಕೂಲ್ ರೂಮ್ಸ್ ಕಟ್ಟಲಿಕ್ಕೆ ಸಾಧ್ಯ. ಈಗ ಅಷ್ಟೊಂದು ಆಗಲಿಕ್ಕೆ ಆಗುವುದಿಲ್ಲ, ಈಗ 2,400 ರೂಪಾಯಿ ಇದ್ದುದನ್ನು 4,500 ರೂಪಾಯಿಗೆ ಏರಿಸಿದ್ದೇವೆ. ಈಗ ಇದನ್ನು ನೋಡಿದರೆ ಹೆಚ್ಚು ಕಡಿಮೆ 1 ಕೋಟಿ ರೂಪಾಯಿ ಕಾರ್ಯಕ್ರಮ ಜಾಸ್ತಿ ಮಾಡಿದಂತಾಯಿತು. ಇದಕ್ಕೋಸ್ಕರ, ಎಜುಕೇಷನ್ ಸೆಸ್ 5 ಪೆಸೆ ಇದೆ ಇದನ್ನು 10 ಪೈಸ್‌ಗೆ ಏರಿಸಿದ್ದೇವೆ ಅದೇ ಪ್ರಕಾರ ಮಿಡ್‌ಡೇ ಮೀಲ್ ಪ್ರೋಗ್ರಾಂ ಇದು ಬಹಳ ಮುಖ್ಯವಾದುದು, ಇದು ಮಾನ್ಯಸದಸ್ಯರಿಗೂ ಕೂಡ ಗೊತ್ತಿದೆ, ಈಗ ಕೇರ್ ಸಂಸ್ಥೆಯ ಸಹಾಯದಿಂದ ಮತ್ತು ನಮ್ಮ ಪ್ರಯತ್ನದಿಂದ ಸುಮಾರು 12 ಲಕ್ಷ ಹುಡುಗರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಮಾಡುತ್ತಿದ್ದೇವೆ. ಆದರೆ ಈ ಕೇರ್ ಸಂಸ್ಥೆ ಸಹಾಯ ಏನು ಇದೆ, ಅದು ಕ್ರಮೇಣ ಕಡಿಮೆಯಾಗತಕ್ಕ ನೀರಿಕ್ಷೆ ಇದೆ, ಅದನ್ನು ಮೊದಲೇ ಹೇಳಿದ್ದೇನೆ. ಅದು ಕಡಿಮೆಯಾದಂತೆಲ್ಲ ನಮ್ಮ ಜವಾಬ್ದಾರಿ ಜಾಸ್ತಿಯಾಗುತ್ತದೆ. ಈ ವರ್ಷ ಅಂದರೆ 1976-77ರಲ್ಲಿ 12 ಲಕ್ಷ ಹುಡುಗರಿಗೆ 1 ಲಕ್ಷ

50 ಸಾವಿರ ರೂಪಾಯಿ ರಾಜ್ಯದ ಹಣಕಾಸಿನ ಸಹಾಯದಿಂದ ಏರ್ಪಾಡುಮಾಡಬೇಕು ಎಂದು ಇದ್ದೇವೆ ಇದು ಮುಂದಿನ ವರ್ಷ 2 ಲಕ್ಷ ರೂಪಾಯಿ ಮೇಲ್ಪಟ್ಟು ಹೋಗುತ್ತದೆ, ಇನ್ನು ಮುಂದಿನ ವರ್ಷಗಳಲ್ಲಿ 4 ಲಕ್ಷ ರೂಪಾಯಿಗೆ ಏರುತ್ತದೆ ಇದರಿಂದ ಅವರ ಜವಾಬ್ದಾರಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಕಳೆದ ವರ್ಷ 1975-76ರಲ್ಲಿ ಪ್ಲಾನ್‌ನಲ್ಲಿ 32 ಲಕ್ಷ ರೂಪಾಯಿ ಮಾತ್ರ ಇತ್ತು, ನಾನ್ ಪ್ಲಾನ್‌ನಲ್ಲಿ 45 ಲಕ್ಷ ರೂಪಾಯಿ ಇತ್ತು, ಮಿಡ್‌ಡೇ ಮೀಲ್ಸ್‌ಪ್ರೋಗ್ರಾಂ, ಕೇರ್ ಪ್ರೋಗ್ರಾಂ ಬಿಟ್ಟು, ಒಟ್ಟು ನಮ್ಮಿಂದ ಖರ್ಚಾಗುವ ಹಣ 80 ಲಕ್ಷ ರೂಪಾಯಿ ಇತ್ತು, ಇದನ್ನು ಈ ವರ್ಷ 1976-77ರಲ್ಲಿ ನಾನ್ ಪ್ಲಾನ್ 50 ಲಕ್ಷ ರೂಪಾಯಿ ಅಲ್ಲದೇ ಪ್ಲಾನ್‌ನಲ್ಲಿ 1 ಕೋಟಿ 50 ಲಕ್ಷ ರೂಪಾಯಿ ಮಾಡಿದ್ದೇವೆ.

ಇವರಿಂದಾಗಿ ಹೆಲ್ತ್ ಸೆಸನ್ನು ಜಾಸ್ತಿ ಮಾಡಬೇಕಾಯಿತು. ಹಾಗಾಗಿ, ಮೊದಲು ಒಂಬತ್ತು ಪೈಸೆ ಇದ್ದದ್ದು, ಈಗ 15 ಪೈಸೆಯಾಗಿದೆ. ಹೀಗೆ, ನಾವು ಸೆಸ್‌ನ್ನು ಹಾಕುವಾಗ, ಯಾವ ರೀತಿ ಸೆಸ್ ಹಾಕಬೇಕು ಎನ್ನುವ ವಿಧಾನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಾನು ಬಯಸುತ್ತೇನೆ. ಸೆಸ್‌ನ ಭಾರ ಯಾರ ಮೇಲೆ ಬೀಳುತ್ತದೆ ಎನ್ನುವ ಬಗ್ಗೆ ಒಂದು ಸ್ಪಷ್ಟ ಚಿತ್ರ ಇರಬೇಕಾದ್ದು ಬಹಳ ಮುಖ್ಯ. ಈಗ ನಾವು ಈ ಸೆಸ್‌ನ್ನು ಹಾಕಿರುವುದರಿಂದ, ಸರ್ಕಾರಕ್ಕೆ ಎರಡು ಕೋಟಿ ರೂಪಾಯಿ ಹೊಸ ಆದಾಯ ಬರುತ್ತದೆ. ಇದರಲ್ಲಿ ಭೂಕಂದಾಯ ಸೆಸ್‌ನಿಂದ ನಲವತ್ತು ಲಕ್ಷ ಮಾತ್ರಬರುತ್ತದೆ; ಮತ್ತು ಪ್ರಾಪರ್ಟಿ ಟ್ಯಾಕ್ಸ್ ಮೇಲೆ ಹಾಕುವ ಸೆಸ್‌ನಿಂದ ನಲವತ್ತು ಲಕ್ಷ ಬರುತ್ತದೆ; ಹಾಗೆ ಎಕ್ಸೈಸ್ ಡ್ಯೂಟಿ ಮೇಲೆ ಹಾಕುವ ಸೆಸ್‌ನಿಂದ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಬರುತ್ತದೆ. ಅಷ್ಟೇ ಅಲ್ಲದೆ, ನಾವು ಯೋಚನೆ ಮಾಡಿ, ಹೊಸದಾಗಿ ವೃತ್ತಿ ತೆರಿಗೆಯನ್ನು ವಿಧಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಭೂಕಂದಾಯ, ಎಕ್ಸೈಸ್ ಮತ್ತು ಪ್ರಾಪರ್ಟಿ ತೆರಿಗೆಗಳ ಮೇಲೆ ಸೆಸ್ ಹಾಕುವ ರೀತಿಯಲ್ಲಿಯೇ ವೃತ್ತಿ ತೆರಿಗೆಯ ಮೇಲೂ ಸೆಸ್ ಹಾಕುವ ಪದ್ಧತಿ ಹಿಂದೆ ಇತ್ತು. ಆದರೆ ನಾವು ಈಗ ಅದನ್ನು ತಪ್ಪಿಸುತ್ತಿದ್ದೇವೆ. It is being left out of the base for this cess since we are levying ullfledged professinal tax.

ಇದಕ್ಕೆ ಇನ್ನೊಂದು ಕಾರಣವೂ ಇದೆ. ನಮ್ಮ ರಾಜ್ಯಾಂಗದ ಪ್ರಕಾರ, 250 ರೂಪಾಯಿಗಳಿಗಿಂತ ಜಾಸ್ತಿ ವೃತ್ತಿ ತೆರಿಗೆ ಹಾಕಬಾರದು ಎಂದು ಇದೆ. ಈಗ ಹೊಸ ಪದ್ಧತಿ ಪ್ರಕಾರ, 250 ರೂಪಾಯಿಗಳವರೆಗೆ ತೆರಿಗೆ ಹಾಕುತ್ತಿದ್ದೇವೆ. ಪುನಃ ಇದರ ಮೇಲೆ ಸೆಸ್ ಹಾಕಿದರೆ, ಇದಕ್ಕಿಂತ ಅದು ಕಾನೂನು ಬದ್ಧವಾಗುವುದಿಲ್ಲ ಎನ್ನುವ ಉದ್ದೇಶದಿಂದ ಹೀಗೆ ಮಾಡಲಾಗಿದೆ, ಆದುದರಿಂದ ಹೆಚ್ಚು ಹೇಳುವುದು ಅವಶ್ಯಕವಿಲ್ಲವೆಂದು ನಾನು ಭಾವಿಸುತ್ತೇನೆ. ಚರ್ಚೆಯಲ್ಲಿ ಹೊಸ ವಿಚಾರಗಳೇನಾದರೂ ಬಂದರೆ, ನಾನು ಅವುಗಳಿಗೆ ಉತ್ತರ ಕೊಡುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ) —ಮಾನ್ಯ ಅಧ್ಯಕ್ಷರೇ, ಸೆಸ್ ಮೊತ್ತವನ್ನು ಹೆಚ್ಚಿಸುವ ಉದ್ದೇಶದಿಂದ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಮಸೂದೆಯನ್ನು ನಾನು ಅನಿವಾರ್ಯವಾಗಿ ವಿರೋಧಿಸಬೇಕಾದ ಪರಿಸ್ಥಿತಿ ಬಂದಿದೆ. ಈಗಾಗಲೇ ಮಾನ್ಯ ಹಣಕಾಸಿನ ಮಂತ್ರಿಗಳು, ಕೆಲವು ವಿವರಣೆಗಳನ್ನು ಕೊಟ್ಟು, ಯಾವ ಕಾರಣದಿಂದ ಸೆಸ್‌ನ್ನು ಹೆಚ್ಚಿಸಬೇಕಾಗಿ ಬಂತು ಎನ್ನುವುದನ್ನು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಮಸೂದೆಯ ಗುರಿ ಮತ್ತು ಉದ್ದೇಶವಲ್ಲೂ ಕೂಡ "specially for meeting the increasing expenditure on provison of nutrition to the school-going children through mid-day meals and for a more intensive programme of construction of primary school buildingsin rural areas" ಎಂದು ವಿವರಣೆಗಳನ್ನು ಕೊಟ್ಟಿದ್ದಾರೆ. ಈ ಮಸೂದೆಗೆ ನನ್ನ ಮೂಲಭೂತ ಕಾರಣವಿಷ್ಟೆ. ಈಗ ಸರ್ಕಾರದವರು ಸ್ಥಳೀಯ ಸಂಸ್ಥೆಗಳಿಗೆ ಇರತಕ್ಕ ಸಂಪನ್ಮೂಲಗಳನ್ನು ವಿರೋಧಕ್ಕೆ ಇನ್ನೂ ಹೆಚ್ಚಿಸುವ ಬದಲಿಗೆ, ಇರುವ ಸಂಪನ್ಮೂಲಗಳಲ್ಲಿ ಒಂದೊಂದನ್ನು ಕಸಿದುಕೊಳ್ಳುತ್ತಿರುವುದು ಬಹಳ ಖೇದ ತರುವ ವಿಚಾರವಾಗಿದೆ. ಈಗ ರಾಜ್ಯ ಸರ್ಕಾರದವರು ವಸೂಲ್ಮಾಡುತ್ತಿರುವ ಮಾರಾಟ ತೆರಿಗೆಯನ್ನು ಕೇಂದ್ರ ಸರ್ಕಾರದವರೇನಾದರೂ ತೆಗೆದುಕೊಂಡು ಬಿಟ್ಟರೆ, ಆಗ ರಾಜ್ಯ ಸರ್ಕಾರದ ಹಣಕಾಸಿನ ವ್ಯವಸ್ಥೆ ಯಾವ ರೀತಿ ತಲೆಕೆಳಗಾಗುತ್ತದೆ, ಅದೇ ರೀತಿ ಸ್ಥಳೀಯ ಸಂಸ್ಥೆಗಳಿಗೆ ಈ ರೀತಿ ಸೆಸ್ ಹಾಕುವುದರಿಂದ, ಅವರು, ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿ

7TH APRIL 1976 349

ಕೊಳ್ಳುವುದಕ್ಕೆ ಅತಿ ಹೆಚ್ಚು ಕಷ್ಟವಾಗುತ್ತದೆ ಎನ್ನುವ ಅಂಶವನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಈಗ ಸ್ಥಳೀಯ ವಸೂಲು ಮಾಡತಕ್ಕ ತೆರಿಗೆಗಳ ಜೊತೆಗೆ, ಹೆಲ್ತ್, ಸೆಸ್, ಲೈಬ್ರರಿ, ಬೆಗ್ಗರ್ ರಿಲೀಫ್ ಸೆಸ್-ಹೀಗೆ ನಾನಾ ರೂಪದಲ್ಲಿ ಅವರ ಮೇಲೆ ಹೇರುತ್ತಾ ಹೋದ ಪಕ್ಷದಲ್ಲಿ ಸ್ಥಳೀಯ ಸಂಸ್ಥೆಗಳು, ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಶಕ್ತಿ ಏನು ಇದೆ ಅದು 'ನಿಶ್ಶಕ್ತಿ'' ಯಾಗಿ, ಸ್ಥಳೀಯ ಸಂಸ್ಥೆಗಳ ಅಸ್ತಿತ್ವಕ್ಕೆ ಹೆಚ್ಚು ಧಕ್ಕೆ ತಗಲುತ್ತದೆ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ.

ಈಗ ಮುಖ್ಯವಾಗಿ, ಮಾನ್ಯ ಹಣಕಾಸಿನ ಮಂತ್ರಿಗಳು ತಂದಿರತಕ್ಕ ಹೆಚ್ಚುವರಿ ತೆರಿಗೆಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳ ಕೊರತೆ ಹೆಚ್ಚು ಇದ್ದು, ಮತ್ತು ಅಲ್ಲಿನ ಅನೇಕ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರವನ್ನು ಕೊಡುವ ಉದ್ದೇಶವಿದೆ; ಈ ಉದ್ದೇಶ ಸಾಧನೆಗಾಗಿ ಹೆಚ್ಚು ಹಣ ಬೇಕಾಗಿದೆ ಎಂದು ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಮತ್ತು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟಕ್ಕೆ ಏರ್ಪಾಡು ಮಾಡುವುದು ಬಹಳ ಅವಶ್ಯಕತೆ ಇದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ನಾವು ಶಾಲಾ ಕಟ್ಟಡಗಳನ್ನು ಕಟ್ಟುವುದು ಬೇಡ ಎಂದು ಹೇಳುವುದಕ್ಕೆ ಬರುವುದಿಲ್ಲ; ಮತ್ತು ಹೊಟ್ಟೆಗಿಲ್ಲದ ಮಕ್ಕಳಿಗೆ ಊಟ ಕೊಡುತ್ತೇವೆ ಎಂದು ಸರ್ಕಾರ ಹೊರಟಿರುವಾಗ ನಾವು, ಅದು ಬೇಡ ಎನ್ನುವ ಕೆಳಮಟ್ಟಕ್ಕೆ ಹೋಗಿಲ್ಲ ಆದರೆ, ನನ್ನ ಅಭಿಪ್ರಾಯ ಏಷ್ಟೆ. ಮಾನ್ಯ ಅರ್ಥ ಸಚಿವರು, ಮಂತ್ರಿಗಳಾದ ಮೇಲೆ, ಸುಮಾರು ಐವತ್ತು ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಈ ರೀತಿ ಹೆಚ್ಚು ತೆರಿಗೆಯನ್ನು ವಿಧಿಸಿದ್ದರೂ ಶಾಲೆಗಳ ವಿದ್ಯಾಮಟ್ಟ ಸುಧಾರಿಸಿದೆಯೇ? ರೋಗಿಗಳ ಸಂಖ್ಯೆ ಕಡಮೆಯಾಗಿದೆಯೇ ಆಸ್ಪತ್ರೆಗಳಲ್ಲಿ ಹೆಚ್ಚು ಸೌಲಭ್ಯಗಳು ಸಿಗುತ್ತವೆಯೇ? ಇವತ್ತಿನ ದಿವಸ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಿಗಳೇ ಕ್ಕುವುದಿಲ್ಲ; ವೈದ್ಯರ ಸಂಖ್ಯೆ ಹೆಚ್ಚುತ್ತಿದ್ದರೂ, ರೋಗಿಗಳ ಸಂಖ್ಯೆ ಕಡಮೆಯಾಗುತ್ತಿಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗಬೇಕಾದ ಸೌಲಭ್ಯಗಳು ಸರಿಯಾಗಿ ಸಿಕ್ಕದೆ ಅನೇಕ ಸಂದರ್ಭಗಳಲ್ಲಿ ದುಡ್ಡು ಇಲ್ಲದೇ ಇರುವವರು ಖಾಸಗಿಯವರ ಹತ್ತಿರ ಹೆಚ್ಚು ಹಣ ಖರ್ಚು ಮಾಡಿ, ಔಷಧಿಗಳನ್ನು ಪಡೆಯುವುದನ್ನು ನಾವು ನೋಡುತ್ತಿದ್ದೇವೆ; ಕೇಳುತ್ತಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಸೌಲಭ್ಯಗಳು ಸಿಗದೇ ಇರುವುದರ ಬಗ್ಗೆ ಈ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಮಾಡಿರುವ ಟೀಕೆಗಳನ್ನು ನಾವು ಕೇಳಿದ್ದೇವೆ.

ಇನ್ನು ವಿದ್ಯಾಭ್ಯಾಸ ಕುರಿತಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಇಲ್ಲೇ ಇದ್ದಾರೆ; ಅವರಿಗೆ ಗೊತ್ತಿದೆ ಕಳೆದ ವರ್ಷ ಸುಮಾರು 72–80 ಲಕ್ಷ ರೂಪಾಯಿಗಳವರೆಗೂ ಅವ್ಯವಹಾರವಾಗಿ ಖರ್ಚಾಗಿದೆ ಎನ್ನುವುದನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಸುಮಾರು ನಾನೂರು ಉಪಾಧ್ಯಾಯರುಗಳಿಗೆ ಕೆಲಸವಿಲ್ಲದೆ, ಸರ್ಕಾರಿ ಶಾಲೆಗಳನ್ನು ಮುಚ್ಚಬೇಕಾದ ಪ್ರಮೇಯ ಬಂದಿತ್ತು. ಈ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರುಗಳು, ಖಾಸಗೀ ಶಾಲೆಗಳನ್ನು ಸೃಷ್ಟಿ ಮಾಡಿದ್ದರ ಪರಿಣಾಮವಾಗಿ, ಈ ನಾನೂರು ಜನ ಉಪಾಧ್ಯಾಯರುಗಳಿಗೆ ಕೆಲಸವಿಲ್ಲದೆ, ಬರೀ ಸಂಬಳ ಮಾತ್ರ ಕೊಡಬೇಕಾದ ಪರಿಸ್ಥಿತಿ ಬಂದಿತು.

ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಿದೆಯೇ ಎಂಬುದನ್ನು ನೋಡಿದರೆ ಯಾರಿಗೆ ನಿಜವಾಗಿ ವಿದ್ಯಾಭ್ಯಾಸ ದೊರೆಯಬೇಕೋ ಅವರಿಗೆ ದೊರೆಯುತ್ತಿಲ್ಲ. ಗುಡಿಸಲುಗಳಲ್ಲಿ ವಾಸ ಮಾಡತಕ್ಕ ಸಣ್ಣ ಮಕ್ಕಳು ಕೂಲಿನಾಲಿ ಮಾಡುವುದು ಹೋಗಿಲ್ಲ, ಬಾಣಲಿ ಹೊರುವುದು ಹೋಗಿಲ್ಲ. ಇದನ್ನು ನೋಡಿದರೆ ಕಂಪಲ್ಸರಿ ಎಜುಕೇಷನ್ ಎಷ್ಟರಮಟ್ಟಿಗೆ ಆಗುತ್ತಿದೆ, ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಎಷ್ಟರಮಟ್ಟಿಗೆ ಮುಂದುವರೆದಿದೆ ಎಂಬುದು ಗೊತ್ತಾಗುತ್ತದೆ. ಮತ್ತು ಆಸ್ಪತ್ರೆಗಳಲ್ಲಿ ಸೌಲಭ್ಯ ಎಷ್ಟರಮಟ್ಟಿಗಿದೆ ಎಂಬುದನ್ನು ನೋಡಬೇಕು. ಈಗ ಹೆಚ್ಚಿಸಿರುವ ತೆರಿಗೆಯಿಂದ ಬರತಕ್ಕ ಹಣ ಏನಿದೆಯೋ ಇದರಿಂದ ಖಂಡಿತವಾಗಿ ಕೂಡ ಶಾಲೆಗಳ ಅಭಿವೃದ್ಧಿಯಾಗಲೀ, ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಾಗಲೀ, ಆಸ್ಪತ್ರೆಗಳ ಒಂದು ಗುಣಮಟ್ಟವನ್ನು ಹೆಚ್ಚಿಸುವುದಕಾಗಲೀ ಸಾಧ್ಯವಿಲ್ಲ ಎಂಬುದನ್ನು ಹೇಳಬಹುದು. ಈ ಹೆಚ್ಚುವರಿ ತೆರಿಗೆಯಿಂದ ಖಂಡಿತವಾಗಿ ಕೂಡ ಆರೋಗ್ಯ ಇಲಾಖೆಯಿಂದ ಹೆಚ್ಚಿನ ಸೌಲಭ್ಯ ಒದಗಿಸುವುದಕ್ಕಾಗುವುದಿಲ್ಲ, ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಕರ್ಯ ದೊರೆಯುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಲ್ಲೆ. ಹೋದವರ್ಷ 96 ಕೋಟಿ

ರೂಪಾಯಿ ಹೆಚ್ಚುವರಿ ತೆರಿಗೆ ಇತ್ತು. ಈ ವರ್ಷ ಅದನ್ನು 110 ಕೋಟಿ ರೂಪಾಯಿ ಮಾಡಿದ್ದೀರಿ. ಇದರಿಂದ ಬರತಕ್ಕ ಸುಮಾರು 10–15 ಕೋಟಿ ರೂಪಾಯಿನಲ್ಲಿ ಹೆಚ್ಚು ಭಾಗ ಉಪಾಧ್ಯಾಯರ ವೇತನಕ್ಕೆ, ಪೇ ಕಮಿಷನ್ ಮತ್ತು ಡಿ.ಎ. ಹೆಚ್ಚಿಸಿರುವುದರಿಂದ ಉಪಾಧ್ಯಾಯರ ವೇತನಕ್ಕೆ ಮತ್ತು ವೈದ್ಯಕೀಯ ವೃತ್ತಿಯಲ್ಲಿ ಇರತಕ್ಕವರಿಗೆ ಕೊಡಬೇಕಾದ ವೇತನಕ್ಕೆ ಬಹುಭಾಗ ಖರ್ಚಾಗುತ್ತದೆಯೇ ವಿನಹ ನೀವು ಯೋಚಿಸಿರುವಂತೆ ಸೌಲಭ್ಯ ಒದಗಿಸುದಕ್ಕಾಗುವುದಿಲ್ಲ ಎಂದು ಸ್ಪಷ್ಟ ಪಡಿಸುವುದಕ್ಕೆ ಇಷ್ಟಪಡುತ್ತೇನೆ. ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್ ಒಂದಕ್ಕೆರಡರಷ್ಟಾಗುತ್ತಿದೆ. ಒಂದಾನೊಂದು ಕಾಲದಲ್ಲಿ ಕಾಸು ಇತ್ತು. ನಯಾಪೈಸೆ ಮಾಡಿದಾಗ ಹೆಚ್ಚಾಯಿತ್ತು ಹಳೇಕಾಲದಲ್ಲಿದ್ದಂಥ ಲೆಕ್ಕವನ್ನೂ ಈಗಿನ ಲೆಕ್ಕವನ್ನೂ ತೆಗೆದುಕೊಂಡು ನೋಡುವುದಾದರೆ ಒಂದಕ್ಕೆ ನಾಲ್ಕರಷ್ಟಾಗುತ್ತದೆ. ಆದರೆ ಹಣದ ಮೌಲ್ಯ ಕೂಡ ಇಳಿದಿದೆ ಈಗ ತಾವು ನಾನು ಕೊಡತಕ್ಕ ಅಂಕಿಅಂಶವನ್ನು ಪರಿಶೀಲನೆ ಮಾಡಬೇಕು. ಈಗ ನೀವು ಹಾಕಿರತಕ್ಕ ಸೆಸ್‌ಗಳಿಂದ ಎಷ್ಟು ಹೆಚ್ಚಾಗುತ್ತದೆ ಎಂಬುದನ್ನು ನೋಡಬೇಕು ಪ್ರಾಪರ್ಟಿ ಟ್ಯಾಕ್ಸ್ ತೆಗೆದುಕೊಂಡರೆ 15 per cent of the rental value ಇತ್ತು. ಈಗ ಇಲ್ಲಿ ತಂದಿರತಕ್ಕ ಬಿಲ್ ಪ್ರಕಾರ 20 ಪರ್ಸೆಂಟ್ ಮಿನಿಮಂ ಆಗುತ್ತದೆ. ಒಂದು ರೂಪಾಯಿಗೆ 15 ಪೈಸೆ ಹೆಲ್ತ್ ಸೆಸ್ ಬೀಳುತ್ತದೆ. ಸುಮಾರು 10 ಪೈಸೆ ಎಜುಕೇಷನ್ ಸೆಸ್ ಬೀಳುತ್ತದೆ. ಲೈಬ್ರರಿ ಸೆಸ್ 5 ಪೈಸೆ ಬೀಳುತ್ತದೆ. ಬೆಗ್ಗರ್ ರಿಲೀಫ್ ಸೆಸ್ 3 ಪೈಸೆ ಬೀಳುತ್ತದೆ. ಒಟ್ಟಾಗಿ ನೋಡಿದರೆ ಒಂದು ರೂಪಾಯಿಗೆ ಸುಮಾರು 33 ಪೈಸೆ ಸೆಸ್ ಬೀಳುತ್ತದೆ. ಈಗ ಕೊಡುತ್ತಾ ಇರತಕ್ಕ ಸೆಸ್ 15 ಪರ್ಸೆಂಟ್ ಜೊತೆಗೆ ಇನ್ನೂ 18½ ಪರ್ಸೆಂಟ್ ಹೆಚ್ಚಾಗುತ್ತದೆ. ಈಗ ನಾಗರೀಕರು ಕೊಡಬೇಕಾದಂಥ ಹೊಸ ರೂಪದಲ್ಲ ಬರತಕ್ಕ ಸೆಸ್‌ಗಳು ಮತ್ತು ಕಂದಾಯ ಹೆಚ್ಚಿಸಿರುವುದರಿಂದ ಸುಮಾರು 26.6 ಪರ್ಸೆಂಟ್ ಆಗುತ್ತದೆ ಅದರಿಂದ ಸುಮಾರು 8 ಪರ್ಸೆಂಟ್ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಇದರ ಜೊತೆಗೆ ಅರ್ಬನ್‌ಲ್ಯಾಂಡ್ ಟ್ಯಾಕ್ಸ್ ಬಂದ ಪಕ್ಷದಲ್ಲಿ 60–40 ಇರತಕ್ಕ ಸ್ವಂತ ಮನೆ ಬಿಟ್ಟು ಬೇರೆ ಮನೆಗಳನ್ನು ತೆಗೆದುಕೊಂಡರೆ ಒಟ್ಟು 35 ಪರ್ಸೆಂಟ್ ಟ್ಯಾಕ್ಸ್ ಬೀಳತಕ್ಕ ಸಂದರ್ಭ ಇದೆ. 18½ ಪರ್ಸೆಂಟ್ ಕೆಲವು ಸಂದರ್ಭದಲ್ಲಿ 35 ಪರ್ಸೆಂಟ್ ಆಗಿ ಒಂದಕ್ಕೆ ಡಬ್ಬಲ್ ಆಗತಕ್ಕ ಪರಿಸ್ಥಿತಿ ಇದೆ. ಇದನ್ನು ನೋಡಬೇಕು ಇದರಿಂದ ಎರಡು ಪ್ರಶ್ನೆ ಬರುತ್ತದೆ. ಒಂದನೆಯದಾಗಿ ಸ್ವಂತಕ್ಕೆ ಇಟ್ಟುಕೊಳ್ಳುವ ಮನೆಯವರು ಕಂದಾಯ ಹೆಚ್ಚಾಗಿ ಕೊಡಬೇಕಾಗಿ ಬರುತ್ತದೆ. ಕೆಲವು ನೌಕರರು ಡಿಯರ್ನೆಸ್ ಅಲೋಯನ್ಸ್ ಪಡೆಯಬಹುದು. ಆದರೆ ಹೆಚ್ಚು ಭಾಗ ಜನ ಡಿಯರ್ನೆಸ್ ಅಲೋಯನ್ಸ್ ಮತ್ತು ಯಾವುದೇ ವರಮಾನ ಇಲ್ಲದಿರುವ ಜನರಿಗೆ ಖರ್ಚಿನ ಬಾಬ್ತು ಹೆಚ್ಚುಹೆಚ್ಚಾಗಿ ಆಗುತ್ತಾ ಇದ್ದಾಗ ವರಮಾನ ಹೆಚ್ಚಾಗದೇ ಇರತಕ್ಕ ಜನ ಬಹುಸಂಖ್ಯೆಯಲ್ಲಿರುವುದರಿಂದ ಅಂತಹವರಿಗೆ ಪೆಟ್ಟು ಬೀಳುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ಇದರ ಜೊತೆಗೆ ಯಾವಾಗ ಸೆಸ್ ಮತ್ತು ಕಂದಾಯ ಹೆಚ್ಚಾಗುತ್ತದೆಯೋ ಹೊರೆ ಬಾಡಿಗೆ ಮನೆಯಲ್ಲಿರತಕ್ಕವರ ಮೇಲೆ ಬೀಳುತ್ತದೆ. ಜನಗಳು ಈಗಾಗಲೇ ಹೆಚ್ಚಿನ ತೆರಿಗೆ ಕೊಡುತ್ತಿದ್ದಾರೆ. ಸಾಮಾನು ಬೆಲೆ ಏರಿರುವುದರಿಂದ ಜನಗಳ ಜೀವನ ಕಷ್ಟವಾಗುತ್ತಾ ಇರುವುದರಿಂದ ಈ ರೀತಿ ತೆರಿಗೆ ಹಾಕುವುದನ್ನು ಆದಷ್ಟು ಕಡಿಮೆ ಮಾಡಬೇಕು ಎಂದು ನನ್ನ ಖಚಿತವಾದ ಅಭಿಪ್ರಾಯ. ಹೆಂಚು ಇಲ್ಲದಿರುವ ಮನೆಗಳಲ್ಲಿ ಶಾಲೆಗಳನ್ನು ನಡೆಸತಕ್ಕ ಪರಿಸ್ಥಿತಿ ಇದೆ, ವಿದ್ಯಾಭ್ಯಾಸಕ್ಕೆ ಸರಿಯಾದ ಅನುಕೂಲ ಒದಗಿಸುವುದು ಬೇಡವೇ, ಆರೋಗ್ಯದ ಕಡೆ ಗಮನ ಕೊಡುವುದು ಬೇಡವೆ ಇದನ್ನೆಲ್ಲಾ ಹಣ ಇಲ್ಲದೆ ಹೇಗೆ ಮಾಡಬೇಕು, ತೆರಿಗೆ ಹಾಕದೇ ಇದ್ದರೆ ಯಾವ ರೀತಿ ಮಾಡಬೇಕು ಎಂದು ಮಾನ್ಯ ಮಂತ್ರಿಗಳು ಕೇಳಬಹುದು. ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ 110 ಕೋಟಿ ರೂಪಾಯಿ ಖರ್ಚು ಮಾಡಿದರೆ ಖಾಸಗಿ ಶಾಲೆಗಳವರು 110 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ತಂದೆತಾಯಿಗಳಿಂದ ವಸೂಲು ಮಾಡುತ್ತಾರೆ. ಎರಡೂಕಾಲು ಕೋಟಿ ರೂಪಾಯಿ ಸಾರ್ವಜನಿಕ ಹಣದಿಂದ ವಿದ್ಯಾಭ್ಯಾಸ ನಡೆಯುತ್ತಿದೆ. ಇಷ್ಟು ಹಣ ಖರ್ಚಾಗುತ್ತಾ ಇರುವುದರಿಂದ ಇನ್ನು ಸ್ವಲ್ಪದರಲ್ಲಿ ಏನೂ ಹೆಚ್ಚಾಗುವುದಿಲ್ಲ ನಾನಾ ರೂಪದಲ್ಲ ತೆರಿಗೆ ಬೀಳುತ್ತಿರುವುದರಿಂದ ಹೊರೆ ಜನಗಳಿಗೆ ದಿನೇ ದಿನೇ ಹೆಚ್ಚಾಗುತ್ತಿದೆ. ಬಡವರಿಗೆ ಸೌಕರ್ಯ ಮಾಡಿಕೊಡಬೇಕು ಎಂಬ ಉತ್ತಮವಾದ ಉದ್ದೇಶ ಸರ್ಕಾರದಲ್ಲಿದ್ದರೂ ಕೂಡ ಸಾಮಾನುಗಳ ಬೆಲೆ ಏರುವುದಕ್ಕೆ ಜನಗಳ ಕಷ್ಟ ಹೆಚ್ಚಾಗುವುದಕ್ಕೆ ಕಾರಣಗಳನ್ನು ಸರ್ಕಾರವೇ ಒದಗಿಸುತ್ತಾ ಇರುವುದರಿಂದ ಬಹಳ ಕಷ್ಟವಾಗುತ್ತದೆ. ಶಾಲಾಕಟ್ಟಡಗಳ ಬಗ್ಗೆ ಹೇಳಬೇಕಾದರೆ ಒಂದು ರೂಮಿಗೆ ಎರಡೂ

ವರೆ ಸಾವಿರ ರೂಪಾಯಿ ಕೊಡುತ್ತಿದ್ದುದನ್ನು ನಾಲ್ಕೂವರೆ ಸಾವಿರ ರೂಪಾಯಿ ಮಾಡಿರುವುದು ಶ್ಲಾಘನೀಯವಾದುದು. ಆದರೂ ಕೂಡ ಈ ನಾಲ್ಕೂವರೆ ಸಾವಿರ ರೂಪಾಯಿನಲ್ಲಿ ಸುವ್ಯವಸ್ಥಿತವಾಗಿ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಕಾಗಿದೆ. ನನಗೆ ಇರತಕ್ಕ ಅನುಭವದಲ್ಲಿ ಒಂದು ಕಚ್ಚಾ ಮನೆಕಟುವುದಕ್ಕೂ ಕೂಡ ಒಂದು ಚದರಕ್ಕೆ ಮೂರು ಸಾವಿರ ರೂಪಾಯಿ ಬೇಕಾಗುತ್ತದೆ. 18 × 20 ಅಡಿ ಕ್ಲಾಸ್ ರೂಂ ಇಲ್ಲದೇ ಹೋದರೆ ಮೂರೂವರೆ ಚದರ ಇಲ್ಲದೆ ಇದ್ದರೆ ಸರಿಯಾದ ಕ್ಲಾಸ್‌ರೂಂ ಆಗುವುದಿಲ್ಲ. ಆದ್ದರಿಂದ ಆ ದೃಷ್ಟಿಯಿಂದ ಈಗ ಕೊಡುತ್ತಾ ಇರತಕ್ಕ ಹಣ ಸಾಕಾಗುವುದಿಲ್ಲ. ಇದರಿಂದ ಹೆಚ್ಚಿನ ಸೌಲಭ್ಯವಾಗುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಎಜುಕೇಷನ್ ಸೆಸ್, ಹೆಲ್ತ್ ಸೆಸ್', ಇವು ಪ್ರತ್ಯಕ್ಷವಾಗಿ ಕೊಡಬೇಕಾದಂಥ ತೆರಿಗೆ. It is a direct tax and the propert (wner will pay it himself. ಲೋಕಲ್ ಬಾಡೀಸ್‌ಗೆ ಬರತಕ್ಕ ಸಂಪನ್ಮೂಲಗಳಿಗೆ ತೊಂದರೆಯಾಗುತ್ತದೆ. ಎರಡನೆಯದಾಗಿ; ಸಾಮಾನುಗಳ ಬೆಲೆಗಳ ಏರಿಕೆಯಿಂದಾಗಿ ಜೀವನ ಮಟ್ಟ ಕಷ್ಟವಾಗುತ್ತದೆ. ಬಡವರಿಗೆ ಇದರಿಂದ ಅನಾನುಕೂಲವಾಗುತ್ತದೆ. ನೀವು ಹಾಕತಕ್ಕ ಹೆಚ್ಚುವರಿ ತೆರಿಗೆಯನ್ನು ಹಣವಂತರು ಮಾತ್ರವೇ ಅಲ್ಲ, ಎಲ್ಲರೂ ಕೊಡಬೇಕಾದ ಪರಿಸ್ಥಿತಿ ಬರುತ್ತದೆ ಆದರಿಂದ ಈ ರೀತಿ ತೆರಿಗೆ ಹಾಕುವುದ ಸರಿಯಾದುದಲ್ಲ ಎಂದ ಸ್ಪಷ್ಟವಾಗಿ ಹೇಳಿ, ಇದರ ಬಗ್ಗೆ ಕೆಲವು ತಿದ್ದುಪಡಿಯನ್ನು ಕೊಟ್ಟಿರುವುದರಿಂದ ಆ ಸಂದರ್ಭದಲ್ಲಿ ಮಾತನಾಡುವುದಕ್ಕೆ ಕೆಲವು ಅಂಶಗಳನ್ನು ಉಳಿಸಿಕೊಂಡು ಈಗ ತಂದಿರತಕ್ಕ ಹೆಚ್ಚುವರಿ ತೆರಿಗೆಯನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

2-30 P. M.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ). — ಮಾನ್ಯ ಅಧ್ಯಕ್ಷರೇ ಮಾನ್ಯ ಅರ್ಥಸಚಿವರು ಈ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಈಗಾಗಲೇ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ ಮತ್ತೆ ಪುನಃ ಇದನ್ನು ಬಿಲ್ಲಿನ ರೂಪದಲ್ಲಿ ತೆಗೆದುಕೊಂಡು ಬಂದು ಆ ತೆರಿಗೆಯ ಹೊರೆಯನ್ನು ಹೇರುವುದಕ್ಕೆ ಹೊರಟಿದ್ದಾರೆ. ಅವರು ಮಾತನಾಡುತ್ತಾ ಹೇಳಿದರು. ನಾವು ವಿದ್ಯಾಭ್ಯಾಸ ಇಲಾಖೆಗೆ ವಿದ್ಯಾಭ್ಯಾಸಕ್ಕಾಗಿ ಅನುಕೂಲವಾಗುವ ರೀತಿಯಲ್ಲಿ ಖರ್ಚು ಮಾಡಬೇಕಾಗಿದೆ, ಅದರಲ್ಲೂ ವಿದ್ಯಾರ್ಥಿಗಳಿಗೆ ಇವತ್ತಿನದಿವಸ ಮಿಡ್ಡೇಮೀಲ್ಸ್ ಏನು ಕೊಡಬೇಕಾಗಿದೆ. ಅದಕ್ಕಾಗಿ ಖರ್ಚು ಮಾಡಬೇಕಾಗಿದೆ ಮತ್ತು ಸ್ಕೂಲ್ ಕಟ್ಟಡವನ್ನು ಕಟ್ಟಿಸಬೇಕಾಗಿದೆ, ಅದಕ್ಕಾಗಿ ಹಣ ಬೇಕು. ಆದ್ದರಿಂದ ನಾವು ಈ ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್, ಈ ಎರಡೂ ಸೆಸ್‌ಗಳನ್ನೂ ಹಾಕಿದೆವೆಂದು ಹೇಳಿದ್ದಾರೆ. ನನ್ನ ಮೊದಲನೇ ಪ್ರಶ್ನೆ ಏನೆಂದರೆ ಸರ್ಕಾರದ ಧೋರಣೆ ಏನಿದೆ, ಸರ್ಕಾರದ ದೃಷ್ಟಿಕೋಣ ಏನಿದೆ ಅದು ಸರಿಯಾಗಿದೆಯೇ ಎಂದು ಕೇಳುತ್ತೇನೆ. ನಾನು ಯಾವ ದೃಷ್ಟಿಯಲ್ಲಿ ಹೇಳುತ್ತಿದ್ದೇನೆಂದರೆ ಈಗ ಜನಗಳಿಗೆ ಎಲ್ಲಾ ವಿಭಾಗದಲ್ಲಿಯೂ ಅನುಕೂಲವನ್ನು ಮಾಡಿಕೊಡಬೇಕು; ಇತರ ವಿಷಯದಲ್ಲಿಯೂ ಸಹ ಪ್ರತಿಸಾರಿಯೂ ಈ ತರಹ ತೆರಿಗೆಗಳನ್ನು ಜನಸಾಮಾನ್ಯರ ಮೇಲೆ ಹೊರಿಸುವುದು ಸರಿಯೇ ಎಂದು ಪ್ರಶ್ನೆ ಮಾಡುತ್ತೇನೆ. ಅಭಿವೃದ್ಧಿ ಕಾರ್ಯಗಳು ಆಗಕೂಡದು ಎಂದು ಯಾರೂ ಹೇಳುವುದಿಲ್ಲ. ವಿರೋಧಪಕ್ಷದ ನಾಯಕರು ಯಾರೂ ಕೂಡ ಸ್ಕೂಲ್ ಕಟ್ಟಡವನ್ನು ಕಟ್ಟಕೂಡದು ಎಂದು ಹೇಳುವುದಿಲ್ಲ. ಮತ್ತು ವಿದ್ಯಾರ್ಥಿಗಳಿಗೆ ಮಿಡ್ಡೇ ಮೀಲ್ಸನ್ನು ಕೊಡಕೂಡದು ಎಂದು ಯಾರೂ ಹೇಳುವುದಿಲ್ಲ. ತಾವು ವಿದ್ಯಾರ್ಥಿಗಳಿಗೆ ಮಿಡ್ಡೇ ಮೀಲ್ಸ್ ಕೊಡಬೇಕು, ಸ್ಕೂಲ್ ಕಟ್ಟಡವನ್ನು ಕಟ್ಟಿಸಬೇಕು. ಆದರೆ ತಾವು ಪ್ರತಿವರ್ಷ ಜನಗಳ ಮೇಲೆ ಟ್ಯಾಕ್ಸನ್ನು ಹಾಕುವುದು ಸರಿಯೆ ? ಈ ರೀತಿ ಟ್ಯಾಕ್ಸ್‌ಗಳನ್ನು ಎಲ್ಲಿಯ ತನಕ ಹಾಕುತ್ತಾ ಹೋಗುತ್ತೀರಿ? ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಈ ಟ್ಯಾಕ್ಸನ್ನು ಹಾಕಿದ್ದಾರೆ. ನಾಳೆ ಮಾನ್ಯ ಸಿದ್ದವೀರಪ್ಪನವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಇನ್ನೊಂದು ಟ್ಯಾಕ್ಸನ್ನು ಹಾಕುತ್ತಾರೆ. ಮಾನ್ಯ ಚನ್ನಬಸಪ್ಪನವರು ರೋಡ್ ಮಾಡಬೇಕು, ಸೇತುವೆ ಮಾಡಬೇಕು ಎಂದು ಹೇಳಿದರೆ ಇನ್ನೊಂದು ಟ್ಯಾಕ್ಸ್ ಹಾಕುತ್ತಾರೆ. ಈ ಒಂದು ಧೋರಣೆ ಏನಿದೆ ಒಂದೊಂದು ಸಾರಿ ಏನಾದರೂ ಕಾರ್ಯಕ್ರಮವನ್ನು ಜನಗಳ ಹಿತದೃಷ್ಟಿಯಿಂದ ಅಥವಾ ರಾಜ್ಯದ ಹಿತ ದೃಷ್ಟಿಯಿಂದ ಮಾಡಬೇಕಾದರೆ ತೆರಿಗೆಯನ್ನು ಹಾಕದೇ ವಿಧಿ ಇಲ್ಲವೆಂದು ಹೇಳಿದರೆ ಅದು ದಿವಾಳಿತನವನ್ನು ತೋರಿಸುತ್ತದೆಂದು ಸ್ಪಷ್ಟವಾಗಿ ಹೇಳುತ್ತೇನೆ ಈ ರೀತಿ ತೆರಿಗೆಯನ್ನು ಹಾಕುವುದಾದರೂ ಏತಕ್ಕಾಗಿ ಬೇಕಾಗಿತ್ತು ? ಇದರ ಬಗ್ಗೆ ಕೇಂದ್ರದವರಿಂದ ಉತ್ತೇಜನ ಪಡೆಯಬೇಕಾಗಿತ್ತು ಎಂದು ಕಾಣುತ್ತದೆ. ಕೇಂದ್ರ ಸರ್ಕಾರದವರು ಬಹಳ ಹುಷಾರಾಗಿದ್ದಾರೆ ಕೇಂದ್ರಸರ್ಕಾರದವರು ಕೇಂದ್ರದ ಬಜೆಟ್‌ನಲ್ಲಿ ಜನರ

ಮೇಲೆ ತೆರಿಗೆಯನ್ನು ಹಾಕಲಿಲ್ಲ. ರೈಲ್ವೆ ಬಜೆಟ್‌ನಲ್ಲೂ ಹಾಕಲಿಲ್ಲ. ಕೇಂದ್ರದವರು ಹಾಕಲಿಲ್ಲ ಎಂದಮೇಲೆ ನೀವು ಏತಕ್ಕೆ ಹಾಕಬೇಕು ? ಕೇಂದ್ರದವರು ಹಾಕದೇ ಇದ್ದರೆ ನಾವು ಹಾಕಲೇ ಕೂಡದೇ ಎಂದು ನೀವು ಕೇಳಬಹುದು, ಅದು ಬೇರೆ ಪ್ರಶ್ನೆ. ಕೇಂದ್ರದವರು ಯಾವ ದಾರಿಯಲ್ಲಿ ಹೋಗಬೇಕೆಂದು ಒಂದು ಗೈಡ್ ಲೈನ್ಸ್ ಹಾಕಿಕೊಡುವುದಕ್ಕೆ ಇರುವಾಗ ಕೇಂದ್ರದವರ ರೀತಿನೀತಿಗಳನ್ನು ಅನುಸರಿಸುವುದಕ್ಕೆ ತಾವು ತಯಾರು ಇಲ್ಲದೇ ಆ ದಾರಿಯನ್ನು ಬಿಟ್ಟು ಅಡ್ಡದಾರಿಯನ್ನು ಹಿಡಿದು ಜನಸಾಮಾನ್ಯರ ಮೇಲೆ ತೆರಿಗೆಯ ಭಾರವನ್ನು ಹೊರಿಸುವುದು ಯಾವ ನ್ಯಾಯ ? ಇದು ನ್ಯಾಯವಾದುದಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ ವಾಗಿದೆ. ಎಷ್ಟೋಸಾರಿ ನಾವು ಇದರ ಬಗ್ಗೆ ಸ್ಟಾಟಿಸ್ಟಿಕ್ಸ್ ಕೊಟ್ಟು ಸುಸ್ತಾಗಿದ್ದೇವೆ. ಇನ್‌ಡೈರೆಕ್ಟ್ ಮತ್ತು ಡೈರೆಕ್ಟ್ ಟ್ಯಾಕ್ಸಸ್ ವಿಷಯದಲ್ಲಿ ಯಾವ ರೀತಿ ಇದೆಯೆಂದು ತಮಗೆ ಗೊತ್ತಿದೆ. ಇನ್‌ಡೈರೆಕ್ಟ್ ಮತ್ತು ಡೈರೆಕ್ಟ್ ಟ್ಯಾಕ್ಸಸ್ ರೇಷಿಯೋ ಪ್ರಕಾರ ಡೈರೆಕ್ಟ್ ಟ್ಯಾಕ್ಸನ್ನು ನೂರಾರು ಜನಗಳ ಮೇಲೆ ಹಾಕಂತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ.—ಪ್ರಾಪರ್ಟಿ ಇದ್ದವರ ಮೇಲೆ ಹಾಕುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ರಾಜ್ಯದಲ್ಲಿ ಪ್ರಾಪರ್ಟಿ ಇರುವವರ ಮೇಲೆಯೇ ಅಲ್ಲ. ರಾಜ್ಯದ ಸಮಸ್ತ ಜನಗಳ ಮೇಲೆಯೂ ಹಾಕುತ್ತಿದ್ದೀರಿ. ಹೆಲ್ತ್ ಮತ್ತು ಎಜುಕೇಷನ್ ಸೆಸ್ಸನ್ನು ಹಾಕಿದ್ದೀರಿ. ಪ್ರೊಫೆಷನಲ್ಸ್‌ಗೆ ಕನ್‌ಸೆಷನ್ ಕೊಡುವುದಕ್ಕೆ ಹೊರಟಿದ್ದೀರಿ. ಅದು ಶ್ಲಾಘನೀಯವಾದದ್ದು. ಆದರೆ ಅಲ್ಲಿ ಪ್ರೊಫೆಷನ್ ಟ್ಯಾಕ್ಸ್ ಹಾಕಿದ್ದೀರಿ, ಇಲ್ಲಿ ಅದನ್ನು ಬಿಟ್ಟಿದ್ದೀರಿ, ಅದು ಇವೂ ಎರಡನ್ನೂ ಹಾಕಿದರೆ ಕಣ್ಣು ಕೆಂಪಗಾಗುತ್ತದೆಂದು ಹಾಗೆ ಮಾಡಿದ್ದೀರಿ. ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸನ್ನು ತಾವು ನೋಡಿದರೆ ಸುಮಾರು ೭೬ ಪರ್ಸೆಂಟ್ ಇನ ಡೈರೆಕ್ಟ್ ಟ್ಯಾಕ್ಸಸ್ ಆಗಿದೆ. ಇನ್‌ಡೈರೆಕ್ಟ್ ಟ್ಯಾಕ್ಸನ್ನು ಕೊಡುವವರು ಜನಸಾಮಾನ್ಯರು. ಸಾಮಾನ್ಯ ಜನರೂ ಡೈರೆಕ್ಟ್ ಟ್ಯಾಕ್ಸ್ ಕೊಡುವುದು ಅದು ಸರಿಯೆ? ಇದಕ್ಕೆ ಬೇರೆ ದಾರಿ ಇರಲಿಲ್ಲವೇ ? ನನಗೆ ಅನ್ನಿಸುತ್ತದೆ ಬೇರೆ ದಾರಿ ಇದ್ದೂ ಅದನ್ನು ಅನುಸರಿಸುತ್ತಾ ಇಲ್ಲ ಎನ್ನುವುದೇ ನನ್ನ ಆಕ್ಷೇಪಣೆ ಆ ಬೇರೆ ದಾರಿ ಏನೆಂದರೆ ಕೇಂದ್ರಸರ್ಕಾರದವರು ನಮ್ಮಿಂದ ಎಲ್ಲಾ ಟ್ಯಾಕ್ಸನ್ನೂ ಪಡೆಯುತ್ತಿದ್ದಾರೆ. ನಾವು ಆ ಸ್ಟೇಜಿಗೆ ಬಂದಿದ್ದೇವೆಯೇ ? ಕೇಂದ್ರದವರು ಎಲ್ಲಾ ಟ್ಯಾಕ್ಸನ್ನು ಹಾಕಿ ಎಲ್ಲಾ ರಾಜ್ಯಗಳಿಂದಲೂ ವಸೂಲು ಮಾಡುತ್ತಿದ್ದಾರೆ. ಕೇಂದ್ರದಿಂದ ಬರತಕ್ಕ ಅಂಶ ಎಷ್ಟು ಬರುತ್ತಿದೆ ? ಅದು ಸರಿಯಾಗಿ ಬರುತ್ತದೆಯೇ ? ಇದರ ಬಗ್ಗೆ ಯೋಚನೆ ಏನಾದರೂ ಇದೆಯೇ ? ನನಗೆ ಗೊತ್ತು ೨-೩-೪ ಫೈನಾನ್ಸ್ ಕಮಿಷನ್‌ಗಳು ಒಂದು ತೀರ್ಮಾನಕ್ಕೆ ಬಂದಿರುವುದು ಏನೆಂದರೆ ಒಂದು ಯೂನಿಫಾರಂ ಫಾರ್ಮುಲವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಸ್ಟೇಟ್ ಟ್ಯಾಕ್ಸೇಷನ್ ಇನ್ ಇಂಡಿಯಾ ಎಂಬ ಪುಸ್ತಕದಲ್ಲಿ ಟ್ಯಾಕ್ಸೇಷನ್ ಬಗ್ಗೆ ಬರೆದಿದ್ದಾರೆ. ಮಧ್ಯಪ್ರದೇಶದಲ್ಲಿ ಎಜುಕೇಷನ್ ಸರ್ವೀಸಸ್‌ನವರು ಬರೆದಿದ್ದಾರೆ. ಡಾಕ್ಟರ್ ರಾಜೇಂದ್ರರವರು ಏನು ಹೇಳುತ್ತಾರೆ ಎಂದರೆ :

"In a developing economy there is a need for a constant constructive reappraisal of Centre-State relations. In U.S.A., the Supreme Court has performed the function through the theory of Implied Powers. As the field of State activities increases, the federal government becomes stronger. In a welfare state, with a planned economy, the dependence of federating units upon the centre will increase. With increasing political concessions at every level financial dependence also increases and a constant readjustment is necessitated. Federation is a compromise between national unity and regional interest, and the compromise must be properly maintained. Any attempt to overlook either of the two factors will be suicidal. In our economy the Union controls all the flexible taxes which showed an increase of 605 per cent during the last twenty years (from Rs 460 crores in 1951-52 to Rs. 3241 crores in 1970-71) in comparision to 389 per cent

from Rs. 286 in 1950–51 to Rs. 1,398 in 1970–71 in the states sphere whereas the burden of the developmental expenditure and social services, *e g.* health, education, irrigation, etc., is on the states.''

This is very important. I want to know what exactly is the position in regard to this aspect. I want to know what have you done? You must fight it out with the Centre. The direction must be to get more from the Centre, particularly for education and health. Education is not the only job of the State Government, but it is a job of the Centre also. Under these circumstances, why not the State Government see and get more funds from the Centre for this? ಹೀಗಿರಬೇಕಾದರೆ ಅದರಂತೆ ಮಾಡದೇ ಇರುವುದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ನಾನು ಹೇಳುವುದು ಏನೆಂದರೆ ನಮ್ಮ ಕಿಸೆಗೆ ಕೈ ಹಾಕಬೇಡಿ; ನಮ್ಮಿಂದ ಅವರು ಏನು ತೆಗೆದುಕೊಂಡು ಹೋಗುತ್ತಾರೆ ಅದನ್ನು ಅವರಿಂದ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಈ ಒಂದು ದೃಷ್ಟಿಕೋನ ಸರಿಯೆಂದು ಹೇಳುತ್ತೇನೆ. ಅಷ್ಟೇ ಅಲ್ಲ ಅವರು ಇನ್ನು ಮುಂದಕ್ಕೆ ಏನು ಹೇಳುತ್ತಾರೆ ಎಂದರೆ ಫೈನಾನ್ಸ್ ಕಮಿಷನ್‌ನವರು ಸೇರಿ ಮಾಡಿಬಿಟ್ಟಿದ್ದಾರೆ, ಆದುದರಿಂದ ನಮಗೆ ಸರಿಯಾದ ನ್ಯಾಯ ದೊರಕುತ್ತದೆ ಎಂದು ಹೇಳುವುದಕ್ಕೆ ಅವರೇ ಉತ್ತರವನ್ನು ಕೊಟ್ಟಿದ್ದಾರೆ. ಅದು ಏನೆಂದರೆ ;

"No satisfactory principle has so far been followed by the finance commissions for fixing the relative shares of the states in the distributable pools of Union tax-revenue. Even more, the treatment of all the separate tax revenue dealt in complete isolation from the totality of fiscal devolution to the states is irrational. Once the principle of fiscal needs is accepted, and the fiscal needs of individual states are carefully calculated, the question is one of reaching the total amount of devolution for each state a total that can be made up in several alternative ways."

ಇದನ್ನೇ ಹೆಚ್ಚು ಎಕ್ಸ್‌ಪ್ಯಾಂಡ್ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಮಂತ್ರಿಯವರ ಅಂಡರ್‌ಸ್ಟ್ಯಾಂಡಿಂಗ್ ಏನು ಎಂದರೆ ಡೆವಲಪ್‌ಮೆಂಟ್ ಆಗಬೇಕು, ತಕ್ಷಣ ತೆರಿಗೆಯನ್ನು ಹಾಕಿ ಜನರಿಂದ ಪಡೆಯೋಣ ಎಂದು ಅಂಡರ್‌ಸ್ಟ್ಯಾಂಡಿಂಗ್ ಏನು ಇದೆ ಅದು ಸರಿಯಾದುದಲ್ಲ. ಅದು ಹೋಗಬೇಕು ಎಂದು ಹೇಳುತ್ತೇನೆ. ಇದನ್ನು ಸೆಂಟ್ರಲ್‌ನಿಂದ ಪಡೆಯುವುದಕ್ಕೆ ಪ್ರಯತ್ನಪಡಬೇಕು. ಲೇಟೆಸ್ಟ್ ಫೈನಾನ್ಸ್ ಕಮಿಷನ್ ರಿಪೋರ್ಟಿನಲ್ಲಿ ಸ್ಪಷ್ಟವಾಗಿ ಏನು ಗೊತ್ತಾಗುತ್ತದೆ ಎಂದರೆ ಬೇರೆ ಎಲ್ಲಾ ರಾಜ್ಯಗಳೂ ನಮ್ಮ ರಾಜ್ಯಕ್ಕಿಂತ ಹೆಚ್ಚಾಗಿ ಸೆಂಟ್ರಲ್‌ನಿಂದ ಪಡೆದಿದ್ದಾರೆ. ಅದರ ಮೇಲೆ ಏನಾಗಿದೆ ಎಂದರೆ ಪಾಪ್ಯುಲೇಷನ್ ಕನ್ಸಿಡರೇಷನ್ಸ್ ಮತ್ತು ಬೇರೆ ಬೇರೆ ಕನ್ಸಿಡರೇಷನ್ಸ್ ಇವೆ.

ನಾವು ಎಷ್ಟು ಟ್ಯಾಕ್ಸಸ್ ವಸೂಲ್ಮಾಡುತ್ತೇವೆಯೋ ಅದರ ಮೇಲೆ ಹೊಂದಿಕೊಂಡಿವೆ ಎಂದು ಹೇಳಬಹುದು. ನಮ್ಮ ರಾಜ್ಯಕ್ಕೆ ಎಷ್ಟು ಹಣ ಬರಬೇಕೋ ಅಷ್ಟು ಬರುತ್ತಿಲ್ಲವೆಂದು ನನ್ನ ಅಭಿಪ್ರಾಯ. ಒಂದು ವೇಳೆ ಅಲ್ಪಸ್ವಲ್ಪ ಬರುತ್ತಿದ್ದರೂ ನಮ್ಮ ಅವಶ್ಯಕತೆ ಪೂರೈಸುವಷ್ಟು ಹಣವನ್ನು ಸೆಂಟರ್‌ನಿಂದ ಪಡೆಯಲು ಮುಖ್ಯವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೇ ವಿನಹ ಜನಸಾಮಾನ್ಯರ ಮೇಲೆ ತೆರಿಗೆ ಹೊರಿಸುವ ವಿಚಾರವನ್ನು ಸರ್ಕಾರದವರು ಕೈಬಿಡಬೇಕೆಂದು ನಾನು ಸ್ಪಷ್ಟವಾಗಿ ಸೂಚಿಸಬಯಸುತ್ತೇನೆ. ಹರ್ಸ್ತಿ ಸೆಸ್ 5–10 ಪೈಸೆ ತಾನೇ ಎನ್ನಬಹುದು. ಆದರೆ ಜನಸಾಮಾನ್ಯರಿಗೆ ಇದನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಈಗ ಬೆಂಗಳೂರು ನಗರದಲ್ಲಿ 18 ಪೈಸೆ ಇದ್ದುದು 26 ಪೈಸೆ ಆಗಿದೆ. ಇದರಿಂದಾಗಿ ನಗರದಲ್ಲಿರತಕ್ಕ ಮಧ್ಯಮ ಹಾಗೂ

ಶ್ರೀಮಂತ ವರ್ಗದ ಜನರಿಂದ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಆದರೆ ಶ್ರೀಮಂತರಿಂದ ವಿರೋಧ ಕಟ್ಟಿಕೊಂಡರೆ ತೊಂದರೆ ಇಲ್ಲ; ಏಕೆಂದರೆ ನೀವು ಶ್ರೀಮಂತರೆ. ನಗರಗಳಲ್ಲಿ ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶ್ರೀಮಂತರ ಮೇಲೆ ಬೇಕಾದರೆ ಈ ತೆರಿಗೆ ಹಾಕಿ, ನಾನು ಅದಕ್ಕೆ ಬೇಡ ಅನ್ನುವುದಿಲ್ಲ. ಇವತ್ತು ಶ್ರೀಮಾನ್ ಕೆ. ಎನ್. ರಾಜ ಎಂಬುವರು ಅಗ್ರಿಕಲ್ಚರಲ್ ಡಿಫಿಕಲ್ಟಿ ಯಾವ ರೀತಿ ಇದೆ ಎಂಬ ಬಗ್ಗೆ ಒಂದ ಪುಸ್ತಕವನ್ನು ಬರೆದಿದ್ದಾರೆ, ಆದರೆ ಅವರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ಧೋರಣೆ ಏನೆಂದರೆ ಮುಖ್ಯವಾಗಿ ಮಧ್ಯಮ ವರ್ಗದ ಜನರು ವಿರೋಧ ಕಟ್ಟಿಕೊಳ್ಳುತ್ತಾರೆ. ಸಾಮಾನ್ಯ ನೌಕರರು, ಸರ್ಕಾರಿ ನೌಕರರು ಅಥವಾ ಖಾಸಗೀ ನೌಕರರು ಯಾರೇ ಆಗಲಿ ನಗರಗಳಲ್ಲಿ ಮನೆ ಕಟ್ಟಿಕೊಂಡಿರಬಹುದು ಮತ್ತು ಬರುವ ವರಮಾನ ಸಾಕಾಗದೆ ಮನೆಗಳನ್ನು ಬಾಡಿಗೆಗೆ ಕೊಟ್ಟಿರಬಹುದು, ಅಂಥವರು ಸಹ ಇವತ್ತಿನ ದಿವಸ, ವಿರೋಧ ಕಟ್ಟಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಬಂದಿರ ಬೇಕಾದರೆ ಅವರ ಮೇಲೆ ವಿರೋಧ ಕಟ್ಟಿಕೊಂಡರೆ ಅವರನ್ನು ಯಾರ ಕೈಗೆ ಕೊಡಕೂಡದೋ ಅವರ ಕೈಗೆ ಕೊಡುತ್ತಾ ಬಹಳ ತೊಂದರೆಗೆ ಈಡು ಮಾಡುತ್ತಿದ್ದೀರಿ; ಮಧ್ಯಮ ವರ್ಗದ ಜನತೆಗೆ ಎಲ್ಲಾ ವಿಧವಾದ ತೆರಿಗೆಗಳನ್ನು ಹೇರಿದ್ದೀರಿ. ನನ್ನ ಅಭಿಪ್ರಾಯದಲ್ಲ ಇದು ತೀರ ಒಂದು ಧೋರಣೆ; ಸರ್ಕಾರದವರು ನಡೆಯುತ್ತಿರುವ ರೀತಿ ಮತ್ತು ತೆರಿಗೆಗಳನ್ನು ಹಾಕುವ ರೀತಿ ಸರಿಯಾದುದಲ್ಲ ವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇನ್ನೊಂದು ಅಂಶವನ್ನು ಹೇಳಬೇಕೆಂದರೆ, ಸರ್ಕಾರ ವಿದ್ಯಾಭ್ಯಾಸಕ್ಕಾಗಿ 1|2 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ; ಆದರೆ ಇದು ಸರಿಯಾಗಿ ಖರ್ಚಾಗುತ್ತಿದೆಯೆ ? ಅದರಲ್ಲ ಎಷ್ಟು ಸರಿಯಾಗಿ ಖರ್ಚಾಗುತ್ತಿದೆ. ಎಷ್ಟು ತೂತು ಬಿದ್ದು ಹೋಗುತ್ತಿದೆ, ಎಷ್ಟು ಕೊಂಡದಲ್ಲಿ ಹೋಗುತ್ತಿದೆ? ಆ ರೀತಿ ಹೋಗದಹಾಗೆಮಾಡಿ ಸರಿಯಾದ ರೀತಿ ಯಲ್ಲಿ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ನನಗೆ ತಿಳಿದ ಮಟ್ಟಿಗೆ ಬೇಕಾದಷ್ಟು ಹೋಗುತ್ತಿದೆ. ಉದಾಹರಣೆಗೆ ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಖಾಸಗೀ ಶಾಲೆಗಳಲ್ಲಿ ಹಣವನ್ನು ವಸೂಲ್ಮಾಡುತ್ತಿದ್ದಾರೆ ; ಉಪಧ್ಯಾಯರುಗಳಿಗೆ ಅನ್ಯಾಯ ಮಾಡುತ್ತಿದ್ದಾರೆ, ವಿದ್ಯಾ ರ್ಥಿಗಳಿಗೂ ಸಹ ಅನ್ಯಾಯವಾಗುತ್ತಿದೆ. ನೀವು ಕೊಡುತ್ತಿರುವ ಗ್ರಾಂಟನ್ನು ವಿದ್ಯಾಭ್ಯಾಸಕ್ಕೆ ಸರಿಯಾಗಿ ಉಪಯೋಗಿಸುತ್ತಿಲ್ಲ ವಿಧಾನಸೌಧದಲ್ಲ ಕೆಲಸಮಾಡುವ ಅಟೆಂಡರ್ ಅಲ್ಲಿ ಸಂಬಳ ತೆಗೆದುಕೊಳ್ಳುತ್ತಾನೆ. ಅದಕ್ಕೆ ಸರ್ಕಾರದವರು ಸಹ ಗ್ರಾಂಟನ್ನು ಕೊಡುತ್ತಾರೆ. ಈ ವಿಚಾರಗಳೆಲ್ಲ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರಿಗೆ ಚನ್ನಾಗಿ ಗೊತ್ತಿದೆ. ಇದನ್ನೆಲ್ಲ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಮಾತನಾಡೋಣ. ಒಟ್ಟಿನಲ್ಲಿ ಹೇಳುವುದಾದರೆ ನೀವು ಕೊಡುತ್ತಿರುವ ಹಣವನ್ನು ಮತ್ತು ಅವರು ಪಡೆಯುತ್ತಿರುವ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಒಮ್ಮೆ ಮಾನ್ಯ ಮಲಿಕಾರ್ಜುನ ಸ್ವಾಮಿಯವರು ನನ್ನ ಕ್ಷೇತ್ರಕ್ಕೆ ಬಂದಿದ್ದರು. ಅಲ್ಲಿನ ಕೋದಂಡರಾಮಪುರದಲ್ಲಿ ಒಂದು ಸರ್ಕಾರಿ ಶಾಲಾ ಕಟ್ಟಡವನ್ನು ಕಟ್ಟಿದ್ದಾರೆ. ಆ ಕಟ್ಟಡದ ಹಂಚು ಎಲ್ಲಾ ತೂತು ಆಗಿ ಮಳೆಗಾಲದಲ್ಲ ಒಳಗಡೆ ಎಲ್ಲ ನೀರು ಬರುತ್ತದೆ ; ಕುಡಿ ಯುವ ನೀರಿನ ವ್ಯವಸ್ಥೆ ಇಲ್ಲ, ಲ್ಯಾಟ್ರಿನ್ ಇಲ್ಲ. ಅಲ್ಲಿಸುಮಾರು 600 ಚಿಲ್ಲರೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆ ಕಟ್ಟಡಕ್ಕೆ ಕೊಟ್ಟ ಹಣ ಎಲ್ಲಿ ಹೋಯಿತೆಂದರೆ ಸರ್ಕಾರದವರು ಹಣ ವನ್ನೇ ಕೊಟ್ಟಿಲ್ಲ. 23 ಸಾವಿರ ರೂಪಾಯಿ ಬಾಡಿಗೆಯನ್ನು ಯಾರಿಗೋ ಕೊಡ ಬೇಕಾದುದನ್ನು ಸರ್ಕಾರದವರು ಇನ್ನು ಕೊಟ್ಟಿಲ್ಲ. ಈ ಬಗ್ಗೆ ಸರ್ಕಾರದವರಿಗೆ ಹೇಳಿ ಹೇಳಿ ಸಾಕಾಯಿತು. ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಸಹ ಕೊಡುತ್ತೇವೆಂದು ಹೇಳಿದರೂ ಇದುವರೆಗೂ ಕೊಟ್ಟಿಲ್ಲ. ಪರಿಸ್ಥಿತಿ ಹೀಗಿರಬೇಕಾದರೆ ನೀವು ಜನಸಾಮಾನ್ಯರಿಂದ ಪಡೆದ ಹಣವನ್ನು ಒಳ್ಳೆಯದಕ್ಕೆ ಉಪಯೋ ಗಿಸುತ್ತೀರೆಂದು ಹೇಗೆ ನಂಬುವುದು ? ಹಾಗಾದರೆ ಹಣ ಕೊಡುವುದಕ್ಕೆ ಜನ ತಯಾರಿಲ್ಲ ಎಂದು ಅಲ್ಲ, ಕೊಡಬಹುದು. ಆದರೆ ಕೊಟ್ಟ ಹಣವನ್ನು ಸದ್ವಿನಿಯೋಗ ಮಾಡಬೇಕು, ಇದೇ ರೀತಿ ಇಂಥ ನೂರಾರು ನಿದರ್ಶನಗಳನ್ನು ಕೊಡಬಹುದು. ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಎಲ್ಲ ಕಡೆಯೂ ಇದೆ. ಹೀಗಾಗಿ ಕೊಡತ್ತಿರುವ ಹಣವನ್ನು ಸರಿಯಾಗಿ ಉಪಯೋಗಿಸದೆ ಸೋರಿ ಹೋಗುತ್ತಿರಬೇಕಾದರೆ ಪುನ: ಜನಸಾಮಾನ್ಯರ ಮೇಲೆ ತೆರಿಗೆಹಾಕಿ ಹಣವಸೂಲ್ಮಾಡುವುದಕ್ಕೆ ಒಪ್ಪಿಗೆ ಕೊಡಿ ಎಂದು ಕೇಳಿದರೆ ಯಾವ ರೀತಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯ ? ಇವತ್ತಿನ ದಿವಸ ಕೇರ್ ಮಿಲ್ಕ್ ಫುಡ್ ಎಲ್ಲ ಎಲ್ಲಿ ಹೋಗುತ್ತಿದೆ? ಅದು ಚರಂಡಿಯಲ್ಲಿ ಹೋಗುತ್ತಿದೆ. ಅದಕ್ಕೂ ಸಹ ಒಂದು ನಿದರ್ಶನ ವನ್ನು ಕೊಡುತ್ತೇನೆ. ಕೇರ್ ಮಿಲ್ಕ್ ಫುಡ್ ಏನು ಇದೆ ಅದನ್ನು ಶಾಲೆಗಳಲ್ಲಿ ಹುಡುಗರಿಗೆ

ಮಧ್ಯಾಹ್ನದ ಉಪಹಾರವಾಗಿ ಕೊಡಬೇಕೆಂದು ಇದೆ. ನನ್ನ ಕ್ಷೇತ್ರದಲ್ಲಿ ಈ ಮಿಡ್ ಡೇ ಮೀಲ್ಸನ್ನು ಶಾಲಾ ಹುಡುಗರಿಗೆ ಕೊಡದೆ ಯಾರೋ ಕೆಲವರು ಶಾಮೀಲಾಗಿ ಶಿಶುವಿಹಾರಕ್ಕೆ ಕಳುಹಿಸುತ್ತಾರೆ. ಅಲ್ಲಿ ಅವರು ಅದನ್ನು ಮಾರಿಕೊಂಡು ದುಡ್ಡು ಮಾಡಿಕೊಳ್ಳುತ್ತಾರೆ. ಒಟ್ಟಿನಲ್ಲಿ ಅದು ಶಾಲಾ ಬಾಲಕರಿಗೂ ಸಿಗುವುದಿಲ್ಲ, ಶಿಶುವಿಹಾರದ ಮಕ್ಕಳಿಗೂ ಸಿಗುವುದಿಲ್ಲ. ಇದನ್ನು ಮಾಡತಕ್ಕವರು ಬಹಳ ಪವರ್‌ಫುಲ್ ಜನ. ಅವರು ಫೋನ್ ಮಾಡಿದರೆ ಸಾಕು ಮಂತ್ರಿಗಳು ಹೇಳಿದಹಾಗೆ ಕುಣಿಯುತ್ತಾರೆ. ಈ ತರಹದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇದೆ. ಈ ಸಂದರ್ಭದಲ್ಲಿ ನಾನೂ ಕೂಡ ಪ್ರಯಾಸ ಪಟ್ಟು ಶಿಶುವಿಹಾರ ಸರಿಯಾಗಿ ನಡೆಯಬೇಕೆಂದು ಜೊತೆಗೆ 1000 ಮಂದಿಯನ್ನು ಕರೆದುಕೊಂಡು ಸತ್ಯಾಗ್ರಹ ಮಾಡಿದ್ದಕ್ಕೆ ಕೇಸ್ ಹಾಕಿ ಆ ಕೇಸು ಇನ್ನೂ ನಡೆಯುತ್ತಿದೆ. ಇದರಲ್ಲಿ ರಘುಪತಿ, ಯೂತ್ ಕಾಂಗ್ರೆಸ್ ಲೀಡರ್ ಮತ್ತು ಟಿ. ರಾಜಗೋಪಾಲ್‌ರವರು ಸಹ ಸೇರಿದ್ದಾರೆ. ಈ ರೀತಿಯಾಗಿ ಅವ್ಯವಹಾರಗಳು ನಡೆಯುತ್ತಿರ ಬೇಕಾದರೆ ಅವುಗಳನ್ನು ನಿಲ್ಲಿಸುವುದು ಬಿಟ್ಟು ಪುನ: ತೆರಿಗೆ ಹಾಕಿ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರೆ ನನಗೆ ಖಂಡಿತಾ ನಂಬಿಕೆ ಬರುವುದಿಲ್ಲ. ಮೊದಲು ನೀವು ತೆರಿಗೆ ಹಾಕದೆ ಕೆಲಸ ಮಾಡಿ ಇನಷ್ಟು ತೆರಿಗೆ ಹಾಕಿದರೂ ನಾವು ಖಂಡಿತಾ ಕೊಡಲು ಸಿದ್ಧರಿದ್ದೇವೆ. ಆ ಧೋರಣೆ ಇರಬೇಕೇ ವಿನಹ ಈ ಧೋರಣೆ ಸರಿಯಾದುದಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಜಾಸ್ತಿ ಹಣವನ್ನು ಅಂದರೆ 4 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿರುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಏಕೆಂದರೆ ಇವತ್ತಿನ ಬೆಲೆಯಲ್ಲಿ ಅಷ್ಟು ಹಣ ಬೇಕಾಗುತ್ತದೆ. ಆದರೆ ಅದಕ್ಕಾಗಿ ತೆರಿಗೆಯನ್ನು ಪಡೆಯುವುದು ನನಗೆ ನ್ಯಾಯವಾಗಿ ಕಾಣುವುದಿಲ್ಲ. ಎಜುಕೇಶನ್ ಸೆಸ್ ಮತ್ತು ಹೆಲ್ತ್ ಸೆಸ್ ಮೊದಲೇ ನಿಗದಿ ಆಗಿತ್ತು. ಅದನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ ನಿಮ್ಮ ಕಣ್ಣು ಏಕೆ ಬಿತ್ತೋ ಗೊತ್ತಾಗುವುದಿಲ್ಲ. ಅದಕ್ಕೆ ಬದಲು ಸೆಸ್ಸನ್ನು ಬೇರೆ ರೂಪದಲ್ಲಿ ಹಾಕುವುದಕ್ಕೆ ಆಗುವುದಿಲ್ಲವೆ ? ನಮ್ಮ ರಾಜ್ಯದಲ್ಲಿ ಕೇಂದ್ರಸರ್ಕಾರದ ಕೈಗಾರಿಕೆಗಳಿವೆ, ರಾಜ್ಯ ಸರ್ಕಾರದ ಕೈಗಾರಿಕೆಗಳಿವೆ, ಖಾಸಾಗೀ ಕೈಗಾರಿಕೆಗಳಿವೆ. ನಮ್ಮ ಬೆಂಗಳೂರಿನಲ್ಲಿ ಹೆಚ್.ಎಂ.ಟಿ. ಹೆಚ್.ಎ.ಎಲ್., ಕಿರ್ಲೋಸ್ಕರ್‌ನಂತಹ ಇನ್ನೂ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳಿವೆ. ಅಂತಹ ಕೈಗಾರಿಕಾ ಮಾಲೀಕರು ಎಷ್ಟು ಲಾಭ ಸಂಪಾದನೆ ಮಾಡುತ್ತಾರೆಂಬುದನ್ನು ಲೆಕ್ಕಾಚಾರ ಹಾಕಿ ಅದರ ಆಧಾರದ ಮೇಲೆ ಸೆಸ್ ಹಾಕಿದರೆ ಎಷ್ಟು ಹಣ ದೊರೆಯುತ್ತದೆ ? ಬೇರೆ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹಾಕಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಕನ್‌ಸ್ಯೂಮರ್ ಗೂಡ್ಸ್ ತಯಾರಾಗತಕ್ಕ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹಾಕಿದರೆ ಬಳಕೆಯ ವಸ್ತುಗಳ ಬೆಲೆ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗುತ್ತದೆ. ಆದರೆ ಬೇರೆ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹಾಕಿದರೆ ಬಳಕೆಯ ವಸ್ತುಗಳ ಬೆಲೆ ಜಾಸ್ತಿಯಾಗುತ್ತದೆ ಎಂಬುದನ್ನು ನಾನು ನಂಬುವುದಿಲ್ಲ. ಟ್ರಾನ್ಸ್‌ಫಾರ್ಮರ್ಸ್ ಮೆಷನರಿಗಳು ಮತ್ತು ಮೋಟಾರುಗಳು ಇಂಥಾ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹಾಕಿದರೆ ಅವು ಜನಸಾಮಾನ್ಯರ ಮೇಲೆ ಬೀಳುವುದಿಲ್ಲ. ಆ ತರಹ ಒಂದು ದಾರಿಯನ್ನು ಹಿಡಿಯದೇ ಈ ದಾರಿಯನ್ನು ಹಿಡಿದಿರುವುದು ಸರಿಯಲ್ಲ. ತಮ್ಮ ಥಿಯರಿ, ಪ್ರಿನ್ಸಿಪಲ್ ಮತ್ತು ಪ್ರಾಕ್ಟೀಸಿಗೂ ಅರ್ಥಾರ್ಥ ಸಂಬಂಧ ಇಲ್ಲ. ತಾವು ಸೋಷಿಯಾಲಿಜಂ ತರಬೇಕು ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆದರೆ ಸೋಷಿಯಾಲಿಜಂ ತರುವುದಕ್ಕೆ ಬದಲಾಗಿ ಜನಸಾಮಾನ್ಯರ ಮೇಲೆ ತೆರಿಗೆಯನ್ನು ಹೊರಿಸುವುದು ಆಗಿದೆ. ಲಕ್ಷಾಂತರ ರೂಪಾಯಿಗಳನ್ನು ಹೊಂದಿರುವವರ ಮೇಲೆ ತೆರಿಗೆಯನ್ನು ಹಾಕಿ, ಬ್ಲಾಕ್ ಮಾರ್ಕೆಟಿಯರ್ಸ್ ಮೇಲೆ, ಸ್ಮಗ್ಲರ್ಸ್ ಮೇಲೆ ಬೇಕಾದರೆ ತೆರಿಗೆಯನ್ನು ಹಾಕಿರಿ. ಆದರೆ ಜನಸಾಮಾನ್ಯರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಹೋಗಬೇಡಿ ಹೆಲ್ತ್ ಸೆಸ್ ಮತ್ತು ಎಜುಕೇಷನ್ ಸೆಸ್ಸನ್ನು ಕೊಡುವವರು ಯಾರು ? ಜನಸಾಮಾನ್ಯರು ಕೊಡುತ್ತಾರೆ. ಇದನ್ನು ಜನಸಾಮಾನ್ಯರು ಕೊಡುವುದಿಲ್ಲ, ಎಂದು ಹೇಳಿ ನಾನು ನನ್ನ ವಾದವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಈಗ ಸರ್ಕಾರದವರು ತೆರಿಗೆಯನ್ನು ಹಾಕತಕ್ಕ ವಿಧಾನ ಏನಿದೆ ಇದು ಸೋಷಿಯಾಲಿಜಂ ನೀತಿಗೆ ವಿರೋಧವಾಗಿದೆ. ಸೋಷಿಯಾಲಿಜಂ ತತ್ವವನ್ನು ಅನುಸರಿಸತಕ್ಕ ದೇಶವನ್ನು ಮಾನ್ಯ ಹಣಕಾಸಿನ ಮಂತ್ರಿಗಳು ನೋಡಿದ್ದಾರೆ. ಆ ದೇಶದಲ್ಲಿ ಒಂದೇ ಒಂದು ಟ್ಯಾಕ್ಸ್ ಮಾತ್ರ ಹಾಕುತ್ತಾರೆ. ಅದು ಟರ್ನ್‌ಓವರ್ ಟ್ಯಾಕ್ಸ್ ನಮ್ಮ ಹಾಗೆ ನೂರಾರು ಟ್ಯಾಕ್ಸ್ ಹಾಕುವುದಿಲ್ಲ. ನಮ್ಮ ದೇಶದಲ್ಲಿ ಇನ್‌ಕಂ ಟ್ಯಾಕ್ಸ್, ವೆಲ್ತ್ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್, ಹೆಲ್ತ್ ಟ್ಯಾಕ್ಸ್, ಎಜುಕೇಷನ್ ಟ್ಯಾಕ್ಸ್ ಕಾಂಗ್ರೆಸ್ ಟ್ಯಾಕ್ಸ್ ಎಂದು ನೂರಾರು

ಟ್ಯಾಕ್ಸ್ ಹಾಕುವುದಿಲ್ಲ. ಟರ್ನ್‌ಓವರ್ ಟ್ಯಾಕ್ಸ್ ಒಂದು ಪರ್ಸೆಂಟ್ ಮಾತ್ರ ಇದೆ. The price is taken care of in such a manner that the common man does not suffer. Prices of these commodities have not changed in the socialist contries for the past twenty five years. ಆದ್ದರಿಂದ ಈ ಒಂದು ದಾರಿಯಲ್ಲಿ ಇವರು ಹೋಗಿದ್ದರೆ ಇವರಿಗೆ ನಾನು ಶಹಭಾಶ್‌ಗಿರಿಯನ್ನು ಕೊಡುತ್ತಿದ್ದೆ. ಆದರೆ ಇವರು ಆ ದಾರಿಯಲ್ಲಿ ಹೋಗದೆ ಅಡ್ಡದಾರಿಯಲ್ಲಿ ಹೋಗಿ ಜನಗಳಿಗೆ ತೆರಿಗೆಯನ್ನು ಹಾಕುವುದು ಸರಿಯಲ್ಲ. ನ್ಯಾಯವಲ್ಲ. ಇವರ ಅಪ್ರೋಚ್ ಸರಿಯಿಲ್ಲ. ಇದು ಜನಸಾಮಾನ್ಯರ ಮೇಲೆ ಬೀಳುವ ತೆರಿಗೆ ಇದನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ.—(ನಾಗಮಂಗಲ) ಸನ್ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಅರ್ಥಸಚಿವರು ಪ್ರಾಸ್ತಾವಿಕವಾಗಿ ಅವರ ಭಾಷಣದಲ್ಲಿ 2 ಕೋಟಿ ರೂಪಾಯಿಗಳನ್ನು ಈ ಸೆಸ್ಸಿನಿಂದ ನಿರೀಕ್ಷಣೆ ಮಾಡುತ್ತೇವೆ, ನಿರೀಕ್ಷಣೆ ಮಾಡತಕ್ಕ ಸೆಸ್ಸಿನ ಚಿತ್ರ ಈ ರೀತಿ ಇದೆ 40 ಲಕ್ಷ ರೂಪಾಯಿಗಳನ್ನು ಭೂಕಂದಾಯದ ಮುಖ್ಯಾಂತರ ಕೊಡತಕ್ಕ ಸೆಸ್ಸಿನಿಂದ ನಾವು ನಿರೀಕ್ಷಣೆ ಮಾಡುತ್ತೇವೆ, ಉಳಿದದ್ದನ್ನು ಆಸ್ತಿ ತೆರಿಗೆ ವಗೈರೆ ಬೇರೆ ಮೂಲದಿಂದ ಬರತಕ್ಕಂಥಾದ್ದು ಎಂದು ಹೇಳಿದರು. ನಾನಾದರೂ ಮಾನ್ಯ ಅರ್ಥ ಮಂತ್ರಿಗಳಲ್ಲಿ ಬಿನ್ನವಿಸಿಕೊಳ್ಳುವುದು ಇಷ್ಟೇ. ನಮಗೆ ಸ್ವಾತಂತ್ರ್ಯ ಬಂದು 20 ವರ್ಷಗಳಾದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕ ರೈತಾಪಿ ಕೆಲಸ ಮಾಡತಕ್ಕ ಜನಗಳ ಸ್ಥಿತಿ ಸ್ವಲ್ಪವೂ ಉತ್ತಮವಾಗಿಲ್ಲ. ಆಗಾಗ್ಯೆ ಸರ್ಕಾರದವರು ಪ್ರಗತಿಪರವಾದ ಶಾಸನವನ್ನು ತರುತ್ತೇವೆ ಎಂದು ಹೇಳಿ ಜನಗಳ ಮೇಲೆ ತೆರಿಗೆಯನ್ನು ಹೇರುವುದರಿಂದ ಜನಗಳು ಅವುಗಳ ಒಂದು ಹೊಡೆತಕ್ಕೆ ಸಿಕ್ಕಿ ಜರ್ಜಿತರಾಗಿದ್ದಾರೆ. ರೈತರಿಗೆ ನಾನಾ ವಿಧವಾದ ತೆರಿಗೆಗಳನ್ನು ಹೊರಿಸುವುದರಿಂದ ಅವರು ಇವೊತ್ತು ನಿಜವಾಗಿಯೂ ಸಹ ಜೀವನದಲ್ಲಿ ನಿರಾಶರಾಗಿದ್ದಾರೆ ; ಹತಾಶರಾಗಿದ್ದಾರೆ, ಅವರಿಗೆ ಭವಿಷ್ಯವಿಲ್ಲ ಎಂದು ತಿಳಿದುಕೊಂಡಿದ್ದಾರೆ. ಆದುದರಿಂದ ರೈತನ ಮೇಲೆ ಹೇರತಕ್ಕ ತೆರಿಗೆ ಏನಿದೆ ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಸರ್ಕಾರದವರ ಉದ್ದೇಶವೇನೋ ಶ್ಲಾಘನೀಯವಾಗಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳು ಬೇಕು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು ಬಹಳ ಹೀನಸ್ಥಿಯಲ್ಲಿವೆ. ಆ ಶಾಲೆಗಳಲ್ಲಿ ಹೆಚ್ಚಿಗೆ ಕೇವಲ ಕೆಳದರ್ಜೆಯಲ್ಲಿರತಕ್ಕವರ ಮಕ್ಕಳು ಓದುತ್ತಿದ್ದಾರೆ. ಕೆಲವು ಕಡೆ ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ ಮಕ್ಕಳನ್ನು ಕೂರಿಸಿ ಪಾಠ ಹೇಳುತ್ತಿದ್ದಾರೆ. ದೇವಸ್ಥಾನಗಳಲ್ಲಿ ಶಾಲೆಗಳು ನಡೆಯುವ ಕಡೆ ಸವರ್ಣಿಯರನ್ನು ಒಳಗಡೆ ಬಿಡುತ್ತಾರೆ. ಹರಿಜನರ ಮಕ್ಕಳನ್ನು ಒಳಗಡೆ ಬಿಡುವುದಿಲ್ಲ. ಆ ಒಂದು ದೋಷ ಇದೆ. ಇದನ್ನು ನಾನು ಕಣ್ಣಾರೆ ಕಂಡು ಕೆಲವು ಕಡೆ ಗಲಾಟೆ ಮಾಡಿ ಆ ಹರಿಜನರ ಮಕ್ಕಳನ್ನು ಒಳಗಡೆ ಬಿಡಿಸಿದ್ದೇನೆ. ಎಲ್ಲಾ ಮಕ್ಕಳೂ ಒಂದೇ ಕಡೆ ಕುಳಿತುಕೊಂಡು ಒಂದು ಒಳ್ಳೆಯ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳು ಒಳ್ಳೆಯ ಜಾಗದಲ್ಲಿ ನಿರ್ಮಾಣವಾಗಬೇಕು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಬೇಕಾದಂತಹ ಸಂಪನ್ಮೂಲಗಳನ್ನು ಬೇರೆ ಕಡೆಯಿಂದ ಪಡೆಯಬಹುದಾಗಿತ್ತು. ನಮ್ಮ ದೃಷ್ಟಿಯಿಂದ ಈ ಒಂದು ತೆರಿಗೆ ರೈತನ ಮೇಲೆ ಬೀಳಬಾರದಾಗಿತ್ತು ಎಂದು ನನ್ನ ಅಭಿಪ್ರಾಯ. ಇದರಲ್ಲಿ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಒಂದು ಶಾಲಾ ಕಟ್ಟಡಕ್ಕೆ ಕೊಡತಕ್ಕ ಒಂದು ಭರವಸೆಯನ್ನು ಇಟ್ಟಿದ್ದಾರೆ. ನಾನು ಇದನ್ನು ಸ್ವಾಗತಿಸಿ ಒಂದು ವಿಚಾರವನ್ನು ತಿಳಿಸುತ್ತೇನೆ ಸರ್ಕಾರದವರು 4½ ಸಾವಿರ ರೂಪಾಯಿಗಳ ಹಣ ಸಹಾಯವನ್ನು ಕೊಡುವುದರ ಜೊತೆಗೆ ಯಾವ ಹಳ್ಳಿಯಲ್ಲಿ ಸ್ಥಳೀಯವಾಗಿ ಹೊಂದಿಕೊಂಡು ವಂತಿಕೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೋ ಅಂಥಾ ಡೆಕ ತಾಲ್ಲೂಕು ಅಭಿವೃದ್ಧಿ ಮಂಡಲಿ ಪಂಚಾಯಿತಿಗಳು ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಅವಕಾಶವಿದ್ದರೆ ಸಾಧ್ಯವಿದ್ದರೆ ಅದನ್ನು ಅವರು ಕೊಡುವುದಕ್ಕೆ ಅನುವು ಮಾಡಿಕೊಡಬೇಕು. ಆದರೆ ಅಭಿವೃದ್ಧಿ ಇಲಾಖೆಯವರ ಸರ್‌ಕ್ಯುಲರ್ ಪ್ರಕಾರ ಆ ಹಣವನ್ನು ಕೊಡುವುದಕ್ಕೆ ನಿಷೇಧ ಇದೆ. ಅವರು ಅದನ್ನು ಕೊಡಕೂಡದು ಎಂದು ಮಾಡಿದ್ದಾರೆ. ಆದಕಾರಣ ಈ ನಿಷೇಧವನ್ನು ಹಾಕಿರತಕ್ಕ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡರೆ ಸ್ಥಳೀಯ ಸಂಸ್ಥೆಗಳೂ ಸಹ ಶಾಲಾ

ಕಟ್ಟಡಗಳ ಒಂದು ನಿರ್ವಹಣ ಕಾರ್ಯದಲ್ಲಿ ಸಹಭಾಗಿಗಳು ಆಗಬೇಕು. ಪಾಲುಗಾರರು ಆಗಬೇಕು. ಅದಕ್ಕೆ ಯಾವ ಅಡಚಣೆಯೂ ಇಲ್ಲದಂತೆ ಅನುವು ಮಾಡಿಕೊಡಬೇಕು. ಆ ರೀತಿ ಅನುವು ಮಾಡಿಕೊಡುವುದಾದರ ಹೆಚ್ಚಿನ ಪ್ರಗತಿ ಆಗುವುದಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಶಾಲೆಗಳಲ್ಲ ಮಧ್ಯಾಹ್ನದ ವೇಳೆಯಲ್ಲಿ ಹಂಚತಕ್ಕ ಆಹಾರದ ವಿಷಯದಲ್ಲ ಹೇಳುವುದಾದರೆ ಹಲವಾರು ದಿವಸಗಳ ತನಕ ನಮ್ಮ ವಿದ್ಯಾ ಇಲಾಖೆಯಲ್ಲ ಒಂದು ವಿಶಿಷ್ಟವಾದ ಖ್ಯಾತಿ ಇತ್ತು. ಆಗ ಭ್ರಷ್ಟಾಚಾರ ಆ ಒಂದು ಇಲಾಖೆಯನ್ನು ಪ್ರವೇಶ ಮಾಡಿರಲಿಲ್ಲ. ಈಗ ಏನಾಗಿದೆ ಎಂದರೆ ಕೇರ್ ಸಂಸ್ಥೆಗಳು ಶಾಲೆಗಳಿಗೆ ಕೊಡತಕ್ಕ ಆಹಾರ ಪದಾರ್ಥಗಳು 100ಕ್ಕೆ 50ರಷ್ಟು ಭಾಗ ಅಂಗಡಿಗಳನ್ನು ಸೇರುತ್ತದೆ. ಈ ರೀತಿಯಾಗುವುದಕ್ಕೆ ಉಪಾಧ್ಯಾಯರು ಕಾರಣವಲ್ಲ. ಉಪಾಧ್ಯಾಯರ ಮೇಲ್ವಿಚಾರಣೆಯನ್ನು ಮಾಡುವವರು ಸೇರಿಸಿಕೊಂಡು ಕೆಲಸ ಮಾಡುವುದರಿಂದ ಇದು ನಡೆಯುತ್ತಿದೆ. ಕೇರ್ ಸಂಸ್ಥೆಯವರು ಕೊಡತಕ ಎಣ್ಣೆ, ರವೆ ಇತ್ಯಾದಿ ಆಹಾರ ಪದಾರ್ಥಗಳ ಕೆಲವರ ಕೃಪಾಡದಿಂದ ಅಂಗಡಿಗಳಿಗೆ ಹೋಗುತ್ತದೆ ಇದನ್ನು ಬೇಕಾದರೆ ಪತ್ತೆ ಮಾಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಬೆಂಗಳೂರಿನಲ್ಲೇ ನಡೆಯುತ್ತದೆ.

ಶ್ರೀ ಎಚ್. ಟಿ ಕೃಷ್ಣಪ್ಪ.—ಎಲ್ಲಾ ಕಡೆಗಳಲ್ಲೂ ನಡೆಯುತ್ತದೆ. ಇಂಥಾ ಒಂದು ಭ್ರಷ್ಟಾಚಾರ ಈ ಇಲಾಖೆಯಲ್ಲಿ ನಡೆಯುತ್ತಿದೆ. ಹೊರವೇಶವರು ಮಕ್ಕಳಿಗೆ ಕೊಡತಕ್ಕ ಆಹಾರ ವಸ್ತುಗಳು ಈ ರೀತಿ ದುರುಪಯೋಗವಾಗುವುದಕ್ಕೆ ಅವಕಾಶವನ್ನು ಕೊಡಬಾರದು. ನಿಜವಾಗಿ ಯಾರು ಈ ರೀತಿ ಶಾಲಾ ಮಕ್ಕಳಿಗೆ ಕೊಡತಕ್ಕ ಆಹಾರ ಪದಾರ್ಥಗಳನ್ನು ದುರುಪಯೋಗ ಮಾಡುತ್ತಾರೆ ಅಂಥವರನ್ನು ಪತ್ತೆ ಹಚ್ಚಿ ಅವರು ಯಾರೇ ಆಗಿದ್ದರೂ ಸಹ ಅವರನ್ನು ತೀವ್ರವಾದ ರೀತಿಯಲ್ಲಿ ದಂಡಿಸಬೇಕು. ಕೇರ್ ಸಂಸ್ಥೆಯವರು ಕೊಡತಕ್ಕ ಆಹಾರ ವಸ್ತುಗಳನ್ನು ಹಂಚುವುದರಲ್ಲಿ ದುರುಪಯೋಗ ಮಾಡಿಕೊಂಡು ಯಾರು ಮನೆ ಮಠಗಳನ್ನು ಆಸ್ತಿಪಾಸ್ತಿಗಳನ್ನು ಮಾಡಿದ್ದಾರೆ. ಎಂಬುದನ್ನು ತಪಾಸಣೆ ಮಾಡಿದರೆ ಆಗ ನಿಜವಾದ ವಿಚಾರ ಗೊತ್ತಾಗುತ್ತದೆ.

3-00 P. M.

ಆದುದರಿಂದ ನಾನು ಹೇಳುವುದು ಏನೆಂದರೆ, ಭ್ರಷ್ಟಾಚಾರವನ್ನು ಪ್ರೋತ್ಸಾಹಿಸತಕ್ಕಂಥ ಯಾವುದೇ ಒಂದು ಕಾರ್ಯಕ್ರಮ ಎಷ್ಟೇ ಉತ್ತಮವಾದುದಾಲೀ, ಅದು ದೇಶಕ್ಕೆ ಒಳ್ಳೆಯದನ್ನು ಮಾಡತಕ್ಕದ್ದಲ್ಲ. ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ, ಎಷ್ಟೇ ಉದಾತ್ತವಾದ ಆದರ್ಶಗಳನ್ನು ಇಟ್ಟುಕೊಂಡು ಉತ್ತಮವಾದಂಥ ಕೆಲಸಗಳನ್ನು ಮಾಡಬೇಕು ಎಂದು ದೇಶದಲ್ಲಿ ಹೊರಟರೂ ಸಹ ಮಕ್ಕಳ ಆಹಾರದ ವಿಚಾರದಲ್ಲ ನಡೆಯತಕ್ಕ ಭ್ರಷ್ಟಾರದಿಂದ ಮಕ್ಕಳ ಮೇಲೂ ಆ ವಯಸ್ಸಿನಲ್ಲಿ ಪರಿಣಾಮ ಉಂಟಾಮತ್ತದೆ. ಮಕ್ಕಳ ಎದುರಿನಲ್ಲ ಇಂತಹ ಹೀನಕೃತ್ಯ ಮಾಡುವುದರಿಂದ ಪರೋಕ್ಷವಾಗಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಉಪಾಧ್ಯಾಯರುಗಳು ಮಕ್ಕಳ ಎದುರಿನಲ್ಲಿ ಒಳ್ಳೆಯದನ್ನು ಮಾಡಲಿ ಕೆಟ್ಟದ್ದನ್ನು ಮಾಡಲಿ ಕೆಟ್ಟದ್ದನ್ನೇ ಒಳ್ಳೆಯದು ಎಂದು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳತಕ್ಕಂತಹ ಸಂದರ್ಭ ಇರುವುದರಿಂದ ಇಂತಹ ಹೀನ ಕೃತ್ಯಗಳು ಆಗುವುದಕ್ಕೆ ಅವಕಾಶ ಕೊಡಬಾರದು. ಆದುದರಿಂದ ಶಾಲೆಗಳಲ್ಲಿ ಕೇರ್ ಸಂಸ್ಥೆಯ ಆಹಾರಪದಾರ್ಥಗಳನ್ನು ಹುಂಚುವ ಕಾಲದಲ್ಲಾಗಲೀ ಸ್ಥಳೀಯವಾಗಿ ಕೊಡತಕ್ಕಂಥ ಆಹಾರವನ್ನು ಹಂಚುವ ಕಾಲದಲ್ಲದಗಲೀ. ಅಗತಕ್ಕಂಥ ಭ್ರಷ್ಟಾಚಾರ ಏನಿವೆಯೋ ಅದನ್ನು ತಡೆಗಟ್ಟಬೇಕು. ಈ ಭ್ರಷ್ಟಾಚಾರವನ್ನು ತಡೆಗಟ್ಟದೇ ಹೋದರೆ ನೀವು ಮಕ್ಕಳ ಹೆಸರಿನಲ್ಲಿ ಸೆಸ್ ಎಂದು ಏನು ಹೇಳುತ್ತಾ ಇದ್ದೀರಿ ಅದು ಖಂಡಿತವಾಗಿಯೂ ಸರಿಯಾದದುದಲ್ಲ. ಮತ್ತು ಅದಕ್ಕಾಗಿ ಕೇಳುವಂಥ ಒಂದು ನೈತಿಕ ಅಧಿಕಾರವನ್ನು ನೀವು ಹೊಂದಿಲ್ಲ ಎಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಭಾಷಣ ಮಾಡುವುದಕ್ಕಿಂತ ಹೆಚ್ಚಾಗಿ, ಸ್ಥಳೀಯ ಸಂಸ್ಥೆಗಳ ವಂತಿಗೆಯಿಂದ ಶಾಲಾಕಟ್ಟಡಗಳನ್ನು ಕಟ್ಟಕೊಡದು ಎಂದು ಸರ್ಕಾರದ ನಿಷಿದ್ಧ ಆಜ್ಞೆ ಏನಿದೆಯೋ ಅದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆಮಾಡಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೆಗೌಡ (ವೇಮಗಲ್) :—ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಅರ್ಥ ಸಚಿವರು ನಮ್ಮ ರಾಜ್ಯದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂತಲೂ ಮತ್ತು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರವನ್ನು ಕೊಡಬೇಕೆಂತಲೂ ಇಚ್ಛಿಸಿ, ಅದಕ್ಕೆ ಆದಾಯದ ದಾರಿಯನ್ನು ಈ ಸೆಸ್‌ನ್ನು ವಿಧಿಸುವುದರ ಮೂಲಕ ತೋರಿಸಿದ್ದಾರೆ. ಈ ಒಂದು ಹೊಸ ನಮೂನೆಯ ಕೆಲಸವನ್ನು ಮಾನ್ಯ ಅರ್ಥ ಸಚಿವರು ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತಿನ ದಿವಸ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಬೇಕಾಗಿಲ್ಲ ಎಂದು ನಾವು ಹೇಳುವಹಾಗಿಲ್ಲ. ಅದಕ್ಕೆ ಬದಲಾಗಿ ಶಾಲಾ ಕಟ್ಟಡಗಳನ್ನು ಕಟ್ಟಿಸಿ ಎಂದು ನಾವು ಅನೇಕ ಸಂದರ್ಭದಲ್ಲಿ ಹೇಳಿದ್ದೇವೆ. ಅವರು ಕಟ್ಟಿಸುತ್ತೇವೆ ಎಂದು ಹೇಳುತ್ತಾ ಇದ್ದಾರೆ. ಹಣ ಇಲ್ಲದ್ದರಿಂದ ಈಗ ಈ ಒಂದು ತರದಿಂದ ಪಡೆಯುತ್ತೇವೆ. ಇದರ ಮೂಲಕ ಶಾಲಾ ಕಟ್ಟಡಗಳನ್ನು ಕಟ್ಟಿಸುತ್ತೇವೆ ಎಂದು ಕೂಡ ಹೇಳುತ್ತಾ ಇದ್ದಾರೆ. ಇದನ್ನು ನೋಡಿದರೆ ಸ್ವಾಗತ ಮಾಡಬೇಕೋ ಅಥವಾ ಇದನ್ನು ವಿರೋಧಮಾಡಬೇಕೋ ಎಂದು ಸ್ವಲ್ಪ ಗೊಂದಲವಾಗುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿರುವ ೨೬ ಸಾವಿರ ಹಳ್ಳಿಗಳಲ್ಲಿ ಅನೇಕ ಹಳ್ಳಿಗಳಲ್ಲಿ ಶಾಲಾಕಟ್ಟಡಗಳಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ನಮ್ಮಂಥವರಿಗೆ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಯಾವರೀತಿಯಲ್ಲಿವೆ, ಯಾವ ಮಟ್ಟದಲ್ಲಿವೆ ಎನ್ನುವುದು ಕೂಡ ಗೊತ್ತಿದೆ. ಅನೇಕ ಕಡೆ ಶಾಲಾ ಕಟ್ಟಡಗಳಲ್ಲಿ ದನ, ಕುರಿಗಳನ್ನು ಬಿಡುವುದಕ್ಕೂ ಆಗುತ್ತಾ ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ಆ ಶಾಲಾ ಕಟ್ಟಡಗಳು ಇವೆ. ಅವನ್ನು ನಾವು ಕಂಡಾಗ, ಎಷ್ಟೇ ಖರ್ಚಾಗಲೀ, ಟ್ಯಾಕ್ಸ್ ಕೊಡಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಲೇಬೇಕು ಎಂದು ನಮಗಾದರೂ ಅನ್ನಿಸುತ್ತದೆ. ಆದರೆ ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಹೊರಟಿರುವಂಥ ದಾರಿಯನ್ನು ನೋಡಿದರೆ, ಅದು ಸಮಂಜಸವಾಗಿಲ್ಲ ಎಂದು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಕೇವಲ ೫೦ ಲಕ್ಷ ರೂಪಾಯಿ ಮಾತ್ರ ಲ್ಯಾಂಡ್ ರೆವಿನ್ಯೂ ಮೇಲೆ ಬರುತ್ತದೆ ; ಆದುದರಿಂದ ರೈತರಿಗೆ ಹೆಚ್ಚಿನ ಹೊರೆ ಬೀಳುವುದಿಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ. ಆದರೆ ಇವತ್ತಿನ ದಿವಸ ರೈತನಿಗೆ ಒಂದು ನಯಾಪೈಸೆ ಟ್ಯಾಕ್ಸ್ ಹಾಕಿದರೂ ಸಹ ಅವನ ಮೇಲೆ ಹೊರೆಯಾಗುತ್ತಾ ಇದೆ. ಕಳೆದ ಒಂದು-ಒಂದೂವರೆ ವರ್ಷದ ಹಿಂದೆ ಒಂದು ಮಾತನ್ನು ಹೇಳಿದ್ದೀರಿ. ಅದನ್ನು ನಾನು ಸ್ವಾಗತ ಮಾಡಿದ್ದೆ. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ ರಾಗಿಯಾಗಲೀ, ಭತ್ತವಾಗಲೀ, ಜೋಳವಾಗಲೀ, – ಎಲ್ಲದರ ಬೆಲೆಯೂ ಕುಸಿಯುತ್ತಾ ಇದೆ. ತರಕಾರಿ ಬೆಳೆಯಿಂದ ಅವನ ಕಣ್ಣಿನಲ್ಲಿ ರಕ್ತ ಬರುತ್ತಾ ಇದೆ. ಒಂದು ಕೆ.ಜಿ. ಬದನೆಕಾಯಿ ೪ ಆಣೆಗೆ ಹುರುಳಿ ೩-೪ ರೂಪಾಯಿಗೆ ಇಳಿದಿದೆ. ನಮ್ಮ ಕಡೆ ಹಿಮಾಚಲ ಪ್ರದೇಶದಿಂದ ಆಲೂಗಡ್ಡೆಯನ್ನು ತರಿಸುತ್ತಾರೆ. ೫೦ ಕೆ.ಜಿ. ಆಲೂಗಡ್ಡೆ ಮೂಟೆಯನ್ನು ೨೦-೨೫ ರೂಪಾಯಿಗೆ ಕೇಳುವವರಿಲ್ಲ. ನಾನು ಮದ್ರಾಸ್ ಬೆಲೆಯನ್ನು ಹೇಳುತ್ತಾ ಇದ್ದೇನೆ. ಆಲೂಗಡ್ಡೆ ಬೆಲೆ ೧೫-೨೦ ರೂಪಾಯಿ ಇಳಿದುಹೋಗಿದೆ. ರೈತನು ಲಾಭ ಪಡೆಯುವುದು ಒಂದು ಕಡೆ ಇರಲಿ, ಬೆಳೆ ಮಾಡುವುದಕ್ಕೆ ಬಂಡವಾಳ ಬರುವುದು ಒಂದು ಕಡೆ ಇರಲಿ, ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಸಾಲ ಸೋಲ ತೀರಿಸಬೇಕಾದರೆ ಅವನ ಮನೆಯಲ್ಲಿ ಕುರಿ, ಕೋಳಿ ಏನಾದರೂ ಇದ್ದರೆ ಅದನ್ನು ಮಾರಿದರೆ ಮಾತ್ರ ಅವನು ಮಾಡಿರತಕ್ಕ ಸಾಲವನ್ನು ತೀರಿಸುವಂಥ ಒಂದು ಮಟ್ಟಕ್ಕೆ ಬಂದಿದೆ. ಇಂತಹ ಒಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ೬೦ ಲಕ್ಷ ರೂಪಾಯಿ ಬಹಳ ಕಡಿಮೆ ಮೊತ್ತ ಎಂದು ಹೇಳುತ್ತಾ ಇದ್ದಾರೆ. ನಮ್ಮ ರಾಜ್ಯದ ರೈತರ ಮೇಲೆ ಈ ಸಂದರ್ಭದಲ್ಲಿ ೪೨ ಲಕ್ಷ ರೂಪಾಯಿಗಳನ್ನು ವಿಧಿಸುತ್ತಾ ಇದ್ದೀರಿ ಅದು ಭಾರಿ ಮೊತ್ತ ಎಂದು ಹೇಳುತ್ತೇನೆ. ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿ ೪-೫ ವರ್ಷ ಕೆಲಸ ಮಾಡಿದ್ದೇನೆ. ನಾನು ಅಧ್ಯಕ್ಷನಾಗಿದ್ದ ಅವಧಿಯಲ್ಲಿ ನೂರಕ್ಕಿಂತ ಹೆಚ್ಚು ಶಾಲಾ ಕಟ್ಟಡಗಳನ್ನು ಕಟ್ಟಿಸಿರುವುದುಂಟು. ಆಗ ಸರ್ಕಾರದವರು ಕೇವಲ ೨ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು ಇದರಿಂದ ಕೋಲಾರ ತಾಲ್ಲೂಕಿನಲ್ಲಿ ನೂರಕ್ಕಿಂತ ಹೆಚ್ಚು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಯಿತು. ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ೩೦೦೦ ರೂಪಾಯಿ ಕೊಡುತ್ತಾರೆ ಈಗ ಇನ್ನೂ ಕೂಡ ಹೆಚ್ಚಿಗೆ ಮಾಡಿದ್ದಾರೆ. ಮಾನ್ಯ ಚೆನ್ನಬಸಪ್ಪನವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಅನೇಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ರಸ್ತೆಗಳನ್ನು ಪಿ.ಡಬ್ಲ್ಯು.ಡಿ.ಗೆ ತೆಗೆದು ಕೊಂಡಿದ್ದಾರೆ. ಅಷ್ಟು ಹಣ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಉಳಿತಾಯವಾಗುತ್ತದೆ. ಐ.ಸಿ.ಆರ್.ಸಿ. ರಸ್ತೆ ಪ್ರೋಗ್ರಾಂನಲ್ಲೂ ಕೂಡ ಅನೇಕ ರಸ್ತೆಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಸ್ವಲ್ಪ ಮಟ್ಟಿಗೆ ಹಣ ಉಳಿತಾಯವಾಗುತ್ತಾ ಇದೆ. ಈ ದೃಷ್ಟಿಯಿಂದ ಇವತ್ತು 4½ ಸಾವಿರ ರೂಪಾಯಿಗಳನ್ನು ಸರ್ಕಾರ ನಿಗದಿ ಮಾಡಿದೆ. ಅದು ಕೂಡ ಸಾಕಾಗುತ್ತಾ ಇಲ್ಲ. ನ್ಯಾಯವಾಗಿ ಕಟ್ಟಡವನ್ನು ಕಟ್ಟಿಸಬೇಕಾದರೆ ೭ ರಿಂದ ೮ ಸಾವಿರ ರೂಪಾಯಿ ಬೇಕಾಗುತ್ತದೆ. ಟೈಪ್ ಡಿಸೈನ್ ಚೇಂಜ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಜನತಾ ಹೌಸಿಂಗ್ ಸ್ಕೀಂನಲ್ಲೂ ಕೂಡ

ಅನೇಕ ಕಟ್ಟಡಗಳು ಪೂರ್ತಿಯಾಗುವುದಕ್ಕೆ ಮೊದಲೇ ಬಿದ್ದಿರತಕ್ಕ ಸಂದರ್ಭ ಇದೆ. ಲೋಕಲ್ ಅವಲಬಲ್ ಮೆಟೀರಿಯಲ್ ಎಂದು ಹೇಳಿರುವುದರಿಂದ, ಕೆಲವು ಕಡೆ ಯೋಗ್ಯವಾದ ಮರ ಉಪಯೋಗಿಸದೆ, ಯೋಗ್ಯವಾದಂಥ ಮೆಟೀರಿಯಲ್ಸ್ ಉಪಯೋಗಿಸದೇ ಮನೆಗಳು ಬಿದ್ದಿರತಕ್ಕ ಪರಿಸ್ಥಿತಿ ಉಂಟು. ಶಾಲಾ ಕಟ್ಟಡಗಳಿಗೆ ಲೋಕಲ್ ಅವಲಬಲ್ ಮೆಟೀರಿಯಲ್ ಎಂದುಹೇಳಿ, ಎಂಥದೋ ಕಟ್ಟಡ ಆದರೆ ಸಾಕು ಎಂದು ಮಾಡುವುದಾದರೆ, ಒಂದೆರಡು ಕಡೆ ಕಟ್ಟಡಗಳು ಉರುಳಿ ಬಿದ್ದು ಮಕ್ಕಳು ಸಾಯುವಂಥ ಪರಿಸ್ಥಿತಿ ಖಂಡಿತ ಬರುತ್ತದೆ, ಇದನ್ನು ಮುಂದೆ ಅನುಭವಿಸುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ದಯವಿಟ್ಟು ಎಂಥದೋ ಡಿಸೈನ್, ಲೋಕಲ್ ಅವಲಬಲ್ ಮೆಟೀರಿಯಲ್ ಎಂದು ಹೇಳುವುದನ್ನು ಬಿಟ್ಟು, ಶಾಶ್ವತವಾದಂಥ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಪಡಿ. ಈ ಶಾಲಾ ಕಟ್ಟಡಗಳಿಗೆ ಸಿಮೆಂಟ್‌ನ್ನು ಉಪಯೋಗಿಸಿದರೂ ನಷ್ಟವಿಲ್ಲ. ಒಳ್ಳೆಯ ಬಿಲ್ಡಿಂಗ್ ಮೆಟೀರಿಯಲ್ಸ್‌ನ್ನು ಉಪಯೋಗಿಸಿ ಕಟ್ಟಡಗಳನ್ನು ಕಟ್ಟಿಸುವುದು ಯುಕ್ತವಾಗಿದೆ. ಒಂದು ಹಳ್ಳಿಯಲ್ಲಿ ಶಾಲಾ ಕಟ್ಟಡ ಒಂದಾದರೂ ಯೋಗ್ಯವಾದ ಕಟ್ಟಡ ಇರಲಿ ಎನ್ನುವ ಒಂದು ವಿಚಾರ ತಮ್ಮಲ್ಲಿ ಬರಬೇಕು ಎಂದು ಹೇಳುತ್ತೇನೆ.

ಇನ್ನು ಶಾಲಾ ಮಕ್ಕಳಿಗೆ ಮಾಧ್ಯಾಹ್ನದ ಉಪಹಾರವನ್ನು ಕೊಡುವುದಕ್ಕೆ ಹಣವನ್ನು ಉಪಯೋಗಿಸುತ್ತೇವೆ ಎಂದು ಹೇಳುತ್ತಾ ಇದ್ದೀರಿ. ಈಗತಾನೆ ಮಾತನಾಡಿದಂಥ ಮಾನ್ಯ ಕೃಷ್ಣಪ್ಪನವರು ಬಹಳ ಸೂಕ್ಷ್ಮವಾಗಿ ಶಾಲೆಗಳಲ್ಲಿ ಮಧ್ಯಾಹ್ನದ ಉಪಹಾರ ಯಾವರೀತಿ ನಡೆಯುತ್ತಾ ಇದೆ ಎಂದು ಏನು ಹೇಳಿದ್ದಾರೆ, ಅದು ಅಕ್ಷರಶಃ ನಿಜ.

ಈ ವಿದ್ಯಾ ಇಲಾಖೆಯಲ್ಲಿ ಮೊದಲು ಭ್ರಷ್ಟಾಚಾರ ಇರಲಿಲ್ಲ. ಕೇರ್‌ನವರ ಮಧ್ಯಾಹ್ನದ ಉಪಹಾರ ಬಂದಮೇಲೆ ಪ್ರತಿ ಊರಲ್ಲಿ ಈ ಒಂದು ವ್ಯವಸ್ಥೆ ನಡೆಯುತ್ತಿದೆ. ಇದನ್ನು ಸೂಪರ್‌ವೈಸ್ ಮಾಡತಕ್ಕ ಮೇಲಿನ ಅಧಿಕಾರಿಗಳಿಂದ ಹಿಡಿದು ಹಳ್ಳಿಯಲ್ಲಿರತಕ್ಕ ಮುಖಂಡರುಗಳೂ ಮತ್ತು ಉಪಾಧ್ಯಾಯರು ಸೇರಿಕೊಂಡು ಈ ವ್ಯವಹಾರದಲ್ಲಿ ಭಾಗಿಗಳಾಗಿ ದುರ್ವ್ಯವಹಾರ ನಡೆದು ಅನೇಕ ಕಡೆ ಶಾಲೆಗಳು ಮುಚ್ಚಿರತಕ್ಕ ಸನ್ನಿವೇಶಗಳೂ ಉಂಟು. ಅನೇಕ ಕಡೆ ಶಾಲೆಗಳು ನಡೆಯದೆ ಉಪಾಧ್ಯಾಯರುಗಳು ಸಂಬಳವನ್ನು ಪಡೆದಿರತಕ್ಕ ಸನ್ನಿವೇಶಗಳು ಉಂಟು. ಇಂಥ ಒಂದು ವ್ಯವಹಾರ ನಡೆಯುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಶಾಲೆಯ ಸ್ಥಿತಿಗತಿಯ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೆನು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ೧೯೭೪ ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿನ ಒಬ್ಬ ಉಪಾಧ್ಯಾಯರು ಸುಮಾರು ನಾಲ್ಕು ಸಾವಿರ ರೂಪಾಯಿಗಳ ಕೇರ್ ಸಂಸ್ಥೆಯ ಪದಾರ್ಥಗಳನ್ನು ಮಿಸ್ ಅಪ್ರೋಪ್ರಿಯೇಟ್ ಮಾಡಿದ್ದಾರೆ. ಆದರೂ ಇಲ್ಲಿಯವರೆಗೆ ಏನೂ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಆ ಉಪಾಧ್ಯಾಯರ ಹತ್ತಿರ ಸುಮಾರು ೨-೩ ಲಕ್ಷ ರೂಪಾಯಿಗಳ ಹಣ ಇದೆ. ಅವರು ಹಣಕಾಸಿನ ಲೇವಾದೇವಿಯಲ್ಲಿಯೂ ತೊಡಗಿದ್ದಾರೆ. ಆ ಪ್ರದೇಶದಲ್ಲಿ ಇವರು ಒಬ್ಬ ಮುಖ್ಯ ಲೇವಾದೇವಿಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಹಣ ಅವರಿಗೆ ಎಲ್ಲಿಂದ ಬಂತು? ಮೊದಲು ಅವರ ಆಸ್ತಿ ಎಷ್ಟು ಇತ್ತು ಎನ್ನುವುದನ್ನು ತಾವು ವಿಚಾರ ಮಾಡಿದರೆ ನಿಜವಾದ ಸ್ಥಿತಿ ಗೊತ್ತಾಗುತ್ತದೆ. ಇದು ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟೇ ಅಲ್ಲ, ಬೆಂಗಳೂರಿನ ಪಕ್ಕದ ಮಂಡಿವಾಳ ಗ್ರಾಮದಲ್ಲಿಯೂ ಉಪಹಾರದ ಪದಾರ್ಥಗಳ ಶೇಕರಣೆ ಮಾಡಿದಾಗ, ಸಕ್ಕರೆ ಮೂಟೆಗಳನ್ನು ಮೇಲ್ಛಾವಣಿಯಿಂದ ತೆಗೆದುಕೊಂಡು ಹೋಗಿದ್ದಾರ ಎಂದು ವರದಿಯಾಗಿದೆ. ನೂರು ಕೆ.ಜಿ. ಇರತಕ್ಕ ಸಕ್ಕರೆ ಮೂಟೆಯನ್ನು ಮೇಲ್ಛಾವಣಿಯಿಂದ ಯಾವ ರೀತಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ? ಇದೆಲ್ಲಾ ಬಹಳ ಆಶ್ಚರ್ಯವಾಗಿ ನಡೆಯುತ್ತದೆ. ಸುಮಾರು ೨೦ ಸಾವಿರ ರೂಪಾಯಿಗಳ ಬೆಲೆ ಬಾಳುವಂಥ ಉಪಹಾರ ಪದಾರ್ಥಗಳು ಲೂಟಿಯಾಗಿವೆ. ಈ ರೀತಿಯ ದುರ್ವ್ಯವಹಾರ ಮತ್ತು ದುರಾಡಳಿತ ನಡೆಯುತ್ತಿದೆ. ಇದಕ್ಕೆ ತಾವು ನಮಗೆ ಹೆಚ್ಚಿನ ಸೆಸ್ ಕೊಡಿ ಎಂದು ಕೇಳುತ್ತಿದ್ದಾರೆ. ನಡೆಯತಕ್ಕಂಥ ಅವ್ಯವಹಾರವನ್ನು ಸರಿಪಡಿಸಿ, ಸುವ್ಯವಸ್ಥೆಯಿಂದ ಇದನ್ನು ನಡೆಯುವಂತೆ ಮಾಡಿದರೆ ಈಗ ಇರತಕ್ಕ ೬ ಪೈಸೆ ಸೆಸ್ ಸರಿಯಾಗುತ್ತದೆ ಮತ್ತು ತಾವು ಕೇಳುವ ೧೫ ಪೈಸೆ ಸೆಸ್ ಅನಾವಶ್ಯಕವೆಂದು ನನ್ನ ಭಾವನೆ. ಕೆಲವು ಭ್ರಷ್ಟಾಚಾರದ ಅಧಿಕಾರಿಗಳು ಯಾರಿದ್ದಾರೆ, ಎಲ್ಲಿ ಹಣ ಸೋರಿ ಹೋಗುತ್ತದೆ, ಅದನ್ನು ಸರಿಪಡಿಸಿದರೆ, ತೂತು ಮುಚ್ಚಿದರೆ ಅನುಕೂಲವಾಗುತ್ತದೆ. ದುರಾಡಳಿತದಿಂದ ಸೋರಿ ಹೋಗುತ್ತಿರುವ ಹಣವನ್ನು ಸರಿಪಡಿಸದೆ ಹೆಚ್ಚಿನ ಸೆಸ್ ಕೊಡಿ ಎಂದು ಕೇಳತಕ್ಕದ್ದು ಜಾಣತನವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶಾಲಾ ಕಟ್ಟಡಗಳ ಬಗ್ಗೆ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ತಾವು ಇವತ್ತು ಮಕ್ಕಳಿಗೆ ಹೈಯರ್ ಎಜುಕೇಷನ್ ಕೊಡುವುದಕ್ಕೆ ಹೊರಟಿದ್ದೀರಿ. ಒಬ್ಬ ವಿದ್ಯಾರ್ಥಿಯನ್ನು ಡಾಕ್ಟರ್ ಆಗಿ ಮಾಡಬೇಕಾದರೆ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗುತ್ತದೆ, ಇದು ಸಮಾಜದ ಹೊಣೆಯಲ್ಲವೇ ? ಇಷ್ಟು ಹಣವನ್ನು ಖರ್ಚು ಮಾಡಿ, ವಿದ್ಯಾರ್ಥಿಗಳನ್ನು ಡಾಕ್ಟರುಗಳನ್ನಾಗಿ ಮತ್ತು ಇಂಜನಿಯರುಗಳನ್ನಾಗಿ ಮಾಡಿದಾ ಅವರಿಂದ ಸಮಾಜಕ್ಕೆ ಆದಂಥ ಕೊಡಿಗೆ ಏನು ? ಅವರು ಪುನಃ ಏನನ್ನು ಸಮಾಜಕ್ಕೆ ಕೊಡುತ್ತಾರೆ ಎನ್ನುವುದು ಮುಖ್ಯವಾದ ಅಂಶ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ನಗರಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಯಾರು ವಿದ್ಯಾವಂತರಾಗಿ ಇಂಜನಿಯರಿಂಗ್ ಮತ್ತು ಡಾಕ್ಟರ್, ಲಾಯರ್ಸ್ ಆಗಿದ್ದಾರೋ ಅವರ ಮೇಲೆ ಏಕೆ ಸೆಸ್ ಹಾಕಬಾರದು ? ಇದರಿಂದ ಬಂದಂಥ ಹಣದಿಂದ ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿದರೆ ಒಳ್ಳೆಯದು ಇದಕ್ಕೆ ಬದಲಾಗಿ ಎಲ್ಲರ ಮೇಲೆಯೂ ಸೆಸ್ ಹಾಕಿದರೆ ಅದನ್ನು ನಾನು ಒಪ್ಪುವುದಿಲ್ಲ ಎನ್ನುವ ಮಾತನ್ನು ಇಲ್ಲಿ ನಾನು ಹೇಳುತ್ತೇನೆ. ಇಂಜನಿಯರಿಂಗ್ ಗೂಡ್ಸ್ ಮೇಲೆ ತೆರಿಗೆಯನ್ನು ಹಾಕಿದರೆ ಬೇಕಾದಷ್ಟು ಹಣ ಬರುತ್ತವೆ. ಅದೇ ರೀತಿಯಲ್ಲಿ ವಿದ್ಯೆಯನ್ನು ಕಲಿತು ಯಾರು ತಮ್ಮ ಜೀವನವನ್ನು ನಡೆಸುತ್ತಾರೆಯೋ ಅವರ ಮೇಲೆ ಟ್ಯಾಕ್ಸನ್ನು ಹಾಕಿ ಶಾಲೆಗಳನ್ನು ಕಟ್ಟಿಸುವುದಾದರೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇವೆ.

† ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಕರ್ನಾಟಕ ರಾಜ್ಯದ ಆರ್ಥಿಕ ಭದ್ರತೆಯ ಬುನಾದಿಯ ಬೆನ್ನೆಲುಬು ಆದಂಥ ಮಾನ್ಯ ಘೋರ್ಪಡೆಯವರು ರಚನಾತ್ಮಕವಾದ ಕೆಲಸಗಳನ್ನು ಮಾಡಿ ಎಲ್ಲಿಂದಲೋ ಹೇಗೋ ಮಾಡಿ, ಇಂಥ ಕೆಲಸಗಳಿಗೆ ಹಣವನ್ನು ತಂದು ಕೊಡುತ್ತಿದ್ದಾರೆ. ಇದಕ್ಕೆ ನಿದರ್ಶನ ಎಂದರೆ, ಒಂದು ವಿಶಾಲ ಅಂತಃಕರಣದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಮೊದಲು ಒದಗಿಸಿದ್ದಂಥ ಹಣ ಸಾಲದು ಎನ್ನುವ ಭಾವನೆಯಿಂದ, ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದುದನ್ನು ಹೆಚ್ಚಿಸಿ ಇವತ್ತು ನಾಲ್ಕೂವರೆ ಸಹಸ್ರ ರೂಪಾಯಿಗಳವರೆಗೆ ಮಾಡಿ ಮಕ್ಕಳ ಕಲ್ಯಾಣಕ್ಕೆ ಒಂದು ಹೊಸ ಹಾದಿಯನ್ನು ಹಾಕಿ ಕೊಟ್ಟಿದ್ದಾರೆ. ಇದನ್ನು ನಾನು ಅಂತಃಕರಣದಿಂದ ಮೆಚ್ಚಿಕೊಳ್ಳುತ್ತೇನೆ. ಆದರೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯ ಜೊತೆಗೆ ನಗರ ಪ್ರದೇಶದಿಂದ ಬಂದಂಥ ನಾನು ಹುಬ್ಬಳ್ಳಿ—ಧಾರವಾಡ ಮಹಾನಗರದಲ್ಲಿ ಶೋಚನೀಯ ಸ್ಥಿತಿಯಲ್ಲಿರತಕ್ಕ ಶಾಲಾ ಕಟ್ಟಡಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಕೆಲವು ಶಾಲೆಗಳಲ್ಲಿ ಹರಕು ಚಾಪೆ, ಮುರುಕು ಗೋಡೆ, ಕತ್ತಲು ಕೋಣೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿದೆ. ಶತಮಾನಗಳಿಂದ ಈ ಶಾಲೆಗಳ ಉದ್ಧಾರವಲ್ಲ, ಜೀರ್ಣೋದ್ಧಾರ ಕೂಡ ಆಗಿಲ್ಲ. ಉದಾಹರಣೆಗೆ ಹೇಳಬೇಕು ಎಂದರೆ, ಗಾರ್ಡನ್‌ಪೇಟೆ, ಗಣೇಶ್‌ಪೇಟೆಯಲ್ಲಿರತಕ್ಕ ಪ್ರಾಥಮಿಕ ಶಾಲಾ ಕಟ್ಟಡಗಳು ಅನಾರೋಗ್ಯಕರವಾದ ಪರಿಸರದಿಂದ ಕೂಡಿವೆ. ಇಷ್ಟೇ ಅಲ್ಲ ಇವುಗಳು ಸಾರ್ವಜನಿಕರ ಶೌಚ ಕೂಪಗಳಾಗಿವೆ ಎಂದರೆ ಇದು ಅಸತ್ಯವಾಗಿದೆ ಎಂದು ಯಾರೂ ಭಾವಿಸಿಕೊಳ್ಳಬಾರದು. ಇವರ ಬಗ್ಗೆ ವಿಚಾರ ಮಾಡಿ ವರದಿಯನ್ನು ತರಿಸಿಕೊಂಡರೆ ನನ್ನ ಮಾತಿನ ಸತ್ಯಾಸತ್ಯತೆಯ ಅರಿವು ತಮಗೆ ಆಗುತ್ತದೆ. ಇಂಥ ವಿಷಯದ ಕಡೆ ಮಾನ್ಯ ಮಂತ್ರಿಗಳ ಗಮನವನ್ನು ನಾನು ಸೆಳೆಯಬಯಸುತ್ತೇನೆ. ಹಿಂದೆ ಹುಬ್ಬಳ್ಳಿ ಮುನಿಸಿಪಾಲಟಿಯವರು ಈ ಸ್ಕೂಲುಗಳನ್ನು ಸರ್ಕಾರದ ವಶಕ್ಕೆ ಕೊಟ್ಟರು. ಇವೆಲ್ಲಾ ಹಳೆಯ ಕಾಲದ ಕಟ್ಟಡಗಳು. ಹಿಂದೆ ಇರತಕ್ಕ ಪೌರಾಡಳಿತ ಮಂತ್ರಿಗಳು ಇದು ಕಾರ್ಪೊರೇಷನ್‌ಗೆ ಸಂಬಂಧಪಟ್ಟಿದ್ದಲ್ಲ, ವಿದ್ಯಾ ಇಲಾಖೆಯವರು ನೋಡಿಕೊಳ್ಳಬೇಕು ಎಂದು ಹೇಳಿದ್ದರು. ವಿದ್ಯಾ ಇಲಾಖೆಯವರು ಈ ಕಟ್ಟಡಗಳ ರಿಪೇರಿಗಾಗಿ ಒಂದುಕಾಸನ್ನು ಖರ್ಚುಮಾಡಲಿಲ್ಲ. ಹೀಗಾಗಿ ಈ ಕಟ್ಟಡಗಳನ್ನು ನೋಡಿಕೊಳ್ಳತಕ್ಕವರು ಯಾರು ಇಲ್ಲ. ಹೋದ ಸಲ ಮಳೆಗಾಲದಲ್ಲಿ ಎರಡು ಮೂರು ಕಟ್ಟಡಗಳು ಬಿದ್ದುಹೋದವು. ಗಾರ್ಡನ್ ಪೇಟೆ ಶಾಲಾ ಕಟ್ಟಡ ಬಿದ್ದು ಹೋಗುವ ಸ್ಥಿತಿ ಇದೆ. ಬಹುಶಃ ಅಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳ ಪ್ರಾಣಕ್ಕೆ ಧಕ್ಕೆಯಾಗತಕ್ಕ ಸಂದರ್ಭ ಇದೆ. ಈ ಕಟ್ಟಡಗಳ ಬಗ್ಗೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಫೋಟೊ ಸಹ ಬಂದಿದೆ. ಮಾನ್ಯ ಬದರೀನಾರಾಯಣ ಅವರು ವಿದ್ಯಾಮಂತ್ರಿಗಳಾಗಿದ್ದಾಗ ಇದನ್ನು ಸರ್‌ಪ್ರೈಸ್, ಆಗಿ ತೋರಿಸಿದ್ದೇವೆ. ಇದರ ಬಗ್ಗೆ ಯಾವ ಒಂದು ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಮುನಿಸಿಪಲ್ ಕಾರ್ಪೊರೇಷನ್‌ನವರು

ಇದು ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ, ಸರ್ಕಾರದ ಕಟ್ಟಡಗಳಿಗೆ ನಾವು ಒಂದು ಕಾಸನ್ನೂ ಖರ್ಚು ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶದ ಕಟ್ಟಡಗಳಿಗೆ 4500 ರೂಪಾಯಿಗಳ ಒಂದು ಪ್ರಾವಿಷನ್ ಮಾಡಿರುವ ಒಂದು ಉಪಯೋಗವನ್ನು ನಾವು ಲಭ್ಯ ಮಾಡಿಕೊಂಡಿಲ್ಲ. ಇದನ್ನು ಈಗಲಾದರೂ ಸರ್ಕಾರದವರು ವಿಚಾರ ಮಾಡಬೇಕು ಎಂದು ನಾನು ಹೇಳುತ್ತೇನೆ.

ಕಾರಣ ತಾವು ಹುಬ್ಬಳ್ಳಿ—ಧಾರವಾಡ ನಗರದಲ್ಲಿ ಪ್ರಾಥಮಿಕ ಶಾಲೆಗಳನ್ನು ಕೊಟ್ಟಿದ್ದೀರಿ ಈ ಶಾಲೆಗಳ ಬಗ್ಗೆ ಸರ್ಕಾರದ ಖಚಿತವಾದ ನೀತಿ ಏನು ಎಂಬುದನ್ನು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಲ್ಲ, ಕಮರ್ಷಿಯಲ್ ಆಗಿರತಕ್ಕ ಕಾರ್ಪೊರೇಷನ್ ನೀತಿಯಲ್ಲಿ ಬದಲಾವಣೆ ಮಾಡಿ. ಇವತ್ತಿನ ದಿವಸ ಸರ್ಕಾರದಿಂದ ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ದವಾಖಾನೆ ಇತ್ಯಾದಿಗಳನ್ನು ಕಟ್ಟಿಸುತ್ತಿದ್ದೀರಿ. ಅದೇರೀತಿಯಲ್ಲಿಯೇ ಇವುಗಳ ಜೊತೆಯಲ್ಲಿ ಇಂತಿಷ್ಟು ಶಾಲಾಕಟ್ಟಡಗಳನ್ನು ಕಟ್ಟಿಸಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಅದರಿಂದ ಬಹಳ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇವತ್ತು ಹುಬ್ಬಳ್ಳಿ—ಧಾರವಾಡ ನಗರದಲ್ಲಿರುವ ಶಾಲಾ ಕಟ್ಟಡಗಳು ಯಾವರೀತಿಯಲ್ಲಿವೆ ಎಂಬುದನ್ನು ನೋಡಿ ಕನಿಷ್ಠಪಕ್ಷ ಅವುಗಳ ದುರಸ್ತಿಯಾದರೂ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅರಮನೆ, ಗುರುಮನೆ ಎರಡೂ ಚೆನ್ನಾಗಿ ಇರಬೇಕು ಎಂದು. ಉದಾಹರಣೆಗೆ ಇವತ್ತು ಈ ವಿಧಾನ ಸೌಧವನ್ನು ಕಟ್ಟಿಸಿದ್ದೀರಿ. ಇಲ್ಲಿನ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ಮಾಡಿದ್ದೀರಿ. ಅದೇರೀತಿ ಗುರುಮನೆಗಳೂ ಇರಬೇಕು. ಇವತ್ತು ಹರಿಜನ ಶಿಕ್ಷಕರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದಾರೆ. ಅಂಥವರಿಗೂ ಕೂಡ ಒಂದು ಒಳ್ಳೆಯ ಓಣಿಯಲ್ಲಿ ಒಂದು ಮನೆ ದೊರೆಯುವಂತಾಗಬೇಕೆಂದು ಹೇಳುತ್ತೇನೆ. ಇವತ್ತು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ 4500 ರೂಪಾಯಿಗಳನ್ನು ಕೊಡುತ್ತಿದ್ದೀರಿ, ಅದೇರೀತಿ ಒಬ್ಬೊಬ್ಬ ಶಿಕ್ಷಕರಿಗೂ ಒಂದೊಂದು ಗುರು ಭವನವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ವಿವಿಧ ಇಲಾಖೆಗಳಲ್ಲಿರತಕ್ಕ ಸರ್ಕಾರಿ ನೌಕರರಿಗೆ ವಾಸಕ್ಕೆ ವಸತಿಗೃಹಗಳನ್ನು ಕಟ್ಟಿಸಿಕೊಟ್ಟು ಅವರ ಸಂಬಳದಲ್ಲಿ 10 ಪರ್ಸೆಂಟ್‌ನ್ನು ಬಾಡಿಗೆ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದೀರಿ. ಅದೇ ರೀತಿಯಲ್ಲಿಶಿಕ್ಷಕರಿಗೂ ಕೂಡ ವಸತಿಗೃಹಗಳನ್ನು ಕಲ್ಪಿಸಿಕೊಟ್ಟರೆ ಇವರ ಬಾಡಿಗೆ ರೂಪದಲ್ಲಿ ಹಣ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಶಿಕ್ಷಕ ಎಂದರೆ 24 ಗಂಟೆಗಳೂ ಕೂಡ ವಿದ್ಯಾರ್ಥಿಗಳಿಗೆ ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಕೊಟ್ಟು ಅವರನ್ನು ಉತ್ತಮ ರೀತಿಯಲ್ಲಿ ಒಯ್ಯುವುದಕ್ಕೆ ಕಾರಣೀಭೂತನಾಗುತ್ತಾನೆ. ಆದುದರಿಂದ ನಗರ ಪ್ರದೇಶಗಳಲ್ಲಿರತಕ್ಕ ಶಾಲಾಕಟ್ಟಡಗಳ ಬಗ್ಗೆ ಖಚಿತವಾದ ನೀತಿಯನ್ನು ತಾಳಿ ಅವುಗಳ ಜೀರ್ಣೋದ್ಧಾರವಾಗುವಂತೆ ಮಾಡಬೇಕೆಂದು ಈ ಮಹಾಸಭೆಯಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತು ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಅರ್ಥಸಚಿವರಾದ ಶ್ರೀಮಾನ್ ಘೋರ್ಪಡೆಯವರು ಈ ಸದನದ ಮುಂದೆ ಮಂಡಿಸಿರತಕ್ಕ ಕರಭಾರದ ಮಸೂದೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ಹಿಂದೆ ಮಾತನಾಡಿದ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪ್ರೊಫೆಸರ್ ಸನದಿ ಅದರು ಮಾನ್ಯ ಘೋರ್ಪಡೆಯವರ ಬಗ್ಗೆ ತಮ್ಮ ಭಾಷಣದ ಪ್ರಾರಂಭದಲ್ಲೆ ಬಹಳ ಒಳ್ಳೆಯ ಮಾತುಗಳನ್ನಾಡಿ ಇವರು ಈ ರಾಜ್ಯದ ಬೆನ್ನುಮೂಳೆ ಎಂದು ಹೇಳಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ನಿಜ. ಅದನ್ನು ಒಪ್ಪುತ್ತೇನೆ. ಮಾನ್ಯ ಘೋರ್ಪಡೆಯವರು ಈ ರಾಜ್ಯದ

ಆರ್ಥಿಕ ಸ್ಥಿತಿಗತಿಗಳ ಬೆನ್ನು ಮೂಳೆ ಆದರೆ ಇವರು ಯಾರ ಯಾರ ಬೆನ್ನುಮೂಳೆಗೆ ಏನೇನು ಮಾಡಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಾನ್ಯ ಶ್ರೀ ಎಂ. ವೈ. ಘೋರ್ಪಡೆಯವರು ನಮ್ಮ ರಾಜ್ಯದ ಹಣಕಾಸಿನ ಪ್ರಗತಿಶೀಲ ಸಚಿವರು ನಿಜ. ಇವರು ಯಾರು ಎಂದರೆ.—

"ಕರ ಹೇರುವ ಚತುರ,
ಕರ್ನಾಟಕ ಕರ ವೀರ,
ಜನರ ಮಾನ, ಧನ, ಚೋರ,
ಜನತಾ ಬೆನ್ನು ಮೂಳೆ ಮುರಿವ ನರ,
ಇಂದಿರಾ ಕುವರ"

ಇಂಥವರು, ಈ ನಮ್ಮ ಅರ್ಥ ಸಚಿವರು ಈ ಸದನದ ಅನೇಕ ಮಾನ್ಯ ಸದಸ್ಯರು ಅನೇಕ ಉತ್ತಮ ಸಲಹೆಗಳನ್ನು ಸರ್ಕಾರಕ್ಕೆ ನೀಡಿದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರಿಗೆ ಸರ್ಕಾರ ಕೊಟ್ಟ ಉತ್ತರದಲ್ಲಿ ಒಂದು ಭಯಂಕರವೇ ಅಡಗಿದೆ. ದೇಶದಲ್ಲಿ ಸುಭಿಕ್ಷೆ ನೆಲೆಸುವಂತೆ, ಬಡವರ ಬದುಕು ಬಂಗಾರವಾಗುವಂತೆ ಮಾಯಾಬಜಾರ್ ಮಾಡುವ ಈ ನಮ್ಮ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರ ಏನಿದೆ. ಇದು ಕಳೆದ ೩ ವರ್ಷಗಳಲ್ಲಿ ಲೈಟ್‌ಛಾರ್ಜ್, ವಾಟರ್ ಛಾರ್ಜ್ ಮತ್ತು ಫರ್ನಿಷಿಂಗ್‌ಗೆ ಒಟ್ಟು ಖರ್ಚು ಮಾಡಿರುವುದು ಎಂದರೆ ಕೇವಲ ೧೫ಕೋಟಿ ೩೧ಲಕ್ಷ ೫೪ ಸಾವಿರದ ೩೬೩ ರೂಪಾಯಿಗಳು. ಈ ಲೆಕ್ಕ ಯಾರು ಕೊಟ್ಟಿರುವುದು ಎಂದರೆ, ತಾವೇ ಕೊಟ್ಟಿರತಕ್ಕ ಲೆಕ್ಕ, ಇದು ಯಾರ ಬೆನ್ನು ಮೂಳೆಯ ಮೇಲೆ ಬಿದ್ದಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೇ ಇದು ತಾವೇ ಕೊಟ್ಟಿರುವ ಲೆಕ್ಕ ಆದರೆ ಇದನ್ನು ಟೋಟಲ್ ಮಾಡಿ ಹೇಳುವಾಗ ಸ್ವಲ್ಪ ತಪ್ಪಾಗಿರಬಹುದು ಅಂತೂ ಇದು ೧೫ ಕೋಟಿ ರೂಪಾಯಿಗಿಂತ ಹೆಚ್ಚಿಗೆ ಇದೆ ಸ್ವಾಮಿ. ಮಾನ್ಯ ಅಧ್ಯಕ್ಷಿಣಿಯವರೇ ಇವರು ಬರೀ ಸ್ನಾನಕ್ಕೆ, ಊಟಕ್ಕೆ ನೀರಿಗೆ ಎಂದು ಖರ್ಚು ಮಾಡಿರುವುದು ಎಂದರೆ ೬.೯೧ಲಕ್ಷ ರೂಪಾಯಿ ಕಳೆದ ಮೂರು ವರ್ಷಗಳಲ್ಲಿ ಇವರು ಇಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಇದರ ಜೊತೆಗೆ ಮೆಡಿಕಲ್ ಛಾರ್ಜಸ್ ಎಷ್ಟು ಖರ್ಚುಮಾಡಿದ್ದಾರೆ. ಎನ್ನುವ ಬಗ್ಗೆ ಅಂಕಿ ಅಂಶವನ್ನು ನಾನು ತಂದಿಲ್ಲ. ಅದು ಮಾನ್ಯ ಶಾಮಣ್ಣನವರ ಹತ್ತಿರ ಇದೆ. ಇದರಲ್ಲಿ ಅವರ ಸಂಬಳವನ್ನು ಸೇರಿಸಿಲ್ಲ. ಹಾಗೆಯೇ ಅವರ ಕಾರಿಗೆ ಭತ್ಯವನ್ನು ಇದರಲ್ಲಿ ಹೇಳಿಲ್ಲ. ಇದನ್ನೆಲ್ಲಾ ಒಟ್ಟು ಲೆಕ್ಕಾ ಹಾಕಿದರೆ ಈ ೩ ವರ್ಷಗಳಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿದ್ದಾರೆ. ಈ ಹಣವನ್ನೆಲ್ಲಾ ವಸೂಲು ಮಾಡಬೇಕಾದರೆ ಬಡವರ ಮೇಲೆ ರೈತರ ಮೇಲೆ, ೫ ಪೈಸೆ, ೨ ಪೈಸೆ ಈರೀತಿಯಾಗಿ ಕರವನ್ನು ಹೇರಿದ್ದೀರಿ. ಆದರೆ ಈ ಹೊರೆ ನಿಮ್ಮ ಮೇಲೆ ಬೀಳದಂತೆ ಮಾಡಿಕೊಂಡು ಅದನ್ನು ಬೇರೆಯವರ ಮೇಲೆ ಬೀಳುವಂತೆ ಮಾಡುತ್ತಿದ್ದೀರಿ ಈರೀತಿ ನಿಮ್ಮ ಸುಖಕ್ಕಾಗಿ ಬಡವರ ಹೆಸರಿನಲ್ಲಿ ಮಕ್ಕಳ ಹೆಸರಿನಲ್ಲಿ ಶ್ರೀಸಾಮಾನ್ಯರ ಹೆಸರಿನಲ್ಲಿ ಇವತ್ತು ಏನೊಂದು ತೆರಿಗೆಯನ್ನು ವಸೂಲು ಮಾಡುತ್ತಿದ್ದೀರಿ ಅದನ್ನು ನಾವು ವಿರೋಧಿಸದೇ ಬೇರೆ ಮಾರ್ಗವೇ ಇಲ್ಲ. ಆದರೆ ಇವತ್ತು ನಾವು ಇದರಲ್ಲಿ ಸ್ವಾಗತಿಸಬೇಕಾದ ಒಂದೇ ಒಂದು ವಿಷಯ ಎಂದರೆ ಶಾಲಾಕಟ್ಟಡಗಳಿಗೋಸ್ಕರ ಏನು ೪೫೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ ಇದು ಮಾತ್ರ ಸ್ವಾಗತಾರ್ಹವಾದುದು. ಆದರೆ ಈ ರೀತಿ ಹೆಲ್ತ್ ಸೆಸ್, ಎಜುಕೇಷನ್ ಸೆಸ್ ಎಂದು ಜನಗಳ ಮೇಲೆ ಹಾಕಿ ವಸೂಲು ಮಾಡಿ ಅಲ್ಲಿಂದ ತೆಗೆದು ಇಲ್ಲಿಗೆ ಕೊಡಬೇಕೆ ? ಎಂಬುದು ನನ್ನ ಪ್ರಶ್ನೆ. ಇವತ್ತು ನಮ್ಮ ಮಂತ್ರಿ ಮಂಡಲದ ಮಂತ್ರಿಗಳ ಬಗ್ಗೆ ನಾನು ಹೇಳುವುದೇನಂದರೆ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂಬಂತೆ ಈಗ್ಗೆ ೩ ವರ್ಷಗಳ ಹಿಂದೆ ನಾನು ಕೇಳಿದ್ದ ಪ್ರಶ್ನೆಗೆ ಚೀಫ್ ಮಿನಿಸ್ಟರ್‌ರವರಿಗೆ ಒಂದು ದಿನಕ್ಕೆ ೮೧೧ ರೂಪಾಯಿ ಖರ್ಚು ಬರುತ್ತದೆ., ಪ್ರಧಾನ ಮಂತ್ರಿಗಳಿಗೆ ೧ ದಿನಕ್ಕೆ ೨೫ಸಾವಿರ ರೂಪಾಯಿ ಖರ್ಚು ಬರುತ್ತದೆ, ಎಂದು ಹೇಳಿದ್ದೀರಿ. ಆದರೆ ಈ ಖರ್ಚು ಇವತ್ತು ೫೦ ಸಾವಿರ ರೂಪಾಯಿ ಇರಬಹುದು. ಅಥವಾ ಅದರ ಮೂರರಷ್ಟು ಇರಬಹುದು. ಅದೇ ರೀತಿ ಆರ್. ಎ. ಡಬ್ಲ್ಯು. ಗೆ ಕೇಂದ್ರ ಸರ್ಕಾರ ೨೮೨ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಮಾನ್ಯ ಕೃಷ್ಣನ್‌ರವರು ಹೇಳಿದಂತೆ ನಮ್ಮ ಜನರ ರಕ್ತವನ್ನು ಹೀರಿ, ನಮ್ಮ ಜನರ ಚರ್ಮವನ್ನೇ ಸುಲಿದು ತಮಟೆ ಮಾಡಿ ಹೊಡೆಯುವ ಬದಲು ನಮಗೆ ನ್ಯಾಯವಾಗಿ ಸಲ್ಲಬೇಕಾದ ಹಣವನ್ನು ಕೇಂದ್ರಸರ್ಕಾರದಿಂದ ಪಡೆದುಕೊಳ್ಳುವುದಕ್ಕೆ ಏಕೆ ಹಿಂದೇಟು ಹೊಡೆಯುತ್ತಿದ್ದೀರಿ ಎಂದು ಕೇಳಬಯಸುತ್ತೇನೆ.

3-30 P.M.

ನಮ್ಮ ರಾಜ್ಯದಲ್ಲಿಯೇ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಟೀಚರ್ಸ್ ವೆಲ್‌ಫೇರ್ ಫಂಡ್ ಎಂದು ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿದ್ದೀರಿ, ಸ್ಟೂಡೆಂಟ್ ವೆಲ್‌ಫೇರ್ ಫಂಡ್ ಎಂದು ಹುಡುಗರಿಂದ ವಸೂಲು ಮಾಡುತ್ತಿದ್ದೀರಿ, ಬೆಟರ್‌ಮೆಂಟ್ ಫೀಸ್ ಎಂದು ತೆಗೆದುಕೊಳ್ಳುತ್ತಿದ್ದೀರಿ, ಒಂದು ತಿಂಗಳಿಗ ಏಳು ರೂಪಾಯಿಗಳಿಂದ ಹನ್ನೊಂದುರೂಪಾಯಿಗಳ ತನಕ ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿದ್ದೀರಿ. ಈ ರೀತಿಯಾಗಿ ವಸೂಲು ಮಾಡಿದಂಥ ಹಣ ಎಲ್ಲಿ ಹೋಗುತ್ತದೆ ? ಕೋಟಿ ಗಟ್ಟಲೆ ಬರತಕ್ಕ ಹಣ ಎಲ್ಲಿ ಹೋಗುತ್ತದೆ ಎಂದು ಕೇಳಬೇಕಾಗಿದೆ. ವಿದ್ಯಾರ್ಥಿಗಳಿಂದ ವಸೂಲು ಮಾಡಿದಂಥ ಹಣದಿಂದ ಮಕ್ಕಳ ಉಪಯೋಗಕ್ಕಾಗಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಏತಕ್ಕೆ ಉಪಯೋಗಿಸಬಾರದು ? ಹಳ್ಳಿಗಳಲ್ಲಿ ಉಪಾಧ್ಯಾಯರ ಮನೆಗಳನ್ನು ಕಟ್ಟಲು ಏತಕ್ಕೆ ಉಪಯೋಗಿಸಬಾರದು. ? ಇದರ ಲೆಕ್ಕ ಕೇಳಿದರೆ ನೇರವಾಗಿ ಖಚಿತವಾದ ಉತ್ತರ ಕೊಟ್ಟಿಲ್ಲ. ಈ ಬಗ್ಗೆ ಖಚಿತವಾದ ಉತ್ತರವನ್ನು ಕೊಡ ಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಹಳ್ಳಿಯಲ್ಲಿರುವ ಶಾಲಾಕಟ್ಟಡಗಳ ಬಗ್ಗೆ ಈ ಗಾಗಲೇ ಮಾನ್ಯ ಸ್ನೇಹಿತರನೇಕರು ಬಹಳ ವಾಗಿ ಹೇಳಿದ್ದಾರೆ. ಪಟ್ಟಣಗಳಲ್ಲಿರುವಂಥ ಜನರಿಗೆ ಪ್ರತಿಭಟನೆ ಮಾಡುವಂಥ ಶಕ್ತಿ ಇರುತ್ತದೆ. ಅವರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೀರಿ, ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳು ಯಾವ ಪ್ರತಿಭಟನೆಯನ್ನು ಮಾಡುವುದಿಲ್ಲ. ಯಾವ ಮಾತನ್ನು ಆಡುವುದಿಲ್ಲವೆಂದು ಅತ್ತ ಕಡೆ ಗಮನವನ್ನು ಕೊಡದೇ ಇರುವುದು ಅಷ್ಟು ಸೂಕ್ತವಲ್ಲವೆಂದು ಹೇಳಬಯಸುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ನಮ್ಮ ಮಲೆನಾಡು ಪ್ರದೇಶದಲ್ಲಿ ಮಳೆಗಾಲದಲ್ಲಿ ಅಪಾರ ವಾದ ಮಳೆಯಾಗುತ್ತದೆ. ಅಲ್ಲಿ ಶಾಲಾ ಕಟ್ಟಡಗಳ ಕೊರತೆಯಿಂದಾಗಿ ಎಷ್ಟೋಕಡೆ ದೊಡ್ಡ ದೊಡ್ಡ ಮರಗಳ ಕೆಳಗಡೆ ಶಾಲೆಗಳನ್ನು ನಡೆಸುತ್ತಿರುವ ಸಂದರ್ಭವು ಇರುತ್ತದೆ. ಮಳೆಗಾಲದಲ್ಲಿಯಂತೂ ಮರಗಳ ಕೆಳಗಡೆ ತರಗತಿಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ರತಕ್ಕ ಶಾಲಾ ಕಟ್ಟಡಗಳ ಕೊರತೆಯನ್ನು ನೀಗಿಸಬೇಕಾದುದು ಅತ್ಯಂತ ಮುಖ್ಯವಾದ ಕೆಲಸ. ಈ ಬಗ್ಗೆ ತಾವು ಏನು ಯೋಜನೆ ಹಾಕಿದ್ದೀರಿ ಅದಕ್ಕೆ ನಮ್ಮ ಸಂಪೂರ್ಣವಾದ ಸ್ವಾಗತವಿದೆ. ಅದಕ್ಕೆ ಬೇಕಾಗುವ ಹಣವನ್ನು ಸಹಾಯಮಾಡಬೇಕೆನ್ನುವ ಅಭಿಪ್ರಾಯವೂ ನಮಗಿದೆ. ನಮ್ಮ ಹಳ್ಳಿಯ ಕಡೆ ಒಂದು ಗಾದೆಯನ್ನು ಹೇಳುತ್ತಾರೆ ''ಹಾವನ್ನು ಬಡಿದು ಹದ್ದಿಗೆ ಹಾಕಿದಹಾಗೆ'' ಎಂದು ಆ ರೀತಿ ಮಕ್ಕಳ ಹೆಸರನ್ನು ಮುಂದೆ ಒಡ್ಡಿ ಅವರ ಮುಖ ಮನಸ್ಸನ್ನು ಕಣ್ಣಿಗೆ ತೋರಿಸಿ ಮೆರೆಯುವ ಸಾಹಸ ಮಾಡಿದ್ದೀರಿ. ಟ್ಯಾಕ್ಸ್ ೫ ಪೈಸೆಯಿದ್ದುದನ್ನು ೬ ಪೈಸೆ ಮಾಡಿದ್ದೇವೆ, ೫-೧೦ ಪೈಸೆ ಇದ್ದುದನ್ನು ೯-೧೫ ಪೈಸೆಗೆ ಮಾತ್ರ ಏರಿಸಿದ್ದೇವೆ ಎಂದು ಹೇಳುತ್ತೀರಿ. ತಮಗೇನೋ ಪೈಸೆ ಎಂದರೆ ಕಡಿಮೆ ಬೆಲೆ ಇರಬಹುದು, ಆದರೆ ಈವತ್ತಿನದಿವಸ ಹಳ್ಳಿಗಳಲ್ಲಿ ತೆರಿಗೆಯನ್ನು ಕೊಡತಕ್ಕ ಜನರಿಗೆ ಇದರಿಂದ ನೇರವಾದ ಪರಿಣಾಮವಾಗುತ್ತಿದೆ. ರೈತ ಬೆಳೆದಂತ ಎಲ್ಲ ಬೆಳೆಗಳ ಬೆಲೆಯು ಕುಸಿಯುತ್ತಾ ಇದೆ. ಆದರೆ ರೈತನು ಕೊಳ್ಳತಕ್ಕ ಮಾಲಿನ ಬೆಲೆಯೂ ಯಾವುದೇ ಕಾರಣದಿಂದ ಗಗನವನ್ನು ಮುಟ್ಟಿದಂತ ಬೆಲೆಗಳು ಇನ್ನೂ ಕೆಳಕ್ಕೆ ಇಳಿದಿಲ್ಲ. ಹೀಗೆ ಸಮತೋಲನವಿಲ್ಲದಿರುವುದರಿಂದ ಹಳ್ಳಿಗಳಲ್ಲಿರತಕ್ಕಂಥ ರೈತರು ಸಂಪೂರ್ಣ ವಾಗಿ ನೆಲವನ್ನು ಹಿಡಿದುಬಿಟ್ಟಿದ್ದಾರೆ. ಈ ಬಗ್ಗೆ ಗಮನಹರಿಸಿ ರೈತಾಪಿಜನರಮೇಲೆ ಕರಬಾರವನ್ನು ಹೆಚ್ಚಿಗೆ ಹೊರಿಸದ ಹಾಗೆ ನೋಡಿಕೊಳ್ಳಬೇಕೆಂದು ಮಾನ್ಯ ಶ್ರೀ ಕೃಷ್ಣಾರವರಿಗೆ ಹೇಳಿದರೂ ಸಹಾ ಅವರು ಕೆಲವು ಮೆಂಷಿನರಿಗಳ ಮೇಲೆ ತೆರಿಗೆಯನ್ನು ಹಾಕುವುದು ತಪ್ಪಲಿಲ್ಲ. ಈ ಬಗ್ಗೆ ತಾವು ತೀವ್ರವಾಗಿ ಯೋಚನೆ ಮಾಡುವುದು ಯೋಗ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೇರ್ ಸಂಸ್ಥೆಯವರು ಒದಗಿಸತಕ್ಕಂಥ ಆಹಾರ ಸಾಮಗ್ರಿಗಳ ಬಗ್ಗೆ ನಡೆದಿರುವ ಅವ್ಯವ ಹಾರದ ಬಗ್ಗೆ ಹೇಳುವುದಾದರೆ, ಬೆಂಗಳೂರಿಗೆ ಸೇರಿದ ಮಡಿವಾಳದಲ್ಲಿ ಹೆಂಚಿನ ಮನೆ ಸುಮಾರು ಒಂದೂವರೆ ಅಡಿ ಜಾಗದಲ್ಲಿ ನಾಲ್ಕು ಹೆಂಚುಗಳನ್ನು ತೆಗೆದು ರವೆಮೂಟೆ ಮತ್ತು ಸಕ್ಕರೆಮೂಟೆಯನ್ನು ಮಹಡಿಮನೆಯಿಂದ ತೆಗೆದುಕೊಂಡು ಹೋಗಿದ್ದಾರೆಂದು ಹೇಳಿದರೆ ಯಾವ ಬಾಯಲ್ಲಿಯಾವ ಮುಖದಲ್ಲಿ ನಗಬೇಕೋ ನನಗಂತೂ ಗೊತ್ತಾಗುತ್ತಿಲ್ಲ. ಇಂಥ ಒಂದು ಭ್ರಷ್ಟಾಚಾರ ಇಲ್ಲಿ ನಡೆಯುತ್ತಾ ಇದ್ದರೂ ಕೂಡ ಕಣ್ಣನ್ನು ಮುಚ್ಚಿಕೊಂಡು ಕುಳಿತಿರತಕ್ಕಂಥ ಸರ್ಕಾರವೇನಾದರೂ ಒಳ್ಳೆಯದನ್ನು ಮಾಡುತ್ತದೆ ಎನ್ನುವ ಆಶಯವನ್ನು ಇಟ್ಟುಕೊಳ್ಳುವುದರ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ.

ಮಾನ್ಯ ಸಚಿವರು ಬಹಳ ಒಳ್ಳೆಯ ರೀತಿಯಲ್ಲಿ ಸುಂದರವಾದ ಭಾಷಣದಲ್ಲಿ ಮಾತನಾಡಿ ನಮ್ಮ ಮೇಲೆ ಟ್ಯಾಕ್ಸನ್ನು ಹೇರಿರುತ್ತಾರೆ. ಒಂದು ಮುಖ್ಯವಾದ ವಿಷಯವನ್ನು ಹೇಳುವುದಾದರೆ ಮಕ್ಕಳ ಶಾಲಾ ಕಟ್ಟಡಗಳನ್ನು ಕಟ್ಟುವ ಸಂದರ್ಭದಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಸುಲಭ ಬೆಲೆಯಲ್ಲಿ ಮರವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಈ ಬಗ್ಗೆ ಹೇಳುವುದಾದರೆ ಕಾಡು ಇಲಾಖೆಯವರು ನಡೆದು ಕೊಳ್ಳುತ್ತಿರುವ ರೀತಿಯನ್ನು ಯಾವರೀತಿಯಲ್ಲಿ ಹೇಳಬೇಕೋ ಗೊತ್ತಾಗುತ್ತಿಲ್ಲ. ಶಾಲಾ ಕಟ್ಟಡವನ್ನು ಕಟ್ಟಿ ಮರವನ್ನು ತರುವುದಕ್ಕೆ ಫಾರೆಸ್ಟ್‌ಗೆ ಹೋದರೆ, ಫಾರೆಸ್ಟ್ ಇಲಾಖೆಯವರು ಬುಡದಿಂದ ತುದಿಯವರೆಗೆ, ಅಲ್ಲಿಂದ ಇಲ್ಲಿಯವರೆಗೂ ಶುರು ಮಾಡಿಕೊಂಡು ಮರವನ್ನು ಕೊಡುವ ಹೊತ್ತಿಗೆ ಕಟ್ಟಿರುವ ಕಟ್ಟಡದ ಗೋಡೆಗಳು ಬಿದ್ದುಹೋಗಿರುತ್ತದೆ. ಇದರ ಬದಲು ಸರ್ಕಾರದವರು ಶಾಲಾ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಕಳಕಳಿ ಇದ್ದರೆ, ಮಕ್ಕಳ ಬಗ್ಗೆ ಕಳಕಳಿ ಇದ್ದರೆ, ನೇರವಾಗಿ ಶಾಲೆಯನ್ನು ಕಟ್ಟಲು ಮಂಜೂರಾದ ತಕ್ಷಣವೇ ಕಟ್ಟಡಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಕೇವಲ ೨ ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಹಾಕಿದ್ದೇವೆಂದು ಹೇಳಿರುತ್ತೀರಿ, ಅದೇನು ತಮಗೆ ದೊಡ್ಡ ವಿಷಯವಲ್ಲ ಲ್ಯಾಂಡ್ ರೆವಿನ್ಯೂ ಮೇಲೆ ೬೦ ಲಕ್ಷ ಹಾಕಿದ್ದೀರಿ ಪ್ರಾಪರ್ಟಿ ಮೇಲೆ ೯೦ ಲಕ್ಷ ಟ್ಯಾಕ್ಸ್ ಹಾಕಿದ್ದೀರಿ ಎಕ್ಸೈಸ್ ಡ್ಯೂಟಿ ಎಂದು ಒಂದು ಕೋಟಿ ೨೦ ಲಕ್ಷ ಟ್ಯಾಕ್ಸ್ ಹಾಕಿದ್ದೀರಿ, ಇನ್ನೂ ಬೇರೆ ಏನಾದರೂ ಇದ್ದರೆ ಅದರ ಮೇಲೂ ಹಾಕಿ ಬೇಡವೆಂದು ನಿಮಗೆ ಹೇಳುವವರು ಯಾರು ಇದ್ದಾರೆ. ಜನ ನಿಮಗೆ ಎದುರು ನಿಂತು ಮಾತನಾಡುವುದಕ್ಕೆ ಅವರ ಕತ್ತನ್ನು ಹಿಸುಕಿದ್ದೀರಿ. ಪತ್ರಿಕೆಗಳ ಮುಖಾಂತರ ಹೇಳೋಣವೆಂದರೆ ಅದರ ಕತ್ತನ್ನು ಹಿಸುಕಿದ್ದೀರಿ, ಪ್ರಜಾಪ್ರಭುತ್ವದಲ್ಲಿ ಎಲ್ಲ ಹಕ್ಕುಗಳನ್ನು ಮೊಟಕುಮಾಡಿದ್ದೀರಿ ಜನಗಳು ತಮಗಾಗಿರುವ ಅನ್ಯಾಯದಬಗ್ಗೆ ವಿರೋಧವನ್ನು ವ್ಯಕ್ತಪಡಿಸುವ ಶಕ್ತಿಹರಣ ಮಾಡಿದ್ದೀರಿ. ಸ್ವಾತಂತ್ರಹರಣದ ರಾಕ್ಷಸ ಅವತಾರವಾಗಿ ಕುಳಿತಿದ್ದೀರಿ; ತಾವು ಭಸ್ಮಾಸುರರಾಗಿದ್ದೀರಿ. ಈವತ್ತಿನ ದಿವಸ ಜನರು ಮಾತನಾಡುವುದಕ್ಕೆ ಕಷ್ಟವಾಗಿರುತ್ತದೆ. ಹಳ್ಳಿಗಳಲ್ಲಿರತಕ್ಕ ನಮ್ಮ ಜನರು ಹೇಳುತ್ತಾರೆ ಇದರ ಬಗ್ಗೆ ತಾವು ಮತ್ತೊಮ್ಮೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶಾಲಾ ಕಟ್ಟಡಗಳನ್ನು ಕಟ್ಟುವುದರ ಬಗ್ಗೆ ಏನಾದರೂ ಹೊಸ ಮಾರ್ಗವನ್ನು ಹುಡುಕಬೇಕೆಂದು ಕೇಳಿಕೊಳ್ಳುತ್ತೇನೆ. ತಾಲ್ಲೂಕ್ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ತಮ್ಮ ಹಣದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಕೂಡದೆಂದು ಒಂದು ಸರ್ಕ್ಯುಲರ್‌ನ್ನು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಹೊರಡಿಸಿದ್ದಾರೆ. ಸೋಸಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಒಂದು ಉಪ ಸರ್ಕಾರದಂತೆ ವರ್ತಿಸುತ್ತಿದೆಯೆಂದು ನಾನು ಈವತ್ತಿನ ದಿವಸ ಹೇಳಬೇಕಾಗಿದೆ. ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ತಾಲ್ಲೂಕ್ ಬೋರ್ಡ್‌ಗಳು, ಪಂಚಾಯತಿಗಳು ಒಂದು ಸಾವಿರದಿಂದ ಐದು ಸಾವಿರದವರೆಗೂ ಕೊಡುವುದಕ್ಕೆ ಮುಂದೆಬಂದರೂ ಕೂಡ ಅದಕ್ಕೆ ಅವಕಾಶವಿರುವುದಿಲ್ಲ. ಈ ಒಂದು ಆಜ್ಞೆಯನ್ನು ರದ್ದುಪಡಿಸಿ ತಾಲ್ಲೂಕ್‌ಬೋರ್ಡ್‌ಗಳು, ಮತ್ತು ಪಂಚಾಯಿತಿಗಳು ಈ ಒಂದು ಕೆಲಸಕ್ಕೆ ನೆರವು ನೀಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟೊಂದು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ತಂದಿರತಕ್ಕಂಥ ಬಿಲ್‌ನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ ಒಬಿರಾಯನ ಕಾಲದಲ್ಲಿದ್ದಂತ ತೆರಿಗೆಯನ್ನು ಇವತ್ತು ಆವಶ್ಯಕವಾಗಿ ಪುನರ್‌ಪರಿಶೀಲನೆ ಮಾಡಿ ತೆರಿಗೆ ಹಾಕುವುದಕ್ಕೆ ಪ್ರಯತ್ನಪಟ್ಟು ಈ ಬಿಲ್ಲನ್ನು ತಂದಿದ್ದಾರೆಂದು ನಾನಾದರೂ ಭಾವಿಸುತ್ತೇನೆ. ನನಗೆ ಆಶ್ಚರ್ಯ ಏನು ಎಂದರೆ ನಮ್ಮ ಸ್ನೇಹಿತರುಗಳಿಗೆ ಕೆಲಸ ಆಗಬೇಕು; ತೆರಿಗೆ ಮಾತ್ರ ಹಾಕಬಾರದು. ಇದು ಯಾವ ನೀತಿಯೋ ನನಗಂತು ಗೊತ್ತಿಲ್ಲ. ನಮ್ಮ ಹಳ್ಳಿಯ ಕಡೆ ಒಂದು ಗಾದೆ; ಇದನ್ನು ಮಾನ್ಯ ಲಿಂಗಪ್ಪನವರಿಗೆ ನೆನಪಿಗೆ ತರುತ್ತೇನೆ. "ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಇಷ್ಟ" ಎಂದು ಕೆಲಸ ಎಲ್ಲಾ ಆಗಬೇಕು; ತೆರಿಗೆ ಮಾತ್ರ ಹಾಕಬಾರದು. ನನಗೆ ಏನು ಅನಿಸುತ್ತದೆ ಎಂದರೆ ಯಾರು ಯಾರು ತೆರಿಗೆ ಹಾಕಕೂಡದು ಎಂದು ಹೇಳುತ್ತಾರೋ ಅಂತವರು ಹೇಳಿದ ಕೆಲಸವನ್ನು ಮಾಡಲೇಬಾರದು. ಇವತ್ತು ಶಾಲಾ ಕಟ್ಟಡಗಳನ್ನು ೨-೩ ಸಾವಿರ ರೂಪಾಯಿಗಳಿಗೆ ಕಟ್ಟತಕ್ಕ ವ್ಯವಸ್ಥೆ ಹೋಯಿತು. ಇವತ್ತು ಕಾಸ್ಟ್ ಆಫ್ ಲೀವಿಂಗ್ ಜಾಸ್ತಿಯಾಗಿದೆ; ಕೂಲಿ ಜಾಸ್ತಿಯಾಗಿದೆ; ಸಿಮೆಂಟ್ ಜಾಸ್ತಿಯಾಗಿದೆ; ಇವತ್ತು ಒಬಿರಾಯನ ಕಾಲದ ರೇಟಿನಲ್ಲಿ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ

ಸಾಧ್ಯವಾಗುವುದಿಲ್ಲ. ಹಾಗಿರುವಾಗ ತೆರಿಗೆ ಹೆಚ್ಚಿಸದೇ ಕಟ್ಟಡ ಕಟ್ಟಿಸಬೇಕು ಎಂದರೆ ಹೇಗೆ ಸಾಧ್ಯ; ಇದನ್ನು ಮಾನ್ಯ ಸದಸ್ಯರುಗಳು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ; ಟ್ರೈಪ್ ಡಿಸ್ಟೈನ್ ಏನು ಇದೆ; ಅದನ್ನು ತಾವು ರದ್ದು ಮಾಡಿದರೆ ವಾಸಿ. ಇವತ್ತು ಸರ್ಕಾರ ನಾಲ್ಕುವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದೆ; ಇವತ್ತು ೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಒಂದು ಶಾಲಾ ಕಟ್ಟಡ ಕಟ್ಟುವುದಕ್ಕೆ ಆಗುವುದಿಲ್ಲ. ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳು ಹಣ ವಸೂಲು ಮಾಡಿ ಕಟ್ಟಡ ಕಟ್ಟಬೇಕಾದರೆ ಕಣ್ಣಲ್ಲಿ ನೀರು ಬರುತ್ತದೆ. ಆ ದೃಷ್ಟಿಯಿಂದ ಸರ್ಕಾರ ಸಾಕಷ್ಟು ಧಾರಾಳತನ ತೋರಿಸಬೇಕು; ಸರ್ಕಾರದವತಿಯಿಂದಲೇ ಕಟ್ಟಡ ಕಟ್ಟಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ಮಾನ್ಯ ಸನದಿಯವರು ಹುಬ್ಬಳ್ಳಿ ಶಾಲಾ ಕಟ್ಟಡಗಳ ಬಗ್ಗೆ ಹೇಳಿದರು; ಅನೇಕ ತಾಲ್ಲೂಕುಗಳಲ್ಲಿ ಶಾಲಾ ಕಟ್ಟಡಗಳು ವಿದ್ಯಾರ್ಥಿಗಳ ತಲೆ ಮೇಲೆ ಕಳಚಿ ಬೀಳತಕ್ಕ ಪರಿಸ್ಥಿಯಲ್ಲಿ ಇವೆ; ಇದು ಎಲ್ಲಾ ಕಡೆಯೂ ಇದೆ. ನಮ್ಮ ಕ್ಷೇತ್ರದಲ್ಲಿಯೂ ಇಂಥ ಪರಿಸ್ಥಿತಿ ಇದೆ; ಆದರೂ ನಾನು ಮಾತನಾಡುವುದು ಸರಿಯಲ್ಲ. ಯಾವುದೋ ಕಾಲದಲ್ಲಿ ಕಟ್ಟಿಸಿದಂತ ಕಟ್ಟಡಗಳು ರಿಪೇರಿ ಇಲ್ಲದೇ ಕಳಚಿ ಬೀಳತಕ್ಕ ಪರಿಸ್ಥಿತಿಯಲ್ಲಿ ಇವೆ. ಬಹುಶಃ ತಾವು ಹಾಕಿಕೊಟ್ಟಿರತಕ್ಕಂಥ ಎಸ್ಟಿಮೇಟಿಗೆ ತಕ್ಕಂತೆ ಕಟ್ಟಡ ಕಟ್ಟುವುದಕ್ಕೆ ಸಾರ್ವಜನಿಕ ಮುಖಂಡರು ಯಾರು ಮುಂದೆ ಬರುವುದಿಲ್ಲ. ಅರಣ್ಯ ಇಲಾಖೆಯಿಂದ ನಾಟಾ ತೆಗೆದುಕೊಳ್ಳಬೇಕು; ನಾಟಾವನ್ನು ಮೊದಲೇ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ, ಗೊತ್ತು ಮಾಡಿದ ಡಿಪೋದಲ್ಲಿ ಹೋಗಿ ತೆಗೆದುಕೊಳ್ಳಬೇಕು. ಈ ಎಲ್ಲಾ ಅವ್ಯವಸ್ಥೆಯಿಂದ ಶಾಲ ಕಟ್ಟಡ ಕಟ್ಟುವುದಕ್ಕೆ ಮುಂದೆ ಬರತಕ್ಕಂಥ ಜನ ಕಡಿಮೆಯಾಗಿದ್ದಾರೆ. ಒಂದು ಕಾಲದಲ್ಲಿ ಶಾಲಾ ಕಟ್ಟಡವನ್ನು ಕಂಟ್ರಾಕ್ಟ್ ಕೊಟ್ಟು ಕಟ್ಟಿಸತಕ್ಕಂಥ ಕಾಲವೂ ಇತ್ತು; ಇವತ್ತು ಶಾಲಾ ಕಟ್ಟಡ ಕಟ್ಟಲಿಕ್ಕೆ ಹೋದರೆ, ಎಲ್ಲಿ ನಮ್ಮ ಕೈ ಕಚ್ಚುತ್ತದೆಯೋ ಎನ್ನುವ ಭಯ ಇದೆ; ಆದುದರಿಂದ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಯಾರು ಮುಂದೆ ಬರುತ್ತಾ ಇಲ್ಲ.

ಶ್ರೀ ಎನ್. ರಾಚಯ್ಯ.—ಮೊನ್ನೆ ಮಂತ್ರಿಮಂಡಲದ ಸಭೆಯಲ್ಲಿ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ಸರ್ಕಾರದಿಂದ ನಾಲ್ಕುವರೆ ಸಾವಿರ ರೂಪಾಯಿಗಳನ್ನು ಗ್ರ್ಯಾಂಟ್ ರೂಪದಲ್ಲಿ ಕೊಡುತ್ತೇವೆ. ಅದರೊಂದಿಗೆ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳ ಮೂಲಕ ಸ್ಥಳೀಯವಾಗಿ ಸಿಗತಕ್ಕಂಥ ವಸ್ತುಗಳನ್ನು ಉಪಯೋಗಿಸಿ ಸಾಧ್ಯವಾದಷ್ಟು ಹೆಚ್ಚು ಹೆಚ್ಚಿಗೆ ಕಟ್ಟಡಗಳನ್ನು ಕಟ್ಟಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಾಲ್ಲೂಕು ಬೋರ್ಡು ಮತ್ತು ಗ್ರಾಮ ಪಂಚಾಯ್ತಿಗಳು ಕಾಂಟ್ರಿಬ್ಯೂಷನ್ ಕೊಡಬಾರದು ಎಂದು ಸರ್ಕ್ಯುಲರ್ ಕಳುಹಿಸಿದ್ದೀರಲ್ಲಾ.

ಶ್ರೀ ಎನ್. ರಾಚಯ್ಯ.—ಸ್ಥಳೀಯ ಸಂಸ್ಥೆಗಳಲ್ಲಿ ಸಾಕಾದಷ್ಟು ಹಣ ಇಲ್ಲದೇ ಇರುವುದರಿಂದ, ಸಾಕಷ್ಟು ವರಮಾನ ಇಲ್ಲದೇ ಇರುವುದರಿಂದ ಹಣ ಕೊಡುವುದು ಸೂಕ್ತವಲ್ಲ ಎಂದು ಸರ್ಕಾರ ತೀರ್ಮಾನ ಮಾಡಿದೆ. ಸಾರ್ವಜನಿಕರಿಂದ ನಿಮ್ಮಂತವರ ಸಹಾಯದಿಂದ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಿ ಗ್ರಾಮಾಂತರ ಪ್ರದೇಶಗಳ ಪುನರ್ ವ್ಯವಸ್ಥೆಗೆ ಹೆಚ್ಚು ಅನುಕೂಲ ಮಾಡಬೇಕೆಂದು ಇದ್ದೇವೆ.

ಶ್ರೀ ಎಸ್. ಎಂ. ಶೀಗ್ಗಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳು ಹೇಳಿದ ವಿಷಯವನ್ನು ನಾನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಸ್ಥಳೀಯ ವಂತಿಗೆಯನ್ನು ಮುಖಂಡರು ಕೊಡಬೇಕು ಎನ್ನುವ ನಿಯಮ ಇದೆ. ಸಾರ್ವಜನಿಕರಿಂದ ವಂತಿಗೆ ವಸೂಲಾಗದೇ ಇದ್ದರೆ; ಕಂಟ್ರಾಕ್ಟರ್ ತನ್ನ ಕೈಯಿಂದ ಕಟ್ಟಡ ಕಟ್ಟುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಒಂದು ಕಟ್ಟಡಕ್ಕೆ ಸುಮಾರು ೧೦ ಸಾವಿರ ರೂಪಾಯಿ ಆಗುತ್ತದೆ; ೧೦ ಸಾವಿರ ರೂಪಾಯಿ ಕಟ್ಟಡ ಕಟ್ಟುವುದಕ್ಕೆ ಕಂಟ್ರಾಕ್ಟ್ ಕೆಲಸ ಮಾಡತಕ್ಕವರು ಯಾರೂ ಮುಂದೆ ಬರುತ್ತಾ ಇಲ್ಲ ತಾವು ಕಳುಹಿಸಿದಂತ ಗ್ರ್ಯಾಂಟ್ ಕೂಡ ಉಳಿದುಕೊಳ್ಳುವ ಪರಿಸ್ಥಿತಿ ಇದೆ. ಇದಕ್ಕೆ ಸರ್ಕಾರವೇ ಯೋಚನೆ ಮಾಡಿ; ಸರ್ಕಾರದ ವತಿಯಿಂದ ಶಾಲಾ ಕಟ್ಟಡ ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನನ್ನ ಅರಿಕೆ. ಕಂಟ್ರಾಕ್ಟರ್ ಮುಂದೆ ಬಾರದೇ ಇರುವುದು ಒಂದು ದೃಷ್ಟಿ! ಒಂದು ವೇಳೆ ಕಂಟ್ರಾಕ್ಟರ್ ಮುಂದೆ ಬಂದರೂ ಕೂಡ; ಅರಣ್ಯ ಇಲಾಖೆಯಿಂದ ನಾಟಾಗಳನ್ನು ಪಡೆಯ ಬೇಕಾಗಿರುವುದರಿಂದ; ಅಷ್ಟು ಸುಲಭವಾಗಿ ನಾಟಾ ದೊರಕುವುದಿಲ್ಲ; ದಿನಗಟ್ಟಲೇ ಕಾಯಬೇಕಾಗುತ್ತದೆ. ನಮ್ಮ ಕಡೆ ವಿಪರೀತವಾದ ಮಳೆ ಬರುವ ಪ್ರದೇಶ ಗೋಡೆ ಕಟ್ಟಿ ನಾಟಕ್ಕಾಗಿ ಕಾಯುವುದು ಸಾಧ್ಯ ವಾಗುವುದಿಲ್ಲ. ಖಾಸಗೀಯವರಿಗೆ ಕಂಟ್ರಾಕ್ಟ್ ಕೊಟ್ಟು ಅವರ ಮೇಲೆ ಜವಾಬ್ದಾರಿ ಹೊರಿಸುವುದಕ್ಕಿಂತ ಸರ್ಕಾರ ತನ್ನ ವತಿಯಿಂದಲೇ ಕಟ್ಟಡ ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಎರಡನೇ ವಿಚಾರ ಎಂದರೆ ಮಕ್ಕಳಿಗೆ ಮಧ್ಯಾಹ್ನದ ಉಪಹಾರದ ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ ಅವ್ಯವಹಾರದ ಬಗ್ಗೆ ಪ್ರತಿಯೊಬ್ಬರೂ ಹೇಳುತ್ತಾರೆ; ನಾನು ಕೂಡ ಹೇಳುತ್ತೇನೆ. ಈ ಅವ್ಯವಹಾರವನ್ನು ಹೋಗಲಾಡಿಸುವ ರೀತಿ ಹೇಗೆ? ಎಂದರೆ, ಇದರ ಮೇಲೆ ಸಾರ್ವಜನಿಕರ ಜವಾಬ್ದಾರಿ ಇರುವುದಿಲ್ಲವೇ? ಈ ಮಧ್ಯಾಹ್ನದ ಉಪಹಾರ ಕೊಡುವ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿರುವಾಗ ಸಾರ್ವಜನಿಕ ಮುಖಂಡರು ಆಸಕ್ತಿವಹಿಸಿದರೆ ಚೆನ್ನಾಗಿ ನಡೆಯುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಬೆಟರ್‌ಮೆಂಟ್ ಕಮಿಟಿ ಎಂದು ಇರುತ್ತದೆ; ಇದರ ಕೆಲಸವಾದರೂ ಏನು? ಮಧ್ಯಾಹ್ನದ ಉಪಹಾರದ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಯಾವ ಅವ್ಯವಹಾರವೂ ಇರುವುದಿಲ್ಲ ಸ್ಥಳೀಯ ಮುಖಂಡರು ಎಲ್ಲಿಯವರೆಗೆ ಕಣ್ಣು ಮುಚ್ಚಿಕೊಂಡು ಇರುತ್ತಾರೋ, ಅಲ್ಲಿಯವರೆಗೆ ಇದು ನಡೆಯುತ್ತಲೇ ಇರುತ್ತದೆ. ತಿನ್ನುವವರಿಗೆ ಹಾಸಿಗೆ ಹಾಸಿ ಕೊಟ್ಟ ಹಾಗೆ ಆಗುತ್ತದೆ. ಅನಾವಶ್ಯಕವಾಗಿ ಪುಕಾರು ಮಾಡುವುದಕ್ಕಿಂತ ಸ್ಥಳೀಯ ಮುಖಂಡರುಗಳು ಎಲ್ಲಿ ಅವ್ಯವಹಾರ ನಡೆಯುತ್ತದೆ; ಅಂಥಾದ್ದನ್ನು ಬೆಳಕಿಗೆ ತಂದು ತಪ್ಪು ಮಾಡಿದವರಿಗೆ ಶಿಕ್ಷೆ ಮಾಡತಕ್ಕ ವ್ಯವಸ್ಥೆ ಮಾಡಿ ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋದರೆ ಚೆನ್ನಾಗಿ ನಡೆಯುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿ, ಇವತ್ತು ಈ ಬಿಲ್‌ನ್ನು ಸಂಪೂರ್ಣವಾಗಿ ಬೆಂಬಲಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಸ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಮಾನ್ಯ ಮಿತ್ರರು ಈ ಬಿಲ್ಲಿನ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಈ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ ಈ ಸೆಸ್‌ಗಳನ್ನು ಹೆಚ್ಚಿಸುವುದಕ್ಕೆ ಯಾವುದಾದರೂ ಒಂದು ಸೈಂಟಿಫಿಕ್ ಬೇಸಿಸ್ ಇದೆಯೋ ಅಂತ ನೋಡಿದರೆ ಅಂಥಾದ್ದು ಯಾವುದೂ ಕೂಡ ಇದ್ದ ಹಾಗೆ ಕಾಣುತ್ತಾ ಇಲ್ಲ. ಇದರಿಂದ ಎಫೆಕ್ಟ್ ಆಗುವುದು ರೂರಲ್ ಏರಿಯಾದಲ್ಲಿರತಕ್ಕಂಥಾ ರೈತನಿಗೇ ಹೊರತು ಬೇರೆಯಾವರಿಗೆ ಆಗುವುದಿಲ್ಲ. ಅವನು ಲ್ಯಾಂಡ್ ರೆವಿನ್ಯೂ ಕಟ್ಟುತ್ತಾನೆ, ವಾಟರ್ ರೇಟ್‌ನ್ನೂ ಕೂಡ ಕಟ್ಟುತ್ತಾನೆ. ಇದಲ್ಲದೆ ಹೆಲ್ತ್ ಸೆಸ್ ಮತ್ತು ಎಜುಕೇಷನ್ ಸೆಸ್ ಕೂಡ ಈಗಾಗಲೇ ಇದೆ. ಇನ್ನೂ ಇದನ್ನು ಹೆಚ್ಚು ಮಾಡಿ ಆ ರೈತನ ಮೇಲೆ ಹಾಕಿದರೆ ಇವೆಲ್ಲದರ ಬೆನಿಫಿಟ್ ಆ ರೂರಲ್ ಏರಿಯಾದವರಿಗೆ ಸಿಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಿದರೆ ಸಾಕು ಇನ್ನು ಹಳ್ಳಿಗಳ ಈ ಶಾಲಾ ಕಟ್ಟಡದ ಬಗ್ಗೆ ಶ್ರೀಮಾನ್ ಶೀರನಾಳಿ ಚಂದ್ರಶೇಖರವರು ಬಹಳ ವಿವರವಾಗಿ ಹೇಳಿದ್ದಾರೆ. ಎಷ್ಟೋ ಹಳ್ಳಿಗಳಲ್ಲಿ ಸ್ಕೂಲುಗಳಿಗೆ ಕಟ್ಟಡಗಳು ಇಲ್ಲದೆ ಒಂದು ಮರದ ಕೆಳಗೋ ಅಥವಾ ಒಂದು ಗುಡಿಯಲ್ಲೊ ಮಾಡುತ್ತಿದ್ದಾರೆ. ಇನ್ನು ಮಿಡ್ಡೇ ಮೀಲ್ಸ್ ಬಗ್ಗೆ ಹೇಳುವುದಾದರೆ ೩೦೦ ಪ್ರೈಮರಿ ಸ್ಕೂಲುಗಳಲ್ಲಿ ಮತ್ತು ೩೦೦ ಮಿಡಲ್ ಸ್ಕೂಲ್‌ಗಳಲ್ಲಿ ಇದರ ಒಂದು ವ್ಯವಸ್ಥೆ ಏನು ಇದೆ ೧೦ ವರ್ಷದ ಹಿಂದೆ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಇದಕ್ಕೆ ಒಂದು ಪ್ರಾಪರ್ ಸೂಪರ್‌ವಿಷನ್ ಇಟ್ಟರೆ ಇದನ್ನು ಸರಿಯಾಗಿ ಯುಟಿಲೈಸ್ ಮಾಡಿದ್ದಾರೆಯೋ ಎನ್ನುವುದು ತಿಳಿಯುತ್ತದೆ. ಹೀಗೆ ಒಂದು ಸರಿಯಾದ ಸೂಪರ್‌ವಿಷನ್ ಮಾಡುವುದಾದರೆ ಇದರಲ್ಲಿ ಸುಮಾರು ೪೦-೫೦ ಪರ್ಸೆಂಟ್ ಅಷ್ಟು ಎಫಿಷಿಯೆನ್ಸಿ ತರಬಹುದು. ಅನೇಕ ಹಳ್ಳಿಗಳಲ್ಲಿರುವ ಸ್ಕೂಲುಗಳು ಮಳೆ ಬಂದರೆ ನೀರು ಸುರಿಯುತ್ತಾ ಇರುತ್ತದೆ, ಸರಿಯಾದ ಕಟ್ಟಡಗಳೇ ಇಲ್ಲ. ಯಾವನಿಗಾದರೂ ೧೦೦೦ ರೂಪಾಯಿ ಸಿಕ್ಕುತ್ತದೆ ಎಂದರೆ ದನ ಕಾಯುವುದಕ್ಕೋ, ಎಮ್ಮೆ ಕಾಯುವುದಕ್ಕೋ ಹೊರಟು ಹೋಗುತ್ತಾನೆ. ಈ ಕಂಪಲ್ಸರಿ ಎಜುಕೇಷನ್‌ನಲ್ಲಿ ನೀವು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದೀರಿ ಹೇಳಿ ? ಇದರಲ್ಲಿ ಅಷ್ಟು ಯಶಸ್ವಿಯಾಗಲಾರಿರಿ. ಅಷ್ಟೇ ಅಲ್ಲದೆ ಇನ್ನೂ ಇದರ ಮೇಲೆ ೫ ಪರ್ಸೆಂಟ್ ಟ್ಯಾಕ್ಸ್ ಜಾಸ್ತಿ ಮಾಡಿದರೆ ರೂರಲ್ ಏರಿಯಾದಲ್ಲಿರತಕ್ಕಂಥಾ ರೈತನಿಗೆ ಏನು ಪ್ರಯೋಜನ ಇದರಿಂದ ಸಿಕ್ಕುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ನಾನು ಹೇಳುವುದು ಇಷ್ಟೆ. ರಿಚ್ ಫಾರ್ಮರ್ಸ್ ಅನ್ನು ನೀವು ಯಾವ ತಕ್ಕಡಿಯಲ್ಲಿ ಹಾಕಿ ತೂಗುತ್ತೀರೋ ಅದೇ ತಕ್ಕಡಿಯಲ್ಲೇ ಈ ರೂರಲ್ ಫಾರ್ಮರ್ಸ್‌ನ್ನೂ ಹಾಕಿ ತೂಕ ಮಾಡಿದರೆ ನೀವು ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ. ನಿಮ್ಮ ಮನಸ್ಸಿನಲ್ಲಿ ಏನು ಒಂದು ಒಳ್ಳೆಯ ಕೆಲಸ ಮಾಡಬೇಕು ಅಂತ ಇದೆಯೋ ಅದೇರೀತಿಯಾಗಿ ಈ ರೂರಲ್ ಏರಿಯಾದಲ್ಲಿರತಕ್ಕಂಥಾ ಫಾರ್ಮರ್ಸ್‌ನ ಒಂದು ಪರಿಸ್ಥಿತಿ ಬಗ್ಗೆ ಹೊಣೆ ಹೊತ್ತುಕೊಳ್ಳದೇ ಹೋದರೆ ಯಾವರೀತಿಯಾಗಿ ಈ ಹಳ್ಳಿಯ ರೈತ ಮುಂದುವರೆಯುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದನ್ನು ಹೇಳಿ. ಈಗ ರೂರಲ್ ಏರಿಯಾದಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ಸ್ ಏನು ಇದೆ; ಅಲ್ಲಿ ಸರ್ಕಾರೀ ಆಸ್ಪತ್ರೆಗೆ ಎಂ.ಬಿ.ಬಿ.ಎಸ್. ಆದವರೊಬ್ಬರನ್ನು ಡಾಕ್ಟರ್ ಆಗಿ ಹಾಕುತ್ತೀರಿ. ಇದರಿಂದ ಅವನಿಗೆ ಪ್ರೈವೇಟ್ ಆಗಿ ಪ್ರಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವನು ಇದಕ್ಕಿಂತ ಹೆಚ್ಚಿಗೆ

ಪ್ರೈವೇಟ್ ಪ್ರಾಕ್ಟೀಸ್ ಮಾಡಿಕೊಳ್ಳುತ್ತಾನೆ, ಹೇಗೆಂದರೆ ಸರ್ಕಾರೀ ಆಸ್ಪತ್ರೆಗಳಲ್ಲಿ ಸರಿಯಾದ ಡ್ರಗ್ಸ್ ವಗೈರೆ ಇರುವುದಿಲ್ಲ, ಆದರಿಂದ ಅವನ ಪ್ರಾಕ್ಟೀಸ್‌ಗೆ ಅನುಕೂಲವಾಗುತ್ತದೆ. ಅವನ ಹತ್ತಿರ ಅಷ್ಟು ಎಕ್ವಿಪ್‌ಮೆಂಟ್ಸ್ ಇಲ್ಲದೇ ಇದ್ದರೂ ಕೂಡ ಇದರಿಂದ ಅವನು ಸಹಾಯ ಪಡೆದುಕೊಳ್ಳುತ್ತಾನೆ. ಆ ರೂರಲ್ ಏರಿಯಾದಲ್ಲಿರತಕ್ಕಂಥಾ ಫಾರ್ಮರ್ಸ್‌ಗೆ ೧೦ ಎಕರೆ ಜಮೀನು ಇದ್ದರೂ ಕೂಡ ಅವರಿಗೆ ೫೦೦ ರೂಪಾಯಿ ಕೂಡ ವರಮಾನ ಬರುವುದಿಲ್ಲ. ಹೆಸರಿಗೆ ಮಾತ್ರ ೫ ಎಕರೆ ೧೦ ಎಕರೆ ಜಮೀನು ಅಂತ ಇರುತ್ತದೆ. ವೆಟ್ ಲ್ಯಾಂಡ್ ಇದ್ದ ಕಡೆ ಅದರ ಪರಿಸ್ಥಿತಿಯೇ ಬೇರೆ. ಈ ರೀತಿಯಾಗಿ ಅಂಥಾ ಫಾರ್ಮರ್ಸ್‌ಗೆ, ೫೦೦ ರೂಪಾಯಿ ಕೂಡ ವರಮಾನ ಬರದೇ ಇರತಕ್ಕಂಥಾ ರೈತನಿಗೆ ಈಗ ಏನೊಂದು ಹೆಲ್ತ್ ಸೆಸ್ ಮತ್ತು ಎಜುಕೇಷನ್ ಸೆಸ್ ವಗೈರೆ ಹೆಚ್ಚು ಮಾಡಬೇಕೆಂದಿದ್ದೀರೊ ಇದರಿಂದ ಅವರಿಗೆ ಎಕ್ಸ್‌ಮ್ಷನ್ ಕೊಡಬೇಕು ಎಂದರೆ, ಇಲ್ಲ ಅಂತ ತಾವು ಹೇಳುವುದಾದರೆ ಇದು ಯಾವ ಸೈಂಟಿಫಿಕ್ ಮತ್ತು ರ್‍ಯಾಷನಲ್ ಅಪ್ರೋಚ್ ಇಟ್ಟುಕೊಂಡಿದ್ದೀರೋ ನನಗೆ ಗೊತ್ತಾಗುವುದಿಲ್ಲ. ನೀವು ಈ ರೀತಿಯಾಗಿ ಒಂದು ಟ್ಯಾಕ್ಸ್ ಹಾಕುವುದಾದರೆ ಯಾರಿಗೆ ೨೦ ಎಕರೆ ಮೇಲೆ ಇರುತ್ತದೋ, ಯಾರಿಗೆ ಇನ್‌ಕಂ ಜಾಸ್ತಿ ಇರುತ್ತದೋ ಅಂಥಾವರ ಮೇಲೆ ಹಾಕಿರಿ. ಈ ಬಗ್ಗೆ ಒಂದು ಸೈಂಟಿಫಿಕ್ ಅಪ್ರೋಚ್ ಇಟ್ಟುಕೊಳ್ಳದೆ ಈವೊತ್ತು ಈ ರೂರಲ್ ಏರಿಯಾದಲ್ಲಿರತಕ್ಕಂಥಾ ಫಾರ್ಮರ್ ಮೇಲೆ, ಈ ಬಡ ಜನತೆಯ ಮೇಲೆ ಹೊಸ ಒಂದು ಲೆಜಿಸ್ಲೇಷನ್ ತಂದು ಅವನ ಮೇಲೆ ಟ್ಯಾಕ್ಸ್ ಹಾಕುವುದಾದರೆ ಅವನು ನೇಣು ಹಾಕಿಕೊಳ್ಳಬೇಕಾಗುತ್ತದೆ. ಈಗಿನ ಒಂದು ಪರಿಸ್ಥಿತಿ ಆರೀತಿ ಬಂದಿದೆ. ಆದುದರಿಂದ ನಾನು ಕೇಳುವುದು ಇಷ್ಟೆ. ರೂರಲ್ ಏರಿಯಾದಲ್ಲಿರತಕ್ಕಂಥಾವರಿಗೆ ಈ ಟ್ಯಾಕ್ಸ್ ಎಫೆಕ್ಟ್ ಆಗದೇ ಇರುವಂತೆ ಮಾಡಿ. ಆ ರೈತ ಬದುಕುವ ಹಾಗೆ ಮಾಡಿ. ಈವೊತ್ತಿನ ಪರಿಸ್ಥಿತಿಯಲ್ಲಿ ಅವನು ಒಂದು ರೂಪಾಯಿ ಕೊಡಬೇಕು ಎಂದರೂ ಆಗುವುದಿಲ್ಲ. ಅವನ ಮೇಲೆ ಈ ಒಂದು ಟಾರ್ಚರ್ ತರಬೇಡಿ. ಆ ರೂರಲ್ ಏರಿಯಾವಲ್ಲಿ ರತಕ್ಕಂಥಾ ರೈತರಿಗೆ ಬದುಕುವ ಹಾಗೆ ಒಂದು ಮಾರ್ಗ ಮಾಡಿ. ಇಷ್ಟು ಹೇಳಿ ಈ ಬಿಲ್ಲನ್ನು ವಿರೋಧ ಮಾಡುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥಮಂತ್ರಿಗಳು ದಿ ಕರ್ನಾಟಕ (ಎನ್‌ಹಾನ್ಸ್‌ಮೆಂಟ್ ಆಫ್ ಸರ್ಟೆನ್ ಸೆಸಸ್) ಬಿಲ್ ೧೯೭೬, ಈ ಒಂದು ಬಿಲ್ಲನ್ನು ಏನು ತಂದಿದ್ದಾರೋ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅದರ ಮೇಲೆ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ.

ನಾನು ಹೇಳುವುದು ಇಷ್ಟೆ. ಟ್ಯಾಕ್ಸ್ ಹಾಕದೇ ಯಾವ ಸರ್ಕಾರವೂ ನಡೆಸುವುದಕ್ಕಾಗುವುದಿಲ್ಲ. ಟ್ಯಾಕ್ಸ್ ಹಾಕುವುದು ಏತಕ್ಕೆ ? ನಮಗೆ ಬೇಕಾದ ಸವಲತ್ತುಗಳನ್ನು ಪಡೆಯುವುದಕ್ಕೋಸ್ಕರ. ಅದರಲ್ಲೂ ನಮ್ಮ ಅರ್ಥಮಂತ್ರಿಗಳು ಈ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಇದರಲ್ಲಿ ಅವರದ್ದು ಏನು ತಪ್ಪು ಇದೆ ಹೇಳಿ. ಸೈಂಟಿಫಿಕ್ ಮತ್ತು ರ್‍ಯಾಷನಲ್ ಅಪ್ರೋಚ್ ಇದರಲ್ಲಿ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಲ್ಯಾಂಡ್ ರೆವಿನ್ಯೂ, ಎಕ್ಸೈಜ್, ಎಜುಕೇಷನ್ ಇವೆಲ್ಲದರ ಮೇಲೆ ಟ್ಯಾಕ್ಸ್ ಹಾಕುವುದು ರ್‍ಯಾಷನಲ್ ಅಂಡ್ ಸೈಂಟಿಫಿಕ್ ಅಪ್ರೋಚ್ ಆಗಿ ಇಲ್ಲ ಎಂದು ಹೇಳಿದರೆ ಮಕ್ಕಳಿಗೆ ಪ್ರೈಮರಿ ಎಜುಕೇಷನ್ ಕೊಡುವುದು ಪ್ರಾಮುಖ್ಯ ಅನ್ನುವುದನ್ನು ಒಪ್ಪಿಕೊಳ್ಳುತ್ತಾರೆಯೇ ? ಹಾಗೆ ಅವರಿಗೆ ಶಿಕ್ಷಣ ಕೊಟ್ಟಂಥಾ ಕಾಲದಲ್ಲಿ ಅವರಿಗೆ ಸವಲತ್ತುಗಳನ್ನು ಕೊಡುವುದು ಅಗತ್ಯವಲ್ಲವೇ ಅನ್ನುವುದನ್ನು ಒಪ್ಪಿಕೊಳ್ಳುತ್ತೀರಾ ? ಹೀಗಿರುವಾಗ ಕೆಲವು ಸಂದರ್ಭದಲ್ಲಿ ಬೇಕಾದಷ್ಟು ಹಣ ಬೆಟರ್‌ಮೆಂಟ್ ಕಮಿಟಿಯಿಂದ ಮತ್ತು ಸಾರ್ವಜನಿಕರಿಂದ ಬರುತ್ತದೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಎರಡು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಈಗ ಇದಕ್ಕಾಗಿ ಮ್ಯಾಚಿಂಗ್ ಗ್ರಾಂಟ್‌ನಿಂದಲೂ ಸ್ವಲ್ಪ ಹಣ ತೆಗೆದುಕೊಳ್ಳಬೇಕಾಗುತ್ತದೆ, ಮತ್ತು ಬೆಟರ್‌ಮೆಂಟ್ ಕಮಿಟಿಯಿಂದಲೂ ಸ್ವಲ್ಪ ಹಣ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ತೆಗೆದುಕೊಂಡಂಥಾ ಸಂದರ್ಭದಲ್ಲಿ ಏನು ಮಾಡಬೇಕು ಎಂದರೆ ಎಲ್ಲಿ ದೇವಸ್ಥಾನಗಳಲ್ಲಿ ಶಾಲೆಗಳನ್ನು ನಡೆಸುತ್ತಾರೋ ಅಂಥಾ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿ ಅದನ್ನು ಎಜುಕೇಷನ್ ಇನ್ಸ್ಟಿಟ್ಯೂಷನ್ ಆಗಿ ಕನ್‌ವರ್ಟ್ ಮಾಡಿದರೆ ತಪ್ಪೇನೂ ಇಲ್ಲ. ಕೆಲವು ಕಡೆ ಇದಕ್ಕೆ ಕಟ್ಟಡದ ಅಭಾವ ಇದೆ. ಈ ಒಂದು ಸೆಸ್‌ನಿಂದ ೨ ಕೋಟಿ ರೂಪಾಯಿ ಏನು ವಸೂಲಾಗುತ್ತದೋ ಅದು ಬರೇ ಕಟ್ಟಡದ ರಿಪೇರಿಗಾಗಿ ಆಗುತ್ತದೆ ಎಂದು ನನ್ನ ಭಾವನೆ. ನಾನು ೧೭೬ ತಾಲ್ಲೂಕುಗಳಲ್ಲೂ ಪ್ರವಾಸ ಮಾಡಿದ್ದೇನೆ. ಅನೇಕ ಕಡೆಗಳಲ್ಲಿ ಹೋಗಿ ನೋಡಿದಾಗ ಅನೇಕ ಪ್ರೈಮರಿ ಶಾಲೆಗಳಿಗೆ ಕಟ್ಟಡಗಳು ಇಲ್ಲ. ಆ ಹಳ್ಳಿಯ ಶಾಲೆಗಳನ್ನು ನೋಡಿದರೆ ಹಳೆಯ ಸಾಮಾನು

ಗಳನ್ನು ಹಾಕಿ ಹೆಂಚಿನಿಂದ ಕಟ್ಟಿರುತ್ತಾರೆ. ಇಲ್ಲಿ ಕಾಲೇಜು ಮತ್ತು ಯೂನಿವರ್ಸಿಟಿ ನೋಡಿದರೆ ಸಿಮೆಂಟ್ ಮತ್ತು ಕಾಂಕ್ರೀಟ್ ಹಾಕಿ ಕಟ್ಟಿರುತ್ತಾರೆ. ಆದಕ್ಕಾಗಿ ನಾನು ಹೇಳುವುದು ಯಾವ ದೇವಸ್ಥಾನ ಗಳಲ್ಲಿ ಶಾಲೆಗಳನ್ನು ನಡೆಸುತ್ತಾರೋ ಅಂಥಾದ್ದನ್ನು ಎಜುಕೇಷನಲ್ ಇನ್ಸ್ಟಿಟ್ಯೂಷನ್ ಆಗಿ ಕನ್‌ವರ್ಟ್ ಮಾಡಿದರೆ ಒಂದು ಕಡೆ ಆ ದೇವಸ್ಥಾನದ ಜೀರ್ಣೋದ್ಧಾರವೂ ಆಗುತ್ತದೆ. ಇನ್ನೊಂದು ಕಡೆ ಆ ಪ್ರೈಮರಿ ಶಾಲೆಗೆ ಒಂದು ಕಟ್ಟಡವನ್ನೂ ಒದಗಿಸಿದಂತಾಗುತ್ತದೆ. ಆ ರೀತಿ ಅಂಥಾ ದೇವಸ್ಥಾನಗಳನು ಎಜುಕೇಷನಲ್ ಇನ್ಸ್ಟಿಟ್ಯೂಷನ್ ಆಗಿ ಕನ್‌ವರ್ಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಸಲಹೆ ಏನೆಂದರೆ ಹಿಂದೆ ಹಳೇ ಮೈಸೂರು ಪ್ರದೇಶದಲ್ಲಿ ಯಾರಾದರೂ ಒಳ್ಳೆಯ ಕೆಲಸ ಮಾಡಿದ್ದರೆ, ಅನೇಕ ಸಂಘ ಸಂಸ್ಥೆಗಳಿಗೆ ಅವರು ಏನಾದರೂ ಸಹಾಯ ಮಾಡಿದ್ದರೆ, ಅವರಿಗೆ ಧರ್ಮಪ್ರವೀಣ, ವಿದ್ಯಾಭೂಷಣ, ಧರ್ಮ ಪ್ರಕಾಶ ವಗೈರೆ ಬಿರುದುಕೊಡುತ್ತಿದ್ದರು. ಇಂಥಾದ್ದು ಅನೇಕ ನಿದರ್ಶನಗಳು ಇವೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದು ಈ ಟ್ಯಾಕ್ಸ್ ಹಾಕು ವುದರ ಜೊತೆಗೆ ಈ ಒಂದು ವಿದ್ಯಾಭಿವೃದ್ಧಿಗೆ, ಈ ಒಂದು ಕಟ್ಟಡದ ಅಭಿವೃಧಿಗೆ ನಾನು ಮೊದಲೇ ಹೇಳಿದಂತೆ ಅವರಿಗೆ ಈ ರೀತಿ ಒಂದು ಬಿರುದುಕೊಟ್ಟು ಬೇರೆ ರೀತಿಯಲ್ಲಿ ಅವರಿಂದಲೂ ಹಣ ತೆಗೆದು ಕೊಂಡರೆ ನೀವು ಎಲ್ಲಾ ಕಟ್ಟಡಗಳನ್ನೂ ರಿಪೇರಿ ಮಾಡಿಸಬಹುದು. ಇದಕ್ಕೆ ಸಾರ್ವಜನಿಕರಿಂದಲೂ ಕೂಡ ಹಣ ಬರುತ್ತದೆ. ಅವರಿಂದ ಬರತಕ್ಕಂಥಾ ಹಣವನ್ನು ಈ ಒಂದು ವಿದ್ಯಾಭಿವೃದ್ಧಿಗೆ ಖರ್ಚುಮಾಡಿ ದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನು ಮಿಡ್ಡೇಮೀಲ್ಸ್ ಬಗ್ಗೆ ವಿರೋಧ ಪಕ್ಷದವರು ಕೆಲವು ಮಾತುಗಳನ್ನು ಹೇಳಿದರು. ಇದು ಇನ್ನೂ ಸರಿಯಾಗಿ ನಡೆಯಬೇಕಾದರೆ ಈ ರೀತಿ ಮಾಡಬೇಕು ಪೂರ್ವ ಕಾಲದಲ್ಲಿ ರೈತರು ತಾವು ಬೆಳೆ ದಂಥಾ ದವಸದಲ್ಲಿ ಸ್ವಲ್ಪ ಭಾಗವನ್ನು ದೇವಸ್ಥಾನಗಳಿಗೆ ಮತ್ತು ಸಂಘಸಂಸ್ಥೆಗಳಿಗೆ ಕೊಡುತ್ತಾ ಇದ್ದರು. ಆರೀತಿ ಮಾಡುವುದಾದರೆ ನಾವು ಯುನೈಟೆಡ್ ಸ್ಟೇಟ್ಸ್‌ಗಾಗಲಿ ಎಲ್ಲಿಗೆ ಆಗಲಿ ಏತಕ್ಕೆ ಹೋಗಬೇಕು ? ನಿಮ್ಮ ದೇಶದಲ್ಲಿ ಬೆಳೆದಂಥಾ ಕಾಳುಕಡ್ಡಿ ಏನು ಇದೆಯೋ ಅದರಲ್ಲಿ ಸ್ವಲ್ಪ ಭಾಗ ಅವರು ಕೊಟ್ಟರೆ ನಾವು ಇದರಲ್ಲೂ ಕೂಡ ಯಶಸ್ವಿಯಾಗಬಹುದು ಈ ರೀತಿಯಾಗಿ ಸಾರ್ವಜನಿಕರಿಂದ ನಾವು ವಸೂಲ್ಮಾಡ ಬೇಕು. ಅದರಲ್ಲಿ ನಾವು ಎಫರ್ಟ್ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಪ್ರೈಮರಿ ಶಾಲೆಗಳನ್ನು ಒಂದು ಮರದ ಕೆಳಗೆ ಅಲ್ಲಿ ಇಲ್ಲಿ ನಡೆಸುತ್ತಾರೆ ಎಂದು ಹೇಳಿದರು. ಶಾಂತಿನಿಕೇತನದಲ್ಲಿ ರವೀಂದ್ರನಾಥ್ ಠಾಕೂರ್‌ರವರು ಒಂದು ಮರದ ಕೆಳಗೆ ಪಾಠ ಹೇಳಿಕೊಡಲಿಲ್ಲವೇ ? ಹಾಗಿರುವಾಗ ಮರದ ಕೆಳಗೆ ಶಾಲೆಗಳನ್ನು ನಡೆಸಿದರೆ ಅದರಲ್ಲಿ ತಪ್ಪು ಏನು ಇದೆ ? ತಮಗೆಲ್ಲಾ ಗೊತ್ತಿರುವ ಹಾಗೆ ಈ ವಿದ್ಯೆಗೆ ಇಲಾಖೆಗೆ ೧೧೧ ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಕೇವಲ ೩೨ ಪರ್ಸೆಂಟ್ ಮಾತ್ರ ಎಜು ಕೇಷನ್ ಆಗಿರುವುದು. ಇನ್ನೂ ೨೨ ಪರ್ಸೆಂಟ್ ಅಷ್ಟು ಜನ ಎಡಗೈ ಹೆಬ್ಬೆಟ್ಟು ಒತ್ತುವವರೇ ಇದ್ದಾರೆ. ಅದಕಾರಣ ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣ ಒದಗಿಸುವ ಬಗ್ಗೆ ಯಾವ ಕಾರ್ಯಕ್ರಮ ಕೈಕೊಂಡರೂ ಅದಕ್ಕೆ ನಾವು ಉತ್ತೇಜನ ಕೊಡಬೇಕಾಗುತ್ತದೆ. ಈಗ ಮಾನ್ಯ ಮಂತ್ರಿಗಳು ಏನು ಬಿಲ್ ತಂದಿದ್ದಾರೆ, ಇದು ಸಮಯೋಚಿತವಾಗಿದೆ. ಇದಕ್ಕೆ ಹೆಚ್ಚಿನ ರೀತಿ ಯಲ್ಲಿ ಎಲ್ಲ ಮಾನ್ಯ ಸದಸ್ಯರು ಬೆಂಬಲ ಕೊಡಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. .

4-00 P.M.

ಶ್ರೀ ಎ. ನಂಜಪ್ಪ (ಅರಸೀಕೆರೆ) —ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥಿಕ ಸಚಿವರು ಈ ಸೆಸ್‌ಗಳನ್ನು ಹೆಚ್ಚಿಸುವ ಬಗ್ಗೆ ತಂದಿರತಕ್ಕಂಥ ಮಸೂದೆಯನ್ನು ವಿರೋಧ ಮಾಡಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಆರ್ಥಿಕ ಸಚಿವರು ವಿದ್ಯೆ ಹಾಗೂ ಆರೋಗ್ಯಾಭಿವೃದಿ ಮೇಲಿನ ಸೆಸ್‌ಗಳನ್ನು ಹೆಚ್ಚಿಸುವ ಮುಖಾಂತರ ೨ ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಿದ್ದಾರೆ. ಎಜುಕೇಷನ್ ಸೆಸ್ಸನ್ನು ೫ ಪೈಸೆಯಿಂದ ೧೦ ಪೈಸೆಗೆ ಮತ್ತು ಹೆಲ್ತ್ ಸೆಸ್ಸನ್ನು ೯ ಪೈಸೆಯಿಂದ ೧೫ ಪೈಸೆಗೆ ಹೆಚ್ಚಿಸುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆ. ಈ ಹತ್ತು ಪೈಸೆ ಮತ್ತು ಹದಿನೈದು ಪೈಸೆಯು ಮೊತ್ತ ನೋಡುವುದಕ್ಕೆ ಕಡಿಮೆ ಎಂದು ಕಂಡು ಬಂದರೂ ಸಹ ಇದರ ಒಂದು ವ್ಯಾಪ್ತಿಗೆ ಒಳಪಡ ತಕ್ಕಂಥವರಿಗೆ ಇದನ್ನು ಕೊಡುವುದು ಬಹಳ ಕಷ್ಟವಾಗುತ್ತದೆಂದು ಹೇಳುತ್ತೇನೆ. ಸರ್ಕಾರದವರು ಭೂ ಕಂದಾಯವನ್ನು ಇಲ್ಲಿಯವರೆಗೆ ಅನೇಕ ಸಲ ಹೆಚ್ಚು ಮಾಡಿದ್ದಾರೆ. ನೀರಿನ ತೆರಿಗೆಯನ್ನು ಒಂದಕ್ಕೆ

ಎರಡರಷ್ಟು ಹೆಚ್ಚು ಮಾಡಿದ್ದಾರೆ. ಇದರ ಜೊತೆಗೆ ಆಹಾರಧಾನ್ಯಗಳ ಬೆಲೆಗಳು ಬಹಳ ಕಡಿಮೆಯಾಗಿರುವುದರಿಂದ ರೈತರು ತಾವು ಮಾಡಿರತಕ್ಕಂಥ ಸಾಲಸೋಲಗಳನ್ನು ತೀರಿಸುವುದೇ ಕಷ್ಟವಾಗಿರುವಾಗ ಮತ್ತು ತಮ್ಮ ಸಂಸಾರವನ್ನು ಸಾಕುವುದೇ ಕಷ್ಟವಾಗಿರುವಾಗ, ಈ ಸೆಸ್‌ಗಳ ಹೊರೆಯನ್ನು ಅವರ ಮೇಲೆ ಹಾಕಿದರೆ, ನಿಜವಾಗಿಯೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡವರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಭೂ ಕಂದಾಯದಿಂದ ೪೦ ಲಕ್ಷ ರೂ. ಗಳನ್ನು ಈ ಸೆಸ್ ಮೂಲಕ ನಿರೀಕ್ಷೆ ಮಾಡಿದ್ದಾರೆ. ಈಗಾಗಲೇ ಭೂ ಕಂದಾಯ ಮತ್ತು ನೀರಿನ ದರಗಳು ಜಾಸ್ತಿಯಾಗಿರುವುದರಿಂದ ರೈತರ ಸೊಂಟ ಮುರಿದು ಹೋಗಿದೆ ಅದರ ಜೊತೆಗೆ ಮತ್ತೆ ಈ ಸೆಸ್‌ಗಳ ಮೂಲಕ ೪೦ ಲಕ್ಷ ರೂ. ಗಳ ಒಂದು ಹೊರೆಯನ್ನು ಅವರ ಮೇಲೆ ಹೇರಿದರೆ ಅವರು ಬಹಳ ತೊಂದರೆಗೆ ಒಳಗಾಗುತ್ತಾರೆಂದು ಹೇಳಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಅವಿಭಕ್ತ ಕುಟುಂಬಗಳ ಮೇಲೆ ಈ ಒಂದು ಹೊರೆ ಬೀಳುತ್ತದೆ. ಈಗಾಗಲೇ ಸೆಂಟ್ರಲ್ ಇನ್‌ಕಮ್ ಟ್ಯಾಕ್ಸ್ ಮತ್ತು ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್‌ನ ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಅವಿಭಕ್ತ ಕುಟುಂಬಗಳು ವಿಭಾಗವಾಗುತ್ತಿವೆ. ಇನ್ನು ಮುಂದೆ ಈ ವೆಲ್ತ್ ಟ್ಯಾಕ್ಸನ್ನು ತಪ್ಪಿಸಿಕೊಳ್ಳಲು ಈ ಅವಿಭಕ್ತ ಕುಟುಂಬಗಳು ವಿಭಾಗ ಮಾಡಿಕೊಳ್ಳುವುದಕ್ಕೆ ನಾವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮತ್ತು ಇಂತಹ ಕುಟುಂಬಗಳು ಛಿದ್ರ ಛಿದ್ರವಾಗುವುದಕ್ಕೆ ಅವಕಾಶವಾಗುತ್ತದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ವೆಲ್ತ್ ಟ್ಯಾಕ್ಸ್ ಮೇಲೆ ಈ ಸೆಸ್‌ಗಳನ್ನು ಹಾಕಬಾರದೆಂದು ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಕ್ಸೈಜ್ ಡ್ಯೂಟಿ ಮೇಲೆ ಒಂದು ಕೋಟಿ ೨೦ ಲಕ್ಷ ರೂಪಾಯಿಗಳವರೆಗೆ ಸೆಸ್ ಹಾಕಿರುವುದು ಸಹ ಬಹಳ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದವರು ೨೫೦೦ ರೂ. ಗಳನ್ನು ಏನು ಕೊಡುತ್ತಿದ್ದರು, ಅದನ್ನು ಈಗ ೪೫೦೦ ರೂ. ಗಳಿಗೆ ಹೆಚ್ಚು ಮಾಡಿರುವುದನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಈ ಬಗ್ಗೆ ನಾವು ಸರ್ಕಾರದ ಬಳಿ ಅನೇಕ ಸಲ ಕೇಳಿಕೊಂಡಿದ್ದೆವು ; ಸರ್ಕಾರದವರು ಸಹ ಇದನ್ನು ಪುನರ್ವಿಮರ್ಶೆ ಮಾಡುತ್ತೇವೆಂದು ಹೇಳಿದ್ದರು ಅದರಂತೆ ಈಗ ೪೫೦೦ ರೂ. ಗಳಿಗೆ ಹೆಚ್ಚು ಮಾಡಿರುವುದನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಿಗತಕ್ಕಂಥ ಮರ ಮುಟ್ಟುಗಳನ್ನು ಮತ್ತು ಇತರೇ ಸಲಕರಣೆಗಳನ್ನು ಉಪಯೋಗಿಸಿಕೊಂಡು ಕಡಿಮೆ ವೆಚ್ಚದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅವಕಾಶವಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಆ ಒಂದು ಭಾವನೆಯನ್ನು ಕೈಬಿಡಬೇಕೆಂದು ನಾನು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಅದಕ್ಕೆ ಕಾರಣವಿಷ್ಟೆ. ಸ್ಥಳೀಯವಾಗಿ ದೊರೆಯತಕ್ಕಂಥ ಕಾಡು ಜಾತಿಯ ಮರ, ತೆಂಗಿನ ಗರಿ, ಮಣ್ಣು ಇವುಗಳನ್ನು ಉಪಯೋಗಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸಿದರೆ ಅವುಗಳು ಬಹಳ ಜಾಗ್ರತೆ ಬಿದ್ದು ಹೋಗುತ್ತವೆ ಮತ್ತು ನಶಿಸಿ ಹೋಗುತ್ತವೆ : ಮತ್ತು ಇಂತಹ ಕ್ರಮದಿಂದ ಕಂಟ್ರಾಕ್ಟ್‌ದಾರರು ದುಡ್ಡು ಹೊಡೆಯುವುದಕ್ಕೆ ಕಾರಣವಾಗುತ್ತದೆ : ಇದರ ಬದಲು ಶಾಶ್ವತವಾಗಿರತಕ್ಕಂಥ ಹೆಚ್ಚು ವರ್ಷ ಬಾಳತಕ್ಕಂಥ ಶಾಲಾ ಕಟ್ಟಡಗಳನ್ನು ಇಟ್ಟಿಗೆ, ಸಿಮೆಂಟ್ ಮತ್ತು ಒಳ್ಳೆಯ ಮರಗಳನ್ನು ಉಪಯೋಗಿಸಿ ಟೈಪ್‌ಡಿಸೈನ್‌ನಲ್ಲಿ ಕಟ್ಟಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಈಗ ಸರ್ಕಾರದವರು ಕೊಡತಕ್ಕಂಥ 4500 ರೂ. ಗಳ ಜೊತೆಗೆ ಸ್ಥಳೀಯ ಜನರು 1500 ರೂ. ಗಳನ್ನು ಕೊಡಬೇಕೆಂದು ಸರ್ಕಾರದವರು ಅಪೇಕ್ಷೆ ಮಾಡುವುದು ಒಳ್ಳೆಯದಲ್ಲ, ಈ ಕ್ರಮವನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಹೇಳುತ್ತೇನೆ. ಇದಕ್ಕೆ ಕಾರಣವಿಷ್ಟೆ. ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡಾ 80ರಷ್ಟು ಜನರು ಬಡವರಾಗಿದ್ದಾರೆ ಉಳಿದಂಥ ಶೇಕಡಾ 1೦–20 ರಷ್ಟು ಶ್ರೀಮಂತರು ತಮ್ಮ ಮಕ್ಕಳನ್ನು ನಗರ ಪ್ರದೇಶಗಳಲ್ಲಿರತಕ್ಕಂಥ ಹಾಸ್ಟಲ್‌ಗಳಲ್ಲಿಟ್ಟು ಓದಿಸುತ್ತಾರೆ, ಈ ಕಾರಣದಿಂದ ಬಡವರು ತಮ್ಮ ಮಕ್ಕಳನ್ನು ತಮ್ಮ ಹಳ್ಳಿಯಲ್ಲಿರತಕ್ಕಂಥ ಶಾಲೆಗಳಲ್ಲಿಯೇ ಓದಿಸಬೇಕಾಗಿದೆ. ಈ ಜನರಿಗೆ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಆರ್ಥಿಕವಾಗಿ ಸಹಾಯ ಮಾಡತಕ್ಕಂಥ ಶಕ್ತಿಯಿರುವುದಿಲ್ಲ; ಆದಕಾರಣ ಅವರು ಹಣ ಕೊಡುವುದಿಲ್ಲ ; ನಂತರ ಕಟ್ಟಡವೂ ಆಗುವುದಿಲ್ಲ, ಇದರಿಂದ ವಿದ್ಯಾಭ್ಯಾಸದ ಬಗ್ಗೆ ತಾವು ಏನು ಒಂದು ಗುರಿ ಇಟ್ಟುಕೊಂಡಿದ್ದೀರಿ, ಅದು ನೆರವೇರುವುದಿಲ್ಲವೆಂದು ಹೇಳುತ್ತೇನೆ ಇದರ ಬದಲು 1500 ರೂಪಾಯಿಗಳ ಪೈಕಿ ಒಂದು ಸಾವಿರ ರೂಪಾಯಿಗಳನ್ನು ತಾಲ್ಲೂಕ್ ಬೋರ್ಡಿನವರು ಮತ್ತು 500 ರೂಪಾಯಿಗಳನ್ನು ಗ್ರಾಮಪಂಚಾಯಿತಿಯವರು ಕೊಡುವಂತೆ ಒಂದು ತಿದ್ದುಪಡಿ

ಯನ್ನು ಇದಕ್ಕೆ ಮಾಡಬೇಕೆಂದು ಹೇಳುತ್ತೇನೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿಯನ್ನು ಕ್ರಯ, ಆಧಾರ, ಭೋಗ್ಯ ಮಾಡತಕ್ಕಂಥ ಸಂದರ್ಭಗಳಲ್ಲಿ ಉಪಯೋಗಿಸುವಂತಹ ಸ್ಟಾಂಪ್ ಮೇಲೆ ಶೇಕಡಾ 2 ರಿಂದ ಶೇಕಡಾ 4 ರವರೆಗೆ ತಾಲ್ಲೂಕ್ ಬೋರ್ಡಿನವರು ಸುಂಕ ವಸೂಲಿ ಮಾಡುತ್ತಿರುವುದರಿಂದ ಅವರಿಗೆ ಯಥೇಚ್ಛವಾಗಿ ಹಣ ಸಿಗುತ್ತಿದೆ, ಇದರ ಜೊತೆಗೆ ತಾಲ್ಲೂಕ್ ಬೋರ್ಡಿನವರು ನಡೆಸುತ್ತಿದ್ದ ಹೈಸ್ಕೂಲ್‌ಗಳನ್ನು ಸರ್ಕಾರದವರೇ ವಹಿಸಿಕೊಂಡ ಕಾರಣ ಮತ್ತು ತಾಲ್ಲೂಕ್ ಬೋರ್ಡಿನವರು ಮೇನ್‌ಟೇನ್ ಮಾಡುತ್ತಿದ್ದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರೇ ವಹಿಸಿಕೊಂಡ ಕಾರಣ ಅವರಿಗೆ ಈಗ ಹೆಚ್ಚಿನ ಖರ್ಚುಗಳು ಇಲ್ಲದೆ ಉಳಿತಾಯ ಜಾಸ್ತಿಯಾಗಿರುವುದರಿಂದ, ಈ ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಅವರು ಕೊಡಬೇಕೆಂದು, ಮತ್ತು ಉಳಿದ 500 ರೂಪಾಯಿಗಳನ್ನು ಗ್ರಾಮಪಂಚಾಯಿತಿಯವರು ಕೊಡಬೇಕೆಂದು ತಿದ್ದುಪಡಿ ಮಾಡದಿದ್ದರೆ ನಿಮ್ಮ ಒಂದು ಉದ್ದೇಶ ನೆರವೇರುವುದಿಲ್ಲವೆಂದು ಹೇಳುತ್ತೇನೆ. ಆದಕಾರಣ ಇದರ ಕಡೆಗೆ ತೀವ್ರವಾಗಿ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಶೇಕಡಾ ನಲವತ್ತರಷ್ಟು ವಿದ್ಯಾರ್ಥಿಗಳು ಖಾಸಗೀ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಖಾಸಗೀ ವಿದ್ಯಾಸಂಸ್ಥೆಗಳು ಯಾವ ರೀತಿ ನಡೆಯುತ್ತಿವೆ ಎಂಬ ಬಗ್ಗೆ ನಾವು ಈಗಾಗಲೇ ಬೇಕಾದಷ್ಟು ಸಲ ಹೇಳಿದ್ದೇವೆ. ಈ ಖಾಸಗೀ ವಿದ್ಯಾಸಂಸ್ಥೆಗಳವರು ಪೋಷಕರಿಂದ ಬೆಟರ್‌ಮೆಂಟ್ ಫೀ ಎಂದು, ಧರ್ಮದ ಫಂಡ್ ಎಂದು ನಾನಾ ರೀತಿಯಿಂದ ಹಣವನ್ನು ಯಥೇಚ್ಛವಾಗಿ ಸುಲಿಯುತ್ತಿದ್ದಾರೆ. ಇದರ ಜೊತೆಗೆ ಸರ್ಕಾರದವರು ಸಹ ಈ ಸೆಸ್‌ಗಳನ್ನು ಜಾಸ್ತಿ ಮಾಡಿದರೆ; ಅದರ ಒಂದು ಹೊರೆ ಜನರ ಮೇಲೆ ಬಿದ್ದು ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗುತ್ತದೆಂದು ಹೇಳುತ್ತೇನೆ ಈಗ ನಮ್ಮ ದೇಶದಲ್ಲಿ ಕೇವಲ 24 ಪರ್ಸೆಂಟ್‌ವರೆಗೆ ಮಾತ್ರ ವಿದ್ಯಾವಂತರಿದ್ದಾರೆ. ಇದನ್ನು 35 ರಿಂದ 40 ಪರ್ಸೆಂಟ್‌ವರೆಗೆ ಹೆಚ್ಚಿಸಬೇಕೆಂಬ ಗುರಿಯನ್ನು ತಾವು ಇಟ್ಟುಕೊಂಡಿರುವಾಗ, ಈ ತರಹದ ಸೆಸ್‌ಗಳನ್ನು ಹಾಕಿ ಜನರಿಗೆ ಹೆಚ್ಚಿನ ಒಂದು ಹೊರೆ ಮಾಡಿದರೆ, ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗುತ್ತದೆಂದು ಹೇಳುತ್ತೇನೆ. ಆದಕಾರಣ ಈ ಸೆಸ್ ವಿಧಿಸುವುದನ್ನು ನಾನು ಖಂಡಿತವಾಗಿಯೂ ವಿರೋಧ ಮಾಡುತ್ತೇನೆ. ದಯವಿಟ್ಟು ಆಸ್ತಿ ಮತ್ತು ಭೂಕಂದಾಯದ ಮೇಲಿನ ಹೆಚ್ಚುವರಿ ಸೆಸ್ಸನ್ನು ವಾಪಸು ಮಾಡಬೇಕೆಂದು ಹೇಳುತ್ತೇನೆ, ಮತ್ತು ಸ್ಥಳೀಯ ಜನರು 1500 ರೂಪಾಯಿಗಳನ್ನು ಕೊಡುವುದಕ್ಕೆ ಬದಲು ತಾಲ್ಲೂಕ್ ಬೋರ್ಡಿನವರು ಒಂದು ಸಾವಿರ, ಗ್ರಾಮಪಂಚಾಯಿತಿಯವರು 500 ರೂಪಾಯಿಗಳನ್ನು ಶಾಲಾ ಕಟ್ಟಡಗಳನ್ನು ಕಟ್ಟಿಸಲು ಕೊಡುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸವನಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿವರು ತಂದಿರತಕ್ಕಂಥ ಮಸೂದೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಈ ಸದನದಲ್ಲಿ ನಿವೇದಿಸುತ್ತೇನೆ ವಾಸ್ತವಿಕವಾಗಿ ಈ ಸದನದಲ್ಲಿ ತಂದಿರತಕ್ಕಂತ ಮಸೂದೆ ಉದ್ದೇಶ ಪೂರ್ಣವಾಗಿ ಹೇಳಿದನಂತರ ಈ ಸದನದಲ್ಲಿ ಯಾವ ವಿರೋಧವಿಲ್ಲದೆ ಈ ಬಿಲ್ಲು ಪಾಸ್ ಆಗುತ್ತದೆ ಎಂದು ನಿಜವಾಗಿ ನನಗನಿಸುತ್ತದೆ. ಈ ವರ್ಷದ ಬಜೆಟ್ ಮಂಡನೆ ಕಾಲದಲ್ಲಿ ಎರಡೂವರೆ ಸಾವಿರ ರೂಪಾಯಿ ಒಂದು ಸ್ಕೂಲ್ ಕಟ್ಟಡ ಕಟ್ಟಲು ಸಾಲುವುದಿಲ್ಲ ಅದನ್ನು ಹೆಚ್ಚಿಗೆ ಮಾಡಬೇಕೆಂದು ನಾವು ಹೇಳಿದಾಗ ನಮ್ಮ ಮಾನ್ಯ ಅರ್ಥಸಚಿವರು ಎಷ್ಟು ಮಾಡಬೇಕು ನೀವೇ ಹೇಳಿ ಅದನ್ನು ತಮಗೆ ಬಿಟ್ಟಿದ್ದೇವೆ ಎಂದು ಹೇಳಿದರು ಹಿಂದೆ ನಮ್ಮ ಕಡೆ ನಾಲ್ಕು ಆಣೆ ಪಬ್ಲಿಕ್ ಕಾಂಟ್ರಿಬ್ಯೂಷನ್ ಇದ್ದರೆ 12 ಆಣೆ ಸರ್ಕಾರ ಕೊಡುತ್ತಾ ಇತ್ತು. ಈಗ ನಾಲ್ಕೂವರೆ ಸಾವಿರ ರೂಪಾಯಿ ಇದ್ದದ್ದನ್ನು 6 ಸಾವಿರ ರೂಪಾಯಿ ಮಾಡಿದ್ದಾರೆ. ವಾಸ್ತವಿಕವಾಗಿ ಇದು ಬಹಳ ಸಂತೋಷದ ಸಂಗತಿ. ಒಂದು ಸ್ಕೂಲ್ ಕಟ್ಟಡ ಕಟ್ಟಬೇಕಾದರೆ 7 ಸಾವಿರ ರೂಪಾಯಿಯೂ ಕೆಲವು ಸಲ ಬೇಕಾಗುತ್ತದೆ. ಹೋದವರ್ಷ ಇದಕ್ಕೋಸ್ಕರ 9 ಲಕ್ಷ ರೂಪಾಯಿ ಇದ್ದದ್ದನ್ನು ಈ ವರ್ಷ 1 ಕೋಟಿ 25 ಲಕ್ಷ ರೂಪಾಯಿ ಮಾಡಿದ್ದರೂ ಕೂಡ ಸಾಲುವುದಿಲ್ಲವೆಂದು ಹೇಳುವ ಪರಿಸ್ಥಿತಿ ಇದೆ. ಇಷ್ಟು ಇದ್ದಾಗ ಸರ್ಕಾರದ ಮುಂದೆ ಇರುವ ಸಮಸ್ಯೆ ಏನು ಎಂದರೆ ಮನೆ ನಡೆಸುವ ಯಜಮಾನ ಮನೆಯಲ್ಲಿ ಎಲ್ಲರ ಹತ್ತಿರ ಕೂಡ ಬೈಗಳ ತಿನ್ನಬೇಕಾಗುತ್ತದೆ. ಇದು ಒಂದು ಮಾತು ಇದ್ದರೂ ಆ ಕಡೆಯವರಿಗೆ ಟ್ಯಾಕ್ಸ್ ಮುಖಾಂತರ ಸರ್ಕಾರ ಹಣವನ್ನು ಕೂಡಿಸಕೂಡದು ಎಲ್ಲಾ

ಯೋಜನೆಗಳನ್ನು ಪೂರೈಸಬೇಕು ಎಂದರೆ ಹೇಗೆ ? ಟ್ಯಾಕ್ಸ್ ಕೊಡಿಸದೆ ಹೋದರೆ ರಾಜ್ಯ ನಡೆಸುವುದು ಹೇಗೆ ? ನಾವು ಸುಮ್ಮನೆ ವಿಧಾನಸೌಧವನ್ನು ಕಟ್ಟಿಸಿಬಿಡಿ ಎಂದು ಹೇಳುವುದು ಸುಲಭ ನಾವು ಒಂದು ಮನೆಯನ್ನು ಕಟ್ಟಬೇಕಾದರೆ ಎಷ್ಟು ತೊಂದರೆ ಇರುತ್ತದೆ. ದುಡ್ಡು, ದುಡ್ಡು ಕೊಡಿ ಎಂದರೆ ಅದು ಮನೆಯಲ್ಲಿ ಪ್ರಿಂಟ್ ಮಾಡುವುದಲ್ಲ ಇದನ್ನು ನಾವು ಯೋಚನೆ ಮಾಡಬೇಕು. ಇನ್ನು ಕೆಲವು ಲೋಪ ದೋಷಗಳನ್ನು ಹೇಳಿದರು ಅದನ್ನು ನಾವು ಒಪ್ಪಲೇ ಬೇಕು. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾದರೆ ಹಣ ಬೇಕು. ಹಣ ಬೇಕೆಂದರೆ ಅದನ್ನು ಯಾವ ಯಾವ ರೂಪದಲ್ಲಿ ವಸೂಲಿ ಮಾಡಬೇಕು ಮತ್ತು ಕೂಡಿಸಿಕೊಳ್ಳಬೇಕು ಎಂದು ನೋಡಿ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಟ್ಯಾಕ್ಸ್ ಹಾಕದೆ ಸರ್ಕಾರ ನಡೆಸಬಹುದು ಎಂದು ವಿರೋಧಪಕ್ಷದವರು ಯಾರೂ ಹೇಳಲಿಲ್ಲ. ಟ್ಯಾಕ್ಸನ್ನು ಹಾಕಲೇಬಾರದು ಎಂದು ಹೇಳುವ ಮತ್ತು ಸರ್ಕಾರವನ್ನು ನಡೆಸಬೇಕು ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಬೇಕೆಂದು ಹೇಳುವಷ್ಟು ವಿವೇಚನೆ ಇಲ್ಲದೆ ಇರುವ ಸದಸ್ಯರು ಇಲ್ಲಿ ಯಾರೂ ಇಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗುತ್ತದೆ.

ಶ್ರೀ ಜಿ. ಎಸ್. ಅಮ್ಮಣ್ಣವರ್.—ನಾನು ಮಾತನಾಡಿದ್ದು ಆ ರೀತಿಯಲ್ಲ. ವಿವೇಚನೆ ಇಲ್ಲದ ಸದಸ್ಯರು ಇದ್ದಾರೆಂದು ನಾನು ಹೇಳುವುದಿಲ್ಲ. ತಾವು ದಯಮಾಡಿ ತಪ್ಪು ಭಾವಿಸಬಾರದು. ಚಿಕ್ಕ ಹಿಡುವಳಿದಾರರ ಬಗ್ಗೆ ಮಾತನಾಡುವಾಗ ಒಂದು ಎಕರೆ, ಒಂದೂವರೆ ಎಕರೆ ಇರುವವರಿಗೆ 5 ಪರ್ಸೆಂಟ್ ಹೆಚ್ಚು ಮಾಡಿದರೆ ಮೂರು ರೂಪಾಯಿ ಲ್ಯಾಂಡ್ ರೆವೆನ್ಯೂ ಕೊಡತಕ್ಕ ಮನುಷ್ಯನಿಗೆ 30 ಪೈಸೆ ಸೆಸ್ ಕೊಡಿ ಎಂದರೆ ಅದು ಏನು ದೊಡ್ಡ ಭಾರವಾಗುವುದಿಲ್ಲ. 30 ಪೈಸೆ ಬೀಡಿ ಸೇದಿ ಬಿಡುತ್ತೇವೆ. 90 ಪೈಸೆ ಖರ್ಚು ಮಾಡುವಾಗ 30 ಪೈಸೆ ನಮ್ಮ ಶಿಕ್ಷಣದ ಅಭಿವೃದ್ಧಿಗೋಸ್ಕರ ಟ್ಯಾಕ್ಸ್ ಕೊಡುವುದು ಅದು ಏನೂ ದೊಡ್ಡ ಮಹತ್ವದ್ದಲ್ಲ. ರಾಜ್ಯ ನಡೆಯಬೇಕಾದರೆ ಟ್ಯಾಕ್ಸ್ ಕೊಡಲೇ ಬೇಕಾಗುತ್ತದೆ ಜೀವನ ರಸಮಯವಾಗಬೇಕಾದರೆ ಕವನ ಬೇಕಾಗುತ್ತದೆ. ಇನ್ನು ಕೆಲವು ಮಾನ್ಯ ಸ್ನೇಹಿತರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಇಂಜನಿಯರಿಂಗ್ ಗೂಡ್ಸ್ ಮೇಲೆ ಟ್ಯಾಕ್ಸ್ ಹಾಕಬೇಕು, ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಓರಿಯಂಟೆಡ್ ಗೂಡ್ಸ್ ಮೇಲೆ ಟ್ಯಾಕ್ಸ್ ಹಾಕಬೇಕೆಂದು ಹೇಳಿದ್ದಾರೆ. ಈಗ ಉದಾಹರಣೆಗೆ ತೆಗೆದುಕೊಂಡರೆ ಕಾರುಗಳ ಮೇಲೆ ನಾಲ್ಕು ಸಾವಿರ ಏರಿಸಬೇಕಾಗುತ್ತದೆ. ಇನ್ನು ಎಕ್ಸೈಜ್ ಡ್ಯೂಟಿ ಮತ್ತು ಸೇಲ್ಸ್ ಟ್ಯಾಕ್ಸ್ ಇವೆಲ್ಲಾ ಇಂಜನೀಯರಿಂಗ್ ಗೂಡ್ಸ್ ಆಗುತ್ತದೆ. ಇವುಗಳ ಮೇಲೆ ಹಾಕಬೇಕೆಂದು ಹೇಳುತ್ತೀರಾ ? ಇದು ನಮಗೆ ಸಮಂಜಸವಾಗಿ ಕಾಣುವುದಿಲ್ಲ. ಇನ್ನು ತಾಲ್ಲೂಕು ಬೋರ್ಡು ಹಣ ಕೊಡಬೇಕು ಎಂದು ಹೇಳುತ್ತಿದ್ದೀರಿ. ಈ ವಿಚಾರದಲ್ಲಿ ತಾಲ್ಲೂಕು ಬೋರ್ಡ್‌ಗಳಿಗೂ ಮೇಯಿಂಟೇನೆನ್ಸ್ ಖರ್ಚು ಇರುತ್ತದೆ ಅಲ್ಲಿಯೂ ಕೂಡ ಹಣದ ಅಭಾವ ಇದೆ. ಅವರು ಕೂಡ ಗ್ರ್ಯಾಂಟ್ಸ್ ಕೊಡಿ ಎಂದು ಕೇಳುತ್ತಾರೆ. ಅದರ ಸಲುವಾಗಿ ಅವರು 1,500 ರೂಪಾಯಿ ಸ್ಕೂಲ್ ಕಟ್ಟಡಕ್ಕೆ ಕೊಟ್ಟರೆ ಅವರ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ. ಯಾವುದಾದರೂ ಕೆಲವು ತಾಲ್ಲೂಕು ಬೋರ್ಡುಗಳು ಆರ್ಥಿಕ ಪರಿಸ್ಥಿತಿ ಸ್ವಲ್ಪ ಉತ್ತಮವಿರುತ್ತವೆ. ಎಲ್ಲಾ ತಾಲ್ಲೂಕು ಬೋರ್ಡುಗಳು ಉತ್ತಮ ಮಟ್ಟದಲ್ಲಿ ಇರುವುದಿಲ್ಲ, ಆದ್ದರಿಂದ ಅವರನ್ನು ಕೊಡಿ ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಇನ್ನು ಕೇರ್ ಸಂಸ್ಥೆಯ ವಿಚಾರದಲ್ಲಿ ಬಹಳ ದುರವಿನಿಯೋಗವಾಗಿದೆ ಎಂದು ಹೇಳಿದರು ಅದರಲ್ಲಿ ದುರವಿನಿಯೋಗವಾಗದಿದ್ದರೂ ಕೂಡ ಅದರಿಂದ ಕಟ್ಟಡದ ಬಗ್ಗೆ ಏನೂ ಅನುಕೂಲವಾಗುವುದಿಲ್ಲ. ಜೊತೆಗೆ ಆ ರೀತಿ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡದೇಹೋಗಿದ್ದರೆ ಎಷ್ಟೋ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿತ್ತು. ಇನ್ನು ಒಂದು ಸಲಹೆಯನ್ನು ಅನೇಕ ಮಿತ್ರರು ಕೊಟ್ಟಿದ್ದಾರೆ ಅದು ಏನು ಎಂದರೆ ಕೇಂದ್ರದಿಂದ ಹೆಚ್ಚಿಗೆ ಹಣವನ್ನು ಕಟ್ಟಡಕ್ಕೋಸ್ಕರ ಕೇಳಬೇಕೆಂದು. ಟ್ಯಾಕ್ಸ್ ಹಾಕಬಾರದೆಂದು ಹೇಳಿದರೆ ಹೇಗೆ? ಕೇಂದ್ರಕ್ಕೆ ಎಷ್ಟು ಜವಾಬ್ದಾರಿ ಇದೆಯೆನ್ನುವುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು. ಕೇಂದ್ರಕ್ಕೆ ಸೇರಿದಂತೆ 22 ಸ್ಟೇಟ್ಸ್‌ಗಳು ಇವೆ ಅವುಗಳ ಎಲ್ಲದರ ಜವಾಬ್ದಾರಿ ಅವರಿಗೆ ಸೇರಿರುವುದರಿಂದ ಇಂತಹ ಸಣ್ಣ ಪುಟ್ಟ ಕೆಲಸಗಳಿಗೆಲ್ಲಾ ಕೇಳಿದರೆ ಮುಂದೆ ದೊಡ್ಡ ದೊಡ್ಡ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಕೇಂದ್ರದವರಿಗೆ ಬಹಳ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್ಸ್ ಜಾಸ್ತಿ ಇವೆ ಜೊತೆಗೆ ದೇಶದ ಭದ್ರತೆಯದೃಷ್ಟಿಯಿಂದ ನಮ್ಮ ಡಿಫೆನ್ಸ್‌ಗೆ ಹೆಚ್ಚಿನ ಹಣ ವಿನಿಯೋಗವಾಗುತ್ತಿದೆ. ಇದು ಬಹಳ ಅವಶ್ಯವಾದುದು. ಆದ್ದರಿಂದ ಯಾವುದಾದರೂ ದೊಡ್ಡ ಪ್ರಮಾಣದ ಕಾರ್ಯಗಳಿಗೆ ಕೇಂದ್ರದ ನೆರವನ್ನು ನಾವು ಪಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್,—ಎಜುಕೇಷನ್ ಕೇಂದ್ರಕ್ಕೆ ಸಂಬಂಧಪಟ್ಟಿಲ್ಲವೇ ?

ಶ್ರೀ ಜೆ. ಎಸ್. ಅಮ್ಮಣ್ಣ .—ಎಜುಕೇಷನ್ ಕೇಂದ್ರಕ್ಕೆ ಸಂಬಂಧಪಟ್ಟಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕಟ್ಟಡಗಳಿಗೋಸ್ಕರ ಕೇಳುವುದಕ್ಕಿಂಥ ಯಾವುದಾದರೂ ರೀಸರ್ಚ್ ಅಥವಾ ಇನ್ನೂ ಅಭಿವೃದ್ಧಿ ಬಾಬುಗಳಿಗೆ ಜಾಸ್ತಿ ಖರ್ಚು ಬಂದರೆ ಆಗ ಕೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೇ ಕೇಂದ್ರದಿಂದ 20 ಕೋಟಿ ರೂಪಾಯಿ ಪಡೆದರೆ ಯಾವ ಟ್ಯಾಕ್ಸ್ ಹಾಕುವುದು ಬೇಡ ಬೇಕಾಗುವುದಿಲ್ಲ.

ಶ್ರೀ ಜೆ. ಎಸ್ ಅಮ್ಮಣ್ಣವರ್.—ಹಾಗೆ ಒಂದೇ ಸಾರಿ ಒಂದೇ ಬಾಬಿಗೆ ೨೦ ಕೋಟಿ ರೂಪಾಯಿ ಕೇಂದ್ರ ಕೊಡುವುದಾದರೆ ಬೇರೆ ರಾಜ್ಯಗಳಿಗೇ ಅದೇ ರೀತಿ ಕೊಡಬೇಕಾದರೆ ಕೇಂದ್ರದಲ್ಲಿ ಹಣ ಇರಬೇಕಲ್ಲವೇ? ಇನ್ನು ಕೆಲವೊಂದು ಶಿಕ್ಷಣದ ಸುಧಾರಣೆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡರೆ ಅದನ್ನು ಅಭಿವೃದ್ಧಿ ಪಡಿಸಬೇಕಾದರೆ ಸೆಸ್ ಹಾಕದೆ ಇರುವುದಕ್ಕೆ ಸಾಧ್ಯವಿಲ್ಲ ಆದರೆ ಟ್ಯಾಕ್ಸ್ ಹಾಕುವುದಕ್ಕೂ ಕೇಂದ್ರದಿಂದ ಸಹಾಯ ಪಡೆಯುವುದಕ್ಕೂ ಯಾವ ಸಂಬಧವಿಲ್ಲವೆಂದು ಹೇಳಬಯಸುತ್ತೇನೆ. ಏನು ಬಹಳವಾಗಿ ತೆರಿಗೆಗಳನ್ನು ಹಾಕಿದ್ದಾರೋ ಅದು ಅಷ್ಟು ಹೆಚ್ಚೆಂದು ನನಗನ್ನಿಸುವುದಿಲ್ಲ ಈಗ ಏನು ಟ್ಯಾಕ್ಸ್ ಹಾಕಿದ್ದಾರೋ ಅದು ಬಹಳ ಸೂಕ್ತವಾಗಿದೆ. ಮಿಡ್ಡೆ ಮೀಲ್ಸ್ ಪ್ರೋಗ್ರಾಂ ಜಾರಿ ಮಾಡುವುದರಿಂದ ಬಡವರಿಗೆ ಅನುಕೂಲವಾಗಿದೆ ಇವತ್ತು ಅದನ್ನು ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜನ ಕೇವಲ ಅಲ್ಲಿ ಏನು ಸಿಗುತ್ತದೋ ಅದನ್ನು ಮಾತ್ರ ತಿಂದುಕೊಂಡು ತಂತಮ್ಮ ಜೀವನ ನಡೆಸುತ್ತಿದ್ದಾರೆ. ಕೇರ್ ಸಂಸ್ಥೆಯವರು ಎಲ್ಲ ಆಹಾರಪದಾರ್ಥಗಳನ್ನು ಕೊಡದಿದ್ದರೆ ಎಷ್ಟೋ ಹುಡುಗರು ಶಾಲೆಗೇ ಬರುತ್ತಿರಲಿಲ್ಲವೆನ್ನುವ ಸಂಶಯವಿದೆ. ಅದರಿಂದಾಗಿ ಸರ್ಕಾರದವರು ಮಹತ್ವ ಪದಾರ್ಥಗಳ ಮೇಲೆ ಮಾತ್ರ ತೆರಿಗೆಗಳನ್ನು ಈಗ ಹಾಕಿದ್ದಾರೆ. ಆದ್ದರಿಂದ ತಾವೆಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅರ್ಥಸಚಿವರು ಈ ಮಸೂದೆಯನ್ನು ಇಲ್ಲಿ ತಂದಿರು ವುದರಿಂದ ಇದಕ್ಕೆ ನನ್ನ ಪೂರ್ಣ ಬೆಂಬಲವನ್ನು ಕೊಟ್ಟು ಅವರಿಗೆ ವಂದಿಸಿ, ತಾವು ನನಗೆ ಇಷ್ಟು ಮಾತ ನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಜಿ ಬಣಕಾರ್ (ಹಿರೇಕೆರೂರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಆರ್ಥಿಕ ಮಂತ್ರಿಗಳು ಮಂಡಿಸಿದಂಥ ಟ್ಯಾಕ್ಸ್‌ಗಳ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸಹಸ್ರಾರು ಹಳ್ಳಿಗಳಿವೆ ಪ್ರತಿಯೊಂದು ಹಳ್ಳಿಯಲ್ಲಿ ಒಂದಾದರೂ ಶಾಲೆ ಬೇಕು. ಹಳ್ಳಿಯ ವ್ಯವಹಾರ ತಿಳಿದವರ ಪೈಕಿ ನಾನೂ ಒಬ್ಬ. ಇವತ್ತು ಅಂಕಿಅಂಶಗಳನ್ನು ನೋಡಿದರೆ, ಶೇಕಡ ೨೦ ರಷ್ಟು ಹಳ್ಳಿಗಳಲ್ಲಿ ಒಂದು ಶಾಲೆಯೂ ಇಲ್ಲ. ದೇವಸ್ಥಾನಗಳಲ್ಲಿ ಮತ್ತು ಮಸೀದಿಗಳಲ್ಲಿ ಹಳ್ಳಿಗಳ ಕಡೆ ಶಾಲೆಗಳನ್ನು ನಡೆಸುತ್ತಿದ್ದಾರೆ ಮಕ್ಕಳಿಗೆ ಅಲ್ಲಿ ವಿದ್ಯಾಬುದ್ಧಿ ಕಲಿಸುತ್ತಿದ್ದಾರೆ. ಇವತ್ತು ಅಲ್ಲಿಗೆ ಸುಣ್ಣ, ಬಣ್ಣ ಸಹ ಅನೇಕ ವರ್ಷಗಳಿಂದ ಹಚ್ಚಿಲ್ಲ. ಅಂತಹ ಕಡೆಗಳಲ್ಲಿ ವಿದ್ಯಾಭ್ಯಾಸ ಕೊಡುತ್ತಿದ್ದಾರೆ. ಈಗ ಮೂರು ನಾಲ್ಕು ವರ್ಷಗಳಲ್ಲಿ ಆಗಿರತಕ್ಕ ಅಂಕಿ ಅಂಶಗಳ ಲೆಕ್ಕವನ್ನು ನೋಡಿದರೆ ಅನೇಕ ಗ್ರಾಮ ಗಳಲ್ಲಿ ಶಾಲೆಗಳೇ ಇಲ್ಲ. ಕೆಲವು ಕಡೆಗಳಲ್ಲಿ ಒಂದು ಶಾಲೆಯನ್ನೂ ಕೊಡದೇ ಇರುವ ಉದಾಹರಣೆಗಳನ್ನು ಬೇಕಾದರೆ ನಾನು ಕೊಡುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಕೇವಲ ಒಂದೇ ಶಾಲೆ ಕೊಟ್ಟಿರುವ ಶಾಲೆ ಗಳೂ ಸಹ ಇವೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿಯೂ ಕನಿಷ್ಠಪಕ್ಷ ಒಂದು ಶಾಲೆಯನ್ನಾದರೂ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಆರ್ಥಿಕ ಮಂತ್ರಿಗಳು ನಿಜವಾಗಿ ಹಳ್ಳಿಗಳಲ್ಲಿ ಇದರ ಬಗ್ಗೆ ಅಲ್ಲಿನ ಜನರನ್ನು ಅಲಕ್ಷ್ಯ ಮಾಡಬಾರದು. ಹಳ್ಳಿಗಳಲ್ಲಿರತಕ್ಕ ಸಣ್ಣ ಬಾಲಕರು ಏನಿದ್ದಾರೆಯೋ ಅವರ ಮನಸ್ಸು ಮೊದಲು ವಿಕಾಸ ಆಗಬೇಕು. ನಮ್ಮ ಹಳ್ಳಿಗಳಲ್ಲಿರತಕ್ಕವರು ಉತ್ತಮ ನಾಗರೀಕರು ಆಗಬೇಕಾದರೆ ಅಲ್ಲಿ ಉತ್ತಮ ಶಿಕ್ಷಣ ದೊರೆಯಬೇಕು. ಆ ರೀತಿ ಆಗಬೇಕಾದರೆ ಪ್ರತಿಯೊಂದು ಗ್ರಾಮ ದಲ್ಲಿಯೂ ಕನಿಷ್ಟ ೭ ಸಾವಿರ ರೂಪಾಯಿಗಳನ್ನಾದರೂ ಖರ್ಚುಮಾಡಿ ಒಂದು ಶಾಲಾ ಕೊಠಡಿಯನ್ನು ಕಟ್ಟಿಸುವುದಕ್ಕೆ ಪ್ರಯತ್ನಪಡಬೇಕು ಅಲ್ಲಿ ಒಂದು ಶಾಲೆಯನ್ನಾದರೂ ತೆರೆಯಬೇಕು. ೭೬–೭೭ ರಲ್ಲಿ ಪ್ರಧಾನಿಯವರ ೨೦ ಅಂಶಗಳ ಕಾರ್ಯಕ್ರಮಗಳಲ್ಲಿ ಇಂತಹ ಒಂದು ಜನತಾ ಯೋಜನೆಯೊಂದನ್ನು ಹಾಕಿಕೊಂಡಿದ್ದಾರೆ. ಶಾಲೆಗಳನ್ನು ಕಟ್ಟುವ ಯೋಜನೆಗಳನ್ನು ಸಹ ಹಾಕಿಕೊಂಡಿದ್ದಾರೆ. ಎಲ್ಲಿ ಶಾಲೆ ಇಲ್ಲವೋ ಅಂತಹ ಕಡೆಗಳಲ್ಲಿ ಒಂದು ಶಾಲೆಯನ್ನು ಕಟ್ಟಿಸಿಕೊಡಬೇಕು. ಆ ರೀತಿಯಾದ ಯೋಜನೆ ಯನ್ನು ಹಾಕಿಕೊಂಡರೆ ನಿಜವಾಗಿಯೂ ಮಾನ್ಯ ಅರ್ಥಮಂತ್ರಿಗಳಿಗೆ ಒಂದು ಒಳ್ಳೆಯ ಹೆಸರು ಬರುತ್ತದೆ. ನಮ್ಮ ಸರ್ಕಾರಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ ಜನತೆಯೂ ನಿಮಗೆ ಒಳ್ಳೆಯದಾಗಲಿ ಎಂಬುದಾಗಿ ಹರಸುತ್ತಾರೆಂದು ನಾನು ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ನಗರದಲ್ಲಿರತಕ್ಕ ಶಾಲೆಗಳು

ಏನಿವೆಯೋ ಅವುಗಳ ಪರಿಸ್ಥಿತಿ ಒಂದು ತರಹ ಆಗಿದೆ. ಇಲ್ಲಿ ಹಣದ ಅಭಾವ. ಅದನ್ನು ಯಾರು ಕಟ್ಟಿಸಬೇಕೆಂದು ತೀರ್ಮಾನವನ್ನೇ ಜಾಗ್ರತೆಯಾಗಿ ತೆಗೆದುಕೊಳ್ಳುವುದಿಲ್ಲ. ಇತ್ಯರ್ಥವಾಗುವುದೇ ಇಲ್ಲ. ಅವನ್ನು ಪಿ.ಡಬ್ಲ್ಯು.ಡಿ ಯವರು ಕಟ್ಟಿಸಬೇಕೋ ಅಥವಾ ಯಾರು ಕಟ್ಟಿಸಬೇಕೆಂಬ ಬಗ್ಗೆ ನಗರಗಳಲ್ಲಿ ಒಂದು ಯೋಜನೆ ಹಾಕಿಕೊಂಡು ಆ ತಕ್ಷಣವೇ ಅವನ್ನು ಕಟ್ಟಿಸಬೇಕೆಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಆಗ ಅವುಗಳ ಬಗ್ಗೆ ಸರಿಯಾದ ಕಂದಾಯ ಅದರ ಜೊತೆಗೆ ಇತರ ತೆರಿಗೆಗಳನ್ನು ಹಾಕಬಹುದು. ಈ ದಿಶೆಯಲ್ಲಿ ತೆರಿಗೆಗಳನ್ನು ಹಾಕಿದರೆ ಅಡ್ಡಿ ಇಲ್ಲ. ಆದರೆ ಟ್ಯಾಕ್ಸ್ ಮುಖಾಂತರ ಏನು ಹಣ ವಸೂಲಾಗುತ್ತದೋ ಅದು ಸದ್ವಿನಿಯೋಗವಾಗಬೇಕು. ಅದರ ಪ್ರತಿಫಲ ಪ್ರತಿಯೊಬ್ಬರಿಗೂ ಹೋಗಬೇಕು. ಇವತ್ತಿನ ದಿವಸ ಇಡೀ ರಾಜ್ಯದ ಬಡ್ಜೆಟ್ಟಿನಲ್ಲಿ ಈ ಬಾಬಿಗೆ ಕೊಟ್ಟಿರತಕ್ಕ ಹಣ ನೋಡಿದರೆ, ಹೋದ ಸಾರಿ ನಾನು ಹೇಳಿದ ಹಾಗೆ ಕೇರಳ ರಾಜ್ಯದಲ್ಲಿಯೇ ಸರ್ಕಾರದ ಉತ್ಪನ್ನದಲ್ಲಿ ಶೇಕಡ ೬೦ ರಷ್ಟು ಹಣ ಸರ್ಕಾರದ ನೌಕರರಿಗೆ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಇಲ್ಲಿಯೂ ಕೊಡುತ್ತಿದ್ದಾರೆಂದರೆ ಅದೇನೂ ತಪ್ಪಾಗಲಾರದು. ನಮ್ಮ ಸರ್ಕಾರದಲ್ಲಿ ಒಟ್ಟು ಉತ್ಪನ್ನದಲ್ಲಿ ಸಿಂಹಪಾಲಿನಷ್ಟು ಬಹುತೇಕವಾಗಿ ಶೇಕಡ ೬೦ ರಷ್ಟು ಸರ್ಕಾರದ ನೌಕರರಿಗೋಸ್ಕರವೇ ಖರ್ಚು ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳೂ ಇವತ್ತು ಏನೂ ಆಗುತ್ತಿಲ್ಲ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವುದಕ್ಕೆ ಸರಿಯಾದಂಥ ರಸ್ತೆ ಇಲ್ಲ, ಮಕ್ಕಳಿಗೆ ಶಾಲೆಗಳಿಲ್ಲ. ಯಾವ ಒಂದು ಅಭಿವೃದ್ಧಿ ಕಾರ್ಯವೂ ಸರಿಯಾಗಿ ನಡೆಯುತ್ತಾ ಇಲ್ಲ. ತಾಲ್ಲೂಕು ಮಂಡಳಿ ವಿಚಾರ ತೆಗೆದುಕೊಂಡು ನೋಡಿದ್ದೇ ಆದರೆ ಅವರಿಗೆ ಕೊಟ್ಟಿರತಕ್ಕ ಹಣದಲ್ಲಿ ಹೆಚ್ಚು ಹಣ ಬಿ.ಡಿ.ಓ. ಮುಂತಾದ ಸಿಬ್ಬಂದಿಗಾಗಿಯೇ ಸುಮಾರು ೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅವರು ಅಲ್ಲಿ ಕೇವಲ ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಬೇಕು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಹುದ್ದೆಗಳನ್ನು ನಿರ್ಮಾಣ ಮಾಡುತ್ತಿಲ್ಲ. ಇವತ್ತಿನ ದಿವಸ ಅಲ್ಲಿ ದೊಡ್ಡ ದೊಡ್ಡ ಹುದ್ದೆ ಅಂದರೆ ತಹಸೀಲ್ದಾರ್ ಹುದ್ದೆ ಮತ್ತು ಅಸಿಸ್ಟೆಂಟ್ ಕಮಿಷನರ್, ಅದರಲ್ಲಿಯೂ ಅಗ್ರಿಕಲ್ಚರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಹುದ್ದೆಗಳನ್ನು ಕ್ರಿಯೇಟ್ ಮಾಡುವುದಕ್ಕೆ ಇವರು ತಯಾರಿಲ್ಲ. ಅಲ್ಲಿರತಕ್ಕ ಪಟೇಲರ ಹುದ್ದೆಗಳಿಗೂ ಸರಿಯಾದ ಪಗಾರವನ್ನು ಕೊಡುತ್ತಾ ಇಲ್ಲ. ಕೇವಲ ದೊಡ್ಡವರ ಕಡೆಗೆ ಇವರು ಲಕ್ಷ್ಯ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ನೌಕರಿಗಳ ಬಗ್ಗೆ ತುಂಬಾ ಅಲಕ್ಷ್ಯ ಮಾಡುತ್ತಿದ್ದಾರೆಂದು ಕೂಗು ಇದ್ದೇ ಇದೆ. ಆದ್ದರಿಂದ ಅಲ್ಲಿರತಕ್ಕ ನೌಕರರಿಗೆ ಹೆಚ್ಚಿನ ಪಗಾರವನ್ನು ಮೊದಲು ಕೊಡಬೇಕು. ಏಕೆಂದರೆ ಈಗಾಗಲೇ ಪೇ ಕಮಿಷನ್ನಿನವರ ವರದಿ ಬಂದಿದೆಯೆಂಬ ಸುದ್ದಿ ಬಂದಿದೆ. ಇದರಿಂದ ೩೦–೪೦ ಕೋಟಿ ರೂಪಾಯಿಗಳು ರಾಜ್ಯದ ಬೊಕ್ಕಸಕ್ಕೆ ಖರ್ಚು ಆಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹಣವನ್ನು ಖರ್ಚು ಮಾಡುವಾಗ ಅದನ್ನು ಯೋಗ್ಯ ರೀತಿಯಲ್ಲಿ ಮಾಡಬೇಕು. ನನಗೆ ತಿಳಿದ ಮಟ್ಟಿಗೆ ಕೆಲವು ಖಾತೆಗಳಲ್ಲಿ ಅನೇಕ ಹುದ್ದೆಗಳನ್ನು ನಿರ್ಮಾಣ ಮಾಡಿ ಅವರಿಗೆ ಕೆಲಸವಿಲ್ಲದೇ ಇದ್ದರೂ ರಾಜ್ಯದ ಬೊಕ್ಕಸಕ್ಕೆ ತೊಂದರೆ ಕೊಡುವುದು ಬೇಡ. ಆದ್ದರಿಂದ ಆದಷ್ಟು ಹಣವನ್ನು ರಾಜ್ಯದ ಅಭಿವೃದ್ಧಿ ಕಡೆಗೆ ಗಮನಕೊಟ್ಟು ಖರ್ಚುಮಾಡಬೇಕೆಂದು ಹೇಳಿ ಮಾನ್ಯ ಸಚಿವರ ಸೂಚನೆಗೆ ನಾನು ಬೆಂಬಲವನ್ನು ಕೊಟ್ಟು, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಆರ್ಥಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ಇವತ್ತು ಈ ಬಿಲ್ಲಿನ ಮೇಲೆ ಇಷ್ಟೊಂದು ಚರ್ಚೆ ಇಲ್ಲಿ ಆಗುತ್ತದೆಂದು ನಾನು ತಿಳಿದಿರಲಿಲ್ಲ. ಏಕೆಂದರೆ ಇದು ಸರಳವಾದ ಮಸೂದೆ. ಇದಕ್ಕೆ ಎಲ್ಲಾ ಕಡೆಗಳಿಂದಲೂ ಸಾಕಷ್ಟು ಸ್ವಾಗತ ದೊರೆಯುತ್ತದೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಒಂದು ಸಂದರ್ಭವನ್ನು ಮಾನ್ಯ ಸದಸ್ಯರು ಉಪಯೋಗ ಮಾಡಿಕೊಂಡು ಅನಿವಾರ್ಯವಾದಂಥ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ತಂತಮ್ಮ ವಿಚಾರಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೆ ಅದಕ್ಕೆಲ್ಲಾ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಮಸೂದೆಯ ಹಿನ್ನೆಲೆಯಲ್ಲಿರತಕ್ಕ ಮುಖ್ಯ ವಿಚಾರಗಳು ಏನು ಇವೆಯೋ ಅವು ಬಹಳ ಸ್ಪಷ್ಟವಾಗಿದೆ. ಗ್ರಾಮಾಂತರದ ಹಲವು ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕೆಂಬುದು ಈ ಮಸೂದೆಯ ಮುಖ್ಯೋದ್ದೇಶ. ಅದಕೋಸ್ಕರ ಸರ್ಕಾರಕ್ಕೆ ಹೆಚ್ಚಿಗೆ ಹಣ ಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. ನನಗೆ ತಿಳಿದುಬಂದಿರುವ ಹಾಗೆ ಈ ಕರ್ನಾಟಕದಲ್ಲಿ ೪೩ ಲಕ್ಷ ವಿದ್ಯಾರ್ಥಿ,

ವಿದ್ಯಾರ್ಥಿನಿಯರು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ ೬೦ ಸಾವಿರ ಕಟ್ಟಡಗಳು ಅಂದರೆ ಸ್ಕೂಲ್ ರೂಮ್ಸ್ ಮಾತ್ರ ನಮ್ಮ ರಾಜ್ಯದಲ್ಲಿವೆ. ಹೀಗಿರುವಾಗ ೧೦ ಸಾವಿರ ಶಾಲೆಗಳಿಗೆ ಸರಿಯಾದ ಕಟ್ಟಡಗಳು ಇಲ್ಲ. ಕನಿಷ್ಠ ಇನ್ನೂ ೩೦ ಸಾವಿರ ಕಟ್ಟಡಗಳನ್ನಾದರೂ ಕೊಡಬೇಕೆಂಬುದರಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಇದು ಸಂತೋಷದ ವಿಚಾರ. ಆದರೆ ಶಾಲಾ ಕಟ್ಟಡಗಳನ್ನು ಕಟ್ಟುವ ವಿಧಾನಗಳ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಅದಕ್ಕಾಗಿ ಹಣವನ್ನು ಎಲ್ಲಿಂದ ತರಬೇಕು, ಅದನ್ನು ಕೊಡುವಾಗ ಯಾವರೀತಿಯಲ್ಲಿ ಕೊಡಬೇಕು ಎಂಬುದು ಮುಖ್ಯ. ಆದರಿಂದಲೇ ಸ್ವಲ್ಪಮಟ್ಟಿಗೆ ತೆರಿಗೆಗಳನ್ನು ಜಾಸ್ತಿಯಾಗಿ ಹಾಕಬೇಕಾಗುತ್ತದೆ. ಇಂತಹ ಒಂದು ಒಳ್ಳೆಯ ಕೆಲಸಕ್ಕೆ ಹಣ ಖರ್ಚುಮಾಡಬೇಕಾಗುತ್ತದೆಂದರೆ, ತೆರಿಗೆ ಹೆಚ್ಚಿಗೆ ಕೊಡುವವರಿಗೆ ಒಂದು ರೀತಿ ಆತ್ಮವಿಶ್ವಾಸ ಬೆಳೆಯುತ್ತದೆ, ಆಗ ಅಂತಹ ಒಳ್ಳೆಯ ಕಾರ್ಯಕ್ರಮಗಳಿಗೋಸ್ಕರ ಅವರೂ ಸಹ ಇನ್ನೂ ಸ್ವಲ್ಪ ಹೆಚ್ಚಿಗೆ ತೆರಿಗೆಯನ್ನು ಕೊಟ್ಟರೂ ಪರವಾ ಇಲ್ಲವೆಂಬ ಸಮಾಧಾನವನ್ನು ತಂದುಕೊಂಡು ಕೊಡುತ್ತಾರೆ. ಇಲ್ಲದಿದ್ದರೆ ಈ ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ದೊಡ್ಡ ಬೊಕ್ಕಸದಲ್ಲಿ ಈ ೨ ಕೋಟಿ ರೂಪಾಯಿಗಳು ಎಲ್ಲೋ ಹೋಗುತ್ತದೆ. ಅದು ನಮಗೆ ಗೊತ್ತಾಗುತ್ತಾ ಇಲ್ಲ. ಇದರ ಬಗ್ಗೆ ಟೀಕೆ ಬರಬಾರದೆಂಬ ಉದ್ದೇಶದಿಂದ ೨ ಕೋಟಿ ರೂಪಾಯಿಗಳ ವರಮಾನ ಇದರಿಂದ ಬರಲಿ ಎಂದು ಹೆಚ್ಚಿನ ತೆರಿಗೆಗಳನ್ನು ಹಾಕುತ್ತಾ ಇದ್ದೇವೆ. ಇದನ್ನು ಸ್ಪಷ್ಟವಾಗಿ ಬಜೆಟ್ಟಿನಲ್ಲಿ ತೋರಿಸುವ ದೃಷ್ಟಿಯಿಂದ ಈ ರೀತಿಯಾಗಿ ಈಗ ತೆರಿಗೆಗಳನ್ನು ಹೆಚ್ಚಿಗೆ ಹಾಕಿದ್ದೇವೆ.

4–30 P.M.

ಆದುದರಿಂದ ಇದು ಏನೋ ಹೈಡ್ ಅಂಡ್ ಸೀಕ್ ಪಾಲಿಸಿ ಎಂದು ಹೇಳಿದರು, ಅಥವಾ ವಾಸ್ತವಿಕವಾದ ಪರಿಸ್ಥಿತಿಗೆ ವಿರುದ್ಧವಾಗಿ ಬೇರೆ ರೀತಿಯಲ್ಲಿದೆ ಎಂದು ಏನು ಹೇಳಿದರು ಅಥವಾ ಇದನ್ನು ಕನ್‌ಫ್ಯೂಜ್ ಮಾಡುವ ದೃಷ್ಟಿಯಿಂದ ಮಾಡಿರತಕ್ಕಂಥದ್ದು ಎಂದು ಏನು ಹೇಳಿದರು, ಆದರೆ ಇದನ್ನು ಆ ರೀತಿ ಮಾಡತಕ್ಕಂಥದ್ದು ಅಲ್ಲವೆಂದು ಮಾನ್ಯ ಸದಸ್ಯರುಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇನ್ನು ಕಟ್ಟಡ ಕಟ್ಟುವ ವಿಚಾರ ಸ್ಕೂಲ್ ರೂಂಗಳನ್ನು ಕಟ್ಟುವುದಕ್ಕೆ ನೀವು ಏನು ನಿರೀಕ್ಷಣೆ ಮಾಡಿದ್ದೀರೋ ಅಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲೂ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಮುಖ್ಯಮಂತ್ರಿಗಳವರೂ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದರು. ಮೊದಲನೆಯದಾಗಿ ನಾವು ಈ ರೀತಿ ಸ್ಕೂಲ್ ಕಟ್ಟಡಗಳಿಗೆ ೬–೭ ಸಾವಿರ ರೂಪಾಯಿಗಳನ್ನು ಹೀಗೆ ಕೊಡುತ್ತಾ ಹೋದರೆ ನಾವು ಏನು ನಿರೀಕ್ಷಣೆ ಮಾಡಿದ್ದೇವೋ ಅಷ್ಟು ಸ್ಕೂಲ್ ರೂಂಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ೩೬ ಸಾವಿರ ರೂಂಗಳನ್ನು ಕಟ್ಟಬೇಕಾದರೆ ಎಷ್ಟೋ ವರ್ಷಗಳು ಬೇಕಾಗುತ್ತದೆ. ಆದುದರಿಂದ ಯಾವರೀತಿ ಜನತಾ ಗೃಹನಿರ್ಮಾಣ ಯೋಜನೆಗಳ ಪ್ರಕಾರ ಏನು ಸರ್ಕಾರದವರು ಹೆಚ್ಚಿಗೆ ಹಣವನ್ನು ಕೊಡಲಿಕ್ಕೆ ಒಪ್ಪಲಿಲ್ಲವೋ, ಅದೇ ರೀತಿ ಇದರ ಬಗ್ಗೆ ಕೂಡ ಸ್ವಲ್ಪ ಯೋಚನೆ ಮಾಡಬೇಕು, ಬಹಳಷ್ಟು ಹಣವನ್ನು ಕೊಡುವುದಕ್ಕೆ ಹೋಗಬಾರದು ಎನ್ನುವ ವಿಚಾರ ಮೂಡಿ ಬಂತು. ಈಗ ನಾವೇನು ೪೫೦೦ ರೂಪಾಯಿಗಳನ್ನು ಕೊಡಬೇಕೆಂದಿದ್ದೇವೆ, ಅದು ಕೊಟ್ಟಾಕ್ಷಣ ಅಲ್ಲಿರತಕ್ಕಂಥ ಪಂಚಾಯಿತಿ ಮತ್ತು ಸ್ಥಳೀಯ ಜನ ಸೇರಿ ನಾವು ಕೊಡತಕ್ಕಂಥ ಹಣಕ್ಕೆ ಅವರು ೨–೩ ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿದರೆ ೭–೮ ಸಾವಿರ ರೂಪಾಯಿಗಳಿಗೆ ಒಂದು ಒಳ್ಳೆಯ ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯತೆ ಇದೆ. ಯಾವುದೇ ರೀಯ ಕಾಂಟ್ರಿಬ್ಯೂಷನ್ ಸಿಕ್ಕದೇ ಹೋದರೂ ಕೂಡ ೪೫೦೦ ರೂಪಾಯಿಗಳಿಗೆ ಕಟ್ಟಡವನ್ನು ಕಟ್ಟುವುದಕ್ಕೆ, ಎಷ್ಟು ಕಟ್ಟುವುದಕ್ಕೆ ಸಾಧ್ಯವೋ ಅಷ್ಟನ್ನು ಮಾತ್ರ ಕಟ್ಟಲು ಸಾಧ್ಯವಿದೆ. ಅದಕೋಸ್ಕರ ಈ ಟೈಪ್ ಡಿಜೈನ್ ಏನಿದೆ ಅದನ್ನು ಸ್ವಲ್ಪ ಫ್ಲೆಕ್ಸಿಬಲ್ ಆಗಿ ಮಾರ್ಪಾಡು ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಕೂಡ ಇದರಲ್ಲಿ ಸೇರಿಸಿದ್ದೇವೆ. ಇದು ಅಲ್ಲದೇನೇ ವಿಂಡ್‌ಡೆ ಮಿಲ್ಸ್‌ನ ಬಗ್ಗೆ ಈ ಬಿಲ್ಲನ್ನು ಮಂಡನೆ ಮಾಡುವಾಗ ಸಂಕ್ಷಿಪ್ತವಾಗಿ ಒಂದೆರಡು ಮಾತುಗಳನ್ನು ಹೇಳಿದ್ದೆ. ಇದರ ಬಗ್ಗೆ ನಾವು ಬಹಳ ಗಹನವಾಗಿ ಯೋಚನೆ ಮಾಡಬೇಕಾಗಿದೆ. ಇದರಲ್ಲಿ ಕರಪ್ಷನ್ ಇದೆ ಎಂದು ಮಾನ್ಯ ಸದಸ್ಯರುಗಳು ಟೀಕೆ ಮಾಡಿದರು. ಬರೀ ನೀವು ಆ ರೀತಿ ಹೇಳಿದರೆ ನಿಮ್ಮ ಜವಾಬ್ದಾರಿಯನ್ನು ನೀವು ನಿರ್ವಹಿಸಿದಂತೆ ಆಗುವುದಿಲ್ಲ. ಕರಪ್ಷನ್ ಎಲ್ಲಿಯಾದರೂ ನಡೆದಿದೆಯೆಂದು ತಿಳಿದು ಬಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳು ಸುಮ್ಮನೇ ಇರಬಾರದು ಅದನ್ನು ಬೆಳಕಿಗೆ ತರಬೇಕಾಗುತ್ತದೆ. ಅದನ್ನು ಅಧಿಕಾರಿಗಳಿಗೆ ತಿಳಿಸಬೇಕಾಗುತ್ತದೆ, ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ,

ಇಲ್ಲದೇ ಹೋದರೆ ಯಾವ ಕಾರ್ಯಕ್ರಮವನ್ನೂ ಸಹ ಸರ್ಕಾರದವರು ಸರಿಯಾಗಿ ನಡೆಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೇರ್ ಪದಾರ್ಥಗಳು ಮಾರ್ಕೆಟ್‌ನಲ್ಲಿ ಸಿಗುತ್ತವೆಂದು ಮಾನ್ಯ ಸದಸ್ಯರುಗಳು ಹೇಳಿದರು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಾವು ಮೊದಲು ಆ ಆಹಾರ ಪದಾರ್ಥಗಳ ಉಪಯೋಗ ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೋ ಎನ್ನುವ ಬಗ್ಗೆ ಸಮರ್ಥನೆ ಮಾಡಿ ಹೇಳಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅದರ ಬಗ್ಗೆಯೂ ಕೂಡ ನಾವು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಏನೆಂದರೆ ನಾವು ಇಲ್ಲಿಯೇ ಏನು ಆಹಾರ ಪದಾರ್ಥಗಳನ್ನು ಬೆಳೆಯುತ್ತೇವೆ ಅವುಗಳನ್ನು ಉಪಯೋಗಿಸಿಕೊಂಡು ಮಿಡ್ ಡೆ ಮೀಲ್ಸ್ ಆಹಾರವನ್ನು ತಯಾರಿಸಬಹುದು. ನೆಲಗಡಲೆ, ಜೋಳ, ರಾಗಿ, ಬಾದ್ರ ಇಂಥದ್ದನ್ನೆಲ್ಲಾ ಯಾವ ಯಾವ ಸ್ಥಳದಲ್ಲಿ ಏನೇನು ಸಿಗುತ್ತದೆ ಅವನ್ನೆಲ್ಲಾ ಉಪಯೋಗಿಸಿ ಆಹಾರವನ್ನು ಮಕ್ಕಳಿಗೆ ಕೊಡಬಹುದು ಎನ್ನುವ ಬಗ್ಗೆ ಡಾ: ಅಮಲಾ ಮತ್ತು ಪ್ರೊಫೆಸರ್ ಧಾವನ್ ನಿನ್ನೆ ಸಾಯಂಕಾಲ ಬಂದಿದ್ದರು, ಆಗ ಇವರ ಬಗ್ಗೆ ಚರ್ಚೆ ಮಾಡಿದೆವು ಒಂದು ವಿಚಾರವೇನೆಂದರೆ ಇದಕ್ಕಾಗಿ ನಾವು ಕಾರ್ಖಾನೆಗಳನ್ನು ನಮ್ಮಲ್ಲಿಯೇ ಮಾಡಬಹುದಾಗಿದೆ ಅದಕ್ಕೆ ಬಹಳ ಹಣ ಬೇಕಾಗುತ್ತದೆ. ನಾವು ಲೆಕ್ಕ ಮಾಡಿದಾಗ 10 ರೂಪಾಯಿಗಳು ಪರ್ ಕ್ಯಾಪಿಟಾ ಆಗಬಹುದು, 1 ಲಕ್ಷ ಹುಡುಗರಿಗೆ ಆಹಾರವನ್ನು ತಯಾರಿಸುವುದಕ್ಕೆ ಒಂದು ಪ್ರೊಡಕ್ಷನ್ ಯೂನಿಟ್‌ಗೆ 10 ಲಕ್ಷ ರೂಪಾಯಿಗಳು ಬೇಕಾಗಬಹುದು ಯಂತ್ರಗಳು ನಮ್ಮ ದೇಶದಲ್ಲಿಯೇ ತಯಾರಿಸಲಿಕ್ಕೆ ಸಾಧ್ಯವಿವೆ. ಈಗ ಏನಾಗಿದೆ ಎಂದರೆ ಅದನ್ನು ಯಾವ ರೀತಿಯಾಗಿ ಕೊಡಬೇಕು, ಯಾವ ರೀತಿಯಾಗಿ ಹಂಚಬೇಕು ಎನ್ನುವ ಪ್ರಶ್ನೆ ಇದೆ. ಅದು ಹುಡುಗರಿಗೆ ಕೊಡುವುದಕ್ಕೆ ಅನುಕೂಲವಾಗಿರಬೇಕು. ಇನ್ನು ಕುಕ್ಕಿಂಗ್ ಏನಿದೆ ಅಡಿಗೆ ಮಾಡುವ ಕ್ರಮ ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ, ಈ ಸಪ್ಲಿಮೆಂಟಲ್ ಡೈಯಟ್ ಕೊಡುವುದರಿಂದ ಆ ಮಕ್ಕಳಿಗೆ ಏನು ಪೌಷ್ಟಿಕಾಂಶ ಆಹಾರದ ಕೊರತೆ ಇರುತ್ತದೆ ಅದನ್ನು ನಿವಾರಣೆ ಮಾಡಿದಂತಾಗುತ್ತದೆ, ಅದಕ್ಕಾಗಿ ಕೆಲವು ವಿಟಮಿನ್ಸ್ ಕೊಡಬೇಕಾಗಿದೆ, ಪ್ರೊಟೀನ್ಸ್ ಕೊಡಬೇಕು, ಕಾರ್ಬೋಹೈಡ್ರೇಟ್ಸ್ 80 ಗ್ರಾಂ ನಷ್ಟು ಒಂದೊಂದು ಮಗುವಿಗೆ ಕೊಟ್ಟರೆ ಆದರಲ್ಲಿ 15-16 ಪರ್ಸೆಂಟ್ಸ್ ಪ್ರೋಟೀನ್ಸ್ ಇರುತ್ತದೆ ಆದುದರಿಂದ ಇಂಥ ಕಾರ್ಖಾನೆಯನ್ನು ಏತಕ್ಕೆ ಪ್ರತಿಜಿಲ್ಲೆಯಲ್ಲೂ ಒಂದೊಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬಾರದು ಎನ್ನುವ ದಿಶೆಯಲ್ಲಿ ಯೋಚನೆ ಮಾಡುತ್ತಿದ್ದೇವೆ ಇದನ್ನೆಲ್ಲಾ ಮಾಡಬೇಕಾದರೆ ಕಾರ್ಯಕ್ರಮದ ಬಗ್ಗೆ ಜನತೆಯಲ್ಲಿ ನಾವು ನಿರಾಶೆಯನ್ನುಂಟುಮಾಡುವ ರೀತಿಯಲ್ಲಿ ಖಂಡಿತವಾಗಿ ಮಾಡುವುದಿಲ್ಲ, ಇದನ್ನು ಖಂಡಿತವಾಗಿ ಕೈ ಬಿಡುವುದಿಲ್ಲ. ಈಗಿರುವ 40-50 ಲಕ್ಷ ಹುಡುಗರಿಗೆ ಸಪ್ಲಿಮೆಂಟರಿ ಡೈಯಟ್ ಫುಡ್‌ನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ, ಇಲ್ಲದೆ ಹೋದರೆ ಯಾವಕಟ್ಟಡ ಮತ್ತೇ ಇನ್ನು ಏನೇ ಕೊಟ್ಟರೂ ಅದರಿಂದ ಆ ಮಕ್ಕಳಿಗೆ ಏನೂ ಪ್ರಯೋಜನವಾಗುವುದಿಲ್ಲ ಅವರ ಬುದ್ಧಿ, ದೇಹ ಯಾವ ಮಟ್ಟದಲ್ಲಿ ಬೆಳವಣಿಗೆ ಆಗಬೇಕೋ ಅದು ಆಗ ಬೇಕು. ಅದು ಆಗದೇ ಹೋದರೆ ಬೇರೆ ಇನ್ನು ಯಾವ ಅನುಕೂಲತೆಗಳನ್ನು ಮಾಡಿಕೊಟ್ಟರೂ ಕೂಡ ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳತಕ್ಕಂಥ ಶಕ್ತಿ ಅವರಿಗೆ ಬರುವುದಿಲ್ಲ. ಆದುದರಿಂದ, This is a basic Programme This is a fundamental programme ಇದರ ಬಗ್ಗೆ, we should see that it succeeds. ಇದರಲ್ಲಿ ಕೆಲವೊಂದು ಲೋಪದೋಷಗಳು ನಡೆದಾಗ, ಅದನ್ನು ತಡೆಗಟ್ಟಲು ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ, ಆ ತಪ್ಪು ಮಾಡಿದವರನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆ ಮಾಡೋಣ ಇಂಥ ಒಳ್ಳೆಯ ಕಾರ್ಯಕ್ರಮವನ್ನು ಮಾಡುತ್ತಿರುವಾಗ ಅದರ ಬಗ್ಗೆ ಜನರಲ್ಲಿ ಕೆಟ್ಟ ಭಾವನೆ ಬರುವ ರೀತಿಯಲ್ಲಿ ಮಾತನಾಡುವುದು ಬೇಡವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಇಷ್ಟು ಹೇಳಿದ ಮೇಲೆ ಈ ಕಾರ್ಯಕ್ರಮ ಒಳ್ಳೆಯದು ಮತ್ತು ಇದಕ್ಕೆ ಹಣವನ್ನು ಒದಗಿಸಲಿಕ್ಕೆ ನಾವು ಮಾಡಿರತಕ್ಕಂಥ ವಿಧಾನ ಕೂಡ ಒಳ್ಳೆಯದು ಎನ್ನುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈಗ ತೆರಿಗೆಯನ್ನು ಹಾಕದೇನೇ ಯಾವ ಕಾರ್ಯಕ್ರಮವನ್ನೂ ನಡೆಸುವುದಕ್ಕೆ ಆಗುವುದಿಲ್ಲ ಟ್ಯಾಕ್ಸನ್ನು ಹಾಕಬೇಕು, ಯಾರ ಮೇಲೆ ಟ್ಯಾಕ್ಸನ್ನು ಹಾಕಬೇಕು ಎನ್ನುವ ಪ್ರಶ್ನೆ ಬರುತ್ತದೆ. 4 ವರ್ಷಗಳಿಂದ ನಾನು ಮಾನ್ಯ ಎಚ್. ಟಿ. ಕೃಷ್ಣಪ್ಪನವರ ಭಾಷಣವನ್ನು ಕೇಳುತ್ತಿದ್ದೇನೆ. ಇನ್‌ಡೈರೆಕ್ಟ್ ಟ್ಯಾಕ್ಸ್‌ನ್ನು ಹಾಕುತ್ತಿದ್ದಾರೆ ಡೈರೆಕ್ಟ್ ಟ್ಯಾಕ್ಸ್‌ಗಳನ್ನು ಹಾಕುತ್ತಿಲ್ಲವೆಂದು ಹೇಳುತ್ತಲೆ ಇದ್ದರು ಆದರೆ ಈ ಸಾರಿ ನಾವು ಡೈರೆಕ್ಟ್ ಟ್ಯಾಕ್ಸ್ ಹಾಕಿದರೆ ಅವಕ್ಕೂ ಕೂಡ ಟೀಕೆ ಮಾಡುತ್ತಾರೆ. ಇವತ್ತು ಪ್ರತ್ಯಕ್ಷ ತೆರಿಗೆಯನ್ನು ನಾವು ಯಾರಮೇಲೆ ಹಾಕಿದ್ದೇವೆ ಎಂದರೆ ಯಾರು ನಮ್ಮ ದೇಶದಲ್ಲಿ ದೊಡ್ಡ ಪ್ರಾಪರ್ಟಿಯನ್ನು ಹೊಂದಿದ್ದಾರೆ.

ಯಾರು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಭೂಮಿ ಇಟ್ಟು ಕೊಂಡಿದ್ದಾರೆ ಯಾರಿಗೆ ಎಷ್ಟು ಸಾಧ್ಯತೆ ಇದೆ ಅಷ್ಟನ್ನು ಹಾಕಿದ್ದೇವೆ. ಇದು ಸಮಾಜವಾದಕ್ಕೆ ಅನುಕೂಲವಾಗಿಯೇ ಹೊರತು, ಅದಕ್ಕೆ ವಿರುದ್ಧವಾಗಿಲ್ಲ. ಇದರಲ್ಲಿ ಮಿಡ್ಲ ಕ್ಲಾಸ್ ಬಗ್ಗೆ ವಾದ ಬರುತ್ತದೆ. ನಮ್ಮ ದೇಶದಲ್ಲಿ ಯಾರು ಮಿಡ್ಲ್ ಕ್ಲಾಸ್ ಇದ್ದಾರೆ, ಅವರೂ ಬುದ್ಧಿ ಜೀವಿಗಳು, ಅವರೂ ಕೂಡ ಯೋಚನೆ ಮಾಡಬೇಕಾಗಿದೆ; ಈಗ ಕರ್ನಾಟಕದಲ್ಲಿರತಕ್ಕಂಥ 3 ಲಕ್ಷ ಸರ್ಕಾರಿ ನೌಕರರಿಗೆ 150 ಕೋಟಿ ರೂಪಾಯಿಗಳು ಬರಿ ಅವರ ಸಂಬಳಸಾರಿಗೆಗಳಿಗೆ ಕೊಡುತ್ತಿದ್ದೇವೆ.

ಶ್ರೀ ಎಚ್. ಟಿ ಕೃಷ್ಣಪ್ಪ :—ಮಿಡ್ಲ್ ಕ್ಲಾಸ್ ರೆಕಗ್ನೈಜ್ ಮಾಡದಿದ್ದರೆ ನೀವು ಸಮಾಜವಾದವನ್ನು ತರುವುದು ಹೇಗೆ ?

ಶ್ರೀ ಎಂ. ವೈ. ಘೋರ್ಪಡೆ .—ರೆಕಗ್ನೈಜ್ ಮಾಡುತ್ತಿದ್ದೇವೆ ಆದರೆ ಇವತ್ತು ಶ್ರೀಮಂತರು ಯಾರು ? ಯಾರು ತಿಂಗಳಿಗೆ ಸರಿಯಾಗಿ ಸಂಬಳ ಸಾರಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೋ ಅವರೇ ನಮ್ಮ ದೇಶದಲ್ಲಿ ಶ್ರೀಮಂತರು, ಬೇರೆಯವರಿಗೆ ಈಗಾಗಲೇ ಹೇಳಿದ ಹಾಗೆ 3 ಕೋಟಿಯಲ್ಲಿ 10 ಲಕ್ಷ ಜನಕ್ಕೆ ಮಾತ್ರ ಸಂಬಳ ಸಿಗುತ್ತಿದೆ ಬಾಕಿ 90 ಲಕ್ಷ ಜನಕ್ಕೆ ಏನು ಸಿಗುತ್ತಿಲ್ಲ. ಇದರಲ್ಲಿ ಎಷ್ಟೋ ಜನಕ್ಕೆ ಮನೆಯಿಲ್ಲ. ಇದರಿಂದ ಅವರ ಮೇಲೆ ಮನೆ ಟ್ಯಾಕ್ಸನ್ನು ಹಾಕುವ ಪ್ರಶ್ನೆಯೆ ಬರುವುದಿಲ್ಲ. ನಾವು ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡದೇ ಹೋದರೆ ಹೇಗೆ, ಮಾನ್ಯ ಕೃಷ್ಣಪ್ಪನವರು ಮಿಡ್ಲ್ ಕ್ಲಾಸ್ ಮೇಲೆ ಟ್ಯಾಕ್ಸ್ ಹಾಕಿದರೆ ಪ್ರತಿಗಾಮಿ ಶಕ್ತಿಗಳ ಕಡೆಗೆ ಅವರನ್ನು ತಳ್ಳಿದಂತೆ ಆಗುತ್ತದೆ, ಪ್ರಗತಿಪರರಾಗಿ ಅವರು ಉಳಿಯುವುದಿಲ್ಲ ಎಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದೇ ಒಂದು ವಿಷಯ ಹೇಳಿಬಿಡುತ್ತೇನೆ. ನೀವು ಮಿಡ್ಲ್ ಕ್ಲಾಸ್ ಬಗ್ಗೆ ಮಾತ್ರ ಹೇಳಿದ್ದು ಅವನ್ನು Counter-poise ಮಾಡಿ ಏನು ಪ್ರಯೋಜನವಿಲ್ಲ.

ಶ್ರೀ ಎಂ. ವೈ ಘೋರ್ಪಡೆ.—ನೀವು ಟ್ರೇಡ್ ಯೂನಿಯನ್‌ನಲ್ಲಿ ಸಾಕಷ್ಟು ಹೆಸರನ್ನು ಪಡೆದಿದ್ದೀರಿ ಸಾಕಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೀರಿ ಅದರ ಬಗ್ಗೆ ಅನುಮಾನವಿಲ್ಲ. ಟ್ರೇಡ್ ಯೂನಿಯನ್ ಮಾರ್ಚುಗಳು ಆಗಬೇಕೆಂದು ನೂರಾರು ಜನ ಹೇಳಿದರೆ ಅವನ್ನು ಒಪ್ಪಲೇ ಬೇಕಾಗುತ್ತದೆ ಇವತ್ತು ಬ್ಯಾಂಕ್‌ಗಳಲ್ಲಿ ಕೆಲಸ ಮಾಡುವಂತ ಜನಗಳಿಗೆ ಅವರಿಗೆ ಬೇಕಾದಷ್ಟು ಸಂಬಳ ಸಿಗುತ್ತಿದೆ, ಆದರೆ ಅದೇ ಕ್ವಾಲಿಫಿಕೇಷನ್ ಇರತಕ್ಕಂಥ ಬಾಕಿ ಜನರಿಗೆ ಸಂಬಳ ಬರುತ್ತಿಲ್ಲ ಏನೂ ಇಲ್ಲ, ಇದರ ಬಗ್ಗೆ ಕೂಡ ಅವರಿಗೆ ಅರಿವು ಇರಬೇಕಾಗುತ್ತದೆ. ಟ್ರೇಡ್ ಯೂನಿಯನ್‌ನಲ್ಲಿರತಕ್ಕಂತ ಕಾರ್ಯಕರ್ತರು ಸಮಾಜವಾದದ ಬಗ್ಗೆ ಸ್ವಲ್ಪ ಯೋಚನೆ ಮಾಡದೇ ಹೋದರೆ ಆಗ ದೇಶದ ಪ್ರಗತಿ ಪಥದಲ್ಲಿ ನಡೆಸುಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಈಗ ಬ್ಯಾಂಕ್ ನೌಕರರ ಬಗ್ಗೆ ಹೇಳಿದಿರಿ, ತಾವು ನಾಶನಲ್ ವೇಜ್ ಪಾಲಿಸಿ ವಾದು ಮಾಡಿ. ಮೇಲಿನಿಂದ ಕೆಳಗಿನವರಿಗೂ ಅಂತರವೇನಿದೆ ಆ ರೀತಿ ಅಂತರರನ್ನು ಜಾಸ್ತಿ ಇಡದೆ ಕಡಿಮೆ ಇಡಿ ಎಂದು ಹೇಳಿದ್ದೇವೆ. ಈಗ ಒಬ ಮ್ಯಾನೇಜಿಂಗ್ ಡೈರಕ್ಟರವರಿಗೆ 26 ಸಾವಿರ ತೆಗೆದುಕೊಳ್ಳುತ್ತಿದ್ದರೆ ಅವನನ್ನು ಹಾಗೆಯೇ ಬಿಟ್ಟಿದ್ದೀರಿ ಅದನ್ನು ಸರಿಮಾಡಿ ಎಂದು ಹೇಳುತ್ತಿದ್ದೇವೆ.

ಈಗ ನಾನು ಬ್ಯಾಂಕ್ ನೌಕರರಿಗೆ ಸಂಬಳ ಸಿಕ್ಕಬಾರದು ಎಂದು ಹೇಳುತ್ತಿಲ್ಲ ನಾವು ಈ ಬಿಲ್ಲನ್ನು ಬಿಟ್ಟು ಬಹಳ ದೂರ ಹೋದಂತೆ ಆಯಿತು. ಇವೊತ್ತು ನಾನು ಹೇಳುವುದು ಇಷ್ಟೆ ಈಗ ನಾವು ಈ ಒಂದು ಚಿಕ್ಕ ಸೆಸ್ ಏನು ಹಾಕಿದ್ದೇವೆ, ಇದರಿಂದ ಪಟ್ಟಣಗಳಲ್ಲಿರತಕ್ಕ ಜನಗಳಿಗೆ ಯಾವ ಒಂದು ದೊಡ್ಡ ಬಾಧೆ ಒಂದು ದೊಡ್ಡ ತೊಂದರೆ ಉಂಟಾಗುವುದಿಲ್ಲ ಎಂದು ಹೇಳುತ್ತೇನೆ. ಈಗ ಅವರು ಏನೆಂದು ಪ್ರಾಪರಟಿ ಟ್ಯಾಕ್ಸ್ ಕೊಡುತ್ತಿದ್ದಾರೆ ಅದರ ಮೇಲೆ ಒಂದು ಸ್ವಲ್ಪ ಸೆಸ್ ಹಾಕಿದ್ದೇವೆ ಈ ಸಸ್ ವಿಚಾರ ಉಪಯೋಗ ಮಾಡಿ ಕೊಂಡು ರಾಜಕೀಯ ವಿಷಯಗಳನ್ನು ಇಪ್ಪೊಂದುಕಾಲ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ಎಂದು ನನ್ನ ಅಭಿಪ್ರಾಯ. ಇನ್ನು ಸೋಷಿಯಲಿಸ್ಟ್ ಕಂಟ್ರೀಸ್ ಬಗ್ಗೆ ಹೇಳಿದರು ನಾನು ಅವರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸೋಷಿಯಲಿಸ್ಟ್ ಸಮಾಜವಾದ ದೇಶಗಳಲ್ಲಿ ಪ್ರೈಸ್ ಸ್ಟೆಬಿಲಿಟಿ ಇದೆ ಇನ್‌ಡೈರೆಕ್ಟ್ ಟ್ಯಾಕ್ಸ್ ಮಾತ್ರ ಸಂಪೂರ್ಣವಾಗಿ ಅವರು ಅವಲಂಬಿಸಿದ್ದಾರೆ. ಯಾವ ಒಂದು ಪದಾರ್ಥ ಉತ್ಪಾದನೆ ಮಾಡಿದ ಮೇಲೆ ಅದನ್ನು ಮಾರಾಟ ಮಾಡುವಾಗ, ಸಮಾಜಕ್ಕೆ

ಖರ್ಚು ಮಾಡುವುದಕ್ಕೋಸ್ಕರ ಒಂದು ಪರಸೆಂಟೇಜ್ ಇಡುತ್ತಾರೆ, ಅದನ್ನು ಮಾರ್ಜಿನ್ ಟ್ಯಾಕ್ಸ್ ಎಂದಾದರೂ ಕರೆಯಿರಿ, ಟರ್ನ್‌ಓವರ್ ಎಂದಾದರೂ ಕರೆಯಿರಿ ಸಮಾಜವಾದ ರಾಷ್ಟ್ರಗಳಲ್ಲಿ ಆ ರೀತಿ ನಡೆಸುತ್ತಾರೆ. ಇನ್ನು ಸೆಂಟ್ರಲ್ ಬಗ್ಗೆ ಒಂದು ಪುಸ್ತಕದಲ್ಲಿರತಕ್ಕ ಒಂದು ವಿಷಯವನ್ನು ಓದಿ ಹೇಳಿದರು. ನಾವು ಪದೇ ಪದೇ ಆ ಮಾತನ್ನು ಹೇಳುತ್ತಿದ್ದೇವೆ. ಈಗ ಎಲಾಸ್ಟಿಕ್ ಟ್ಯಾಕ್ಸ್ ಎಲ್ಲಾ ಸೆಂಟ್ರಲ್ ಕಡೆ ಇದ್ದೆ, ನಾವು ಇನ್‌ಎಲಾಸ್ಟಿಕ್ ಟ್ಯಾಕ್ಸ್ ಮೇಲೆ ಅವಲಂಬಿಸಬೇಕಾಗಿದೆ. ಈಗ ನಮ್ಮ ಸೇಲ್ಸ್ ಟ್ಯಾಕ್ಸ್ ಒಂದು ಬಿಟ್ಟರೆ ಬೇರೆ ಇಲ್ಲ. ಇನ್ನು ಸೆಂಟ್ರಲ್‌ನಿಂದ ನಮಗೆ ಎಷ್ಟು ಬರಬೇಕು ಅದರ ಬಗ್ಗೆ ವಾದ ಮಾಡುತ್ತೇವೆ. ಅಲ್ಲದೇ ಮೂರು ನಾಲ್ಕು ವರ್ಷದಿಂದ ಪ್ಲಾನ್ ಅಸಿಸ್ಟೆನ್ಸ್ ಸ್ಕ್ರೀಜ್ ಮಾಡಿದ್ದಾರೆ, ಈ ವರ್ಷ 10 ಪರಸೆಂಟ್ ಜಾಸ್ತಿ ಮಾಡಿದ್ದಾರೆ, ಹಾಗೆ ಆದ ತಕ್ಷಣ ನಮ್ಮ ಕರ್ನಾಟಕದ ಪ್ರಗತಿ ಏನು ಇದೆ, ಅದಕ್ಕೆ ಅವರು ಹಣ ಕೊಟ್ಟಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ ಈಗ ಗ್ರಾಮಾಂತರ ಪ್ರದೇಶದಲ್ಲಿ ನೂರಾರು ವರ್ಷದಿಂದ ನೆಗ್ಲೆಕ್ಟ್ ಆಗಿರತಕ್ಕ ಜನ ಏನಿದ್ದಾರೆ, ಅವರಿಗೆ ಈಗಲಾದರೂ ಹೊಸ ವಾತಾವರಣಕ್ಕೆ ತರಲು ಗಮನ ಕೊಡದೇ ಹೋದರೆ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಸನದಿಯವರು ಬಹಳ ರಚನಾತ್ಮಕವಾಗಿ ಭಾಷಣ ಮಾಡಿ ಪಟ್ಟಣಗಳ ಪ್ರದೇಶದಲ್ಲಿ ಶಾಲಾ ಕಟ್ಟಡದ ಬಗ್ಗೆ ಏನೊಂದು ನಿರಾಶಾ ಪರಿಸ್ಥಿತಿ ಇದೆ ಅದರ ಬಗ್ಗೆ ಅವರದೇ ಆದಂತ ಶೈಲಿಯಲ್ಲಿ ಬಹಳ ಸುಂದರವಾದ ರೀತಿಯಲ್ಲಿ ವರ್ಣನೆ ಮಾಡಿ ಮನ ಮುಟ್ಟುವಂತೆ ಮಾಡಿದರು, ಹಾಗೆ ನನ್ನ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿದರು. ಅದು ಅವರ ಸೌಜನ್ಯದಿಂದ ಹೇಳಿರ ತಕ್ಕದ್ದು ಅಷ್ಟೇ, ಅದನ್ನು ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಸಹಿಸಲಿಕ್ಕಾಗಲಿಲ್ಲ. ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಕೂಡ ಅವರದೇ ಶೈಲಿಯಲ್ಲಿ ಭಾಷಣ ಮಾಡಿದರು, ಹಾಗೆ ಒಂದು ಹೊಸ ಕಾವ್ಯ ಕಲ್ಪನೆ ಮಾಡಿ ಓದಿದರು, ಅದು ಕರ್ನಾಟಕದ ಧನ ಮತ್ತು ಮಾನ ಇದನ್ನು ಕಾಪಾಡಿಕೊಂಡು ಬರಲಿಕ್ಕೆ ಆಗಲಿಲ್ಲ, ಈ ರೀತಿ ಅರ್ಥ ಬರುವ ರೀತಿಯಲ್ಲಿ ಅವರ ಕಾವ್ಯ ಓದಿದರು, ಅದಕ್ಕೆ ಉತ್ತರ ಇಷ್ಟೇ ನಮ್ಮ ಕರ್ನಾಟಕ ಜನತೆಯ ಮಾನ ಏನು ಇದೆ, ಅದನ್ನು ನಾವು ಕಾಪಾಡಿಕೊಂಡು ಬರಬೇಕಾದರೆ ಯಾರ ಕಡೆ ಧನ ಇದೆ ಅಲ್ಲಿ ಟ್ಯಾಕ್ಸ್ ಹಾಕಿ, ಯಾರ ಕಡೆ ಧನ ಇಲ್ಲ ಅವರ ಉಪಯೋಗಕ್ಕೆ, ಅವರ ಮಾನ ಕಾಪಾಡುವುದಕ್ಕೆ ಹೋಗದೇ ಹೋದರೆ ಕರ್ನಾಟಕದಲ್ಲಿ ಮಾನ ಉಳಿಸುವುದಕ್ಕಾಗುವುದಿಲ್ಲ. ಈಗ ನಾವು ಮಾನ, ಧನ, ಎಲ್ಲಾ ಕಳ್ಳತನ ಮಾಡಿದ್ದೇವೆ ಎಂದು ಹೇಳುವು ದಾದರೆ ಮಹಾತ್ಮ ಗಾಂಧಿಯವರು ಏನು ಹೇಳಿದ್ದಾರೆ ಎಂದರೆ ಧನ ಇರತಕ್ಕ ಜನರು ಸಮಾಜಕ್ಕೆ ಸ್ವಲ್ಪ ವಾದರೂ ಕೊಡದೇ ಹೋದರೆ ಆಗ ಕಳ್ಳತನವಾಗುತ್ತದೆ. ಈಗ ಶ್ರೀಮಂತರ ಕಡೆ ಇರತಕ್ಕ ಹಣ ಕಳ್ಳತನ ಆಗಬಾರದು ಎಂದು ಟ್ಯಾಕ್ಸ್ ಹಾಕಬೇಕಾಗಿದೆ. ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪ ನವರು ಟೀಕೆಗೋಸ್ಕರ ಮಾತನಾಡುವುದು ಅವರ ಧರ್ಮ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಲ್ಯಾಂಡ್ ರಿಫಾರ್ಮ್ಸ್ ತಂದಾಗ ಕ್ರಿಟಿಸಿಸಮ್ ಮಾಡಿದೆವೆ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಮಾತ ನಾಡುವಾಗ ಕನ್ನಡ ಭಾಷಾ ಸಾಹಿತ್ಯ ಚೆನ್ನಾಗಿ ಬಂತು, ಅವರದೇ ಆದಂತ ಕನ್ನಡ ಭಾಷೆಯನ್ನು ಉಪಯೋಗ ಮಾಡುವುದು, ಲಿಂಗಪ್ಪನವರ ಶೈಲಿ, ಅದು ಅವರ ಧರ್ಮ, ಅದಕ್ಕೆ ಏನು ಮಾಡುವು ದಕ್ಕಾಗುವುದಿಲ್ಲ. ನಾವು ಅವರು ಹೇಳಿದ್ದನ್ನು ಕೇಳಿಕೊಂಡು ಸರಳವಾದ ಶೈಲಿಯಲ್ಲಿ ಉತ್ತರ ಕೊಡು ವುದು ನಮ್ಮ ಧರ್ಮ. ನೀವು ನಿಮ್ಮ ಧರ್ಮ, ನಿಮ್ಮ ಶೈಲಿಯನ್ನು ಬಿಟ್ಟು ಬದಲಾಗುವುದಕ್ಕಾಗುವು ದಿಲ್ಲ, ಅದೇ ರೀತಿ ನಮ್ಮ ಶೈಲಿ. ನಮ್ಮ ಧರ್ಮದ ಪ್ರಕಾರ ನಾವು ಮಾತನಾಡಬೇಕಾಗುತ್ತದೆ. ಇನ್ನು ಮಾನ್ಯ ಲಿಂಗಪ್ಪನವರು ಸತ್ಯಕ್ಕೆ ದೂರವಾದ ಕೆಲವು ವಿಷಯಗಳನ್ನು ಹೇಳಿದ್ದಾರೆ, ಮಿನಿಸ್ಟರ್ಸ್ ೧೦-೧೫ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ ಎಂದು. ಈಗ ನಾನು ಅಂಕಿಸಂಖ್ಯೆಗಳನ್ನು ತರಿಸಿಕೊಂಡು ನೋಡಿದರೆ ೨೭ ಲಕ್ಷ ರೂಪಾಯಿ ೧೯೭೪-೭೫ರಲ್ಲಿ ಖರ್ಚಾಗಿರುವುದು, ೨೮ ಲಕ್ಷ ರೂಪಾಯಿ ಈ ಸಾರಿ ಸೇರಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಟೋಟಲ್ ತಪ್ಪು ಇದೆ ಎಂದು ಹೇಳಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಭಾವನಾತ್ಮಕವಾಗಿ ಮಾತನಾಡುವಾಗ ಈ ರೀತಿ ತಪ್ಪು ಗಳನ್ನು ಮಾಡುತ್ತೀರಿ. ಇವೊತ್ತು ಪ್ರಜಾಪ್ರಭುತ್ವದ ಕುತ್ತಿಗೆ ಹಿಸುಕಿದ್ದೀರಿ ಎಂದು ಹೇಳಿದರು, ಅವರು ಏನು ಭಾಷಣ ಮಾಡುತ್ತಾರೆ ಅದನ್ನು ಟೇಪ್ ರೆಕಾರ್ಡ್ ಮಾಡಿ ನೋಡಿದರೆ ಅದು ಒಂದೇ

ಉದಾಹರಣೆ ಸಾಕು. ಇವೊತ್ತು ತಾವು ನಮ್ಮ ರಾಜ್ಯಕ್ಕೆ ಒಳ್ಳೆಯದಾಗಲಿ ಎನ್ನುವ ರೀತಿಯಲ್ಲಿ ಸಲಹೆ ಕೊಟ್ಟರೆ ಖಂಡಿತವಾಗಿ ಪತ್ರಿಕೆಗಳಲ್ಲಿ ಅಚ್ಚು ಹಾಕುತ್ತಾರೆ, ಅದನ್ನು ಬಿಟ್ಟು ತಾವು ಹೇಳಿದ್ದೆಲ್ಲಾ ಅಚ್ಚು ಹಾಕಬೇಕು ಎಂದರೆ ಅದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಇವೊತ್ತು ಯಾವುದು ಒಳ್ಳೆಯದು ಎಂದು ತಿಳಿಯುತ್ತದೆ ಅದನ್ನು ಪತ್ರಿಕೆಯವರು ಪ್ರಿಂಟ್ ಮಾಡುತ್ತಾರೆ ತಾವು ಹೇಳಿದ್ದು ಎಲ್ಲಾ ಪ್ರಿಂಟ್ ಆಗುವುದಿಲ್ಲ. ಈಗ ಈ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡೋಣ.

ಮಾನ್ಯ ಸದಸ್ಯ ಶ್ರೀ ವಿ ಎನ್. ಪಾಟೀಲರು ಮಾತನಾಡುತ್ತಾ ಇದರಲ್ಲಿ ಸೈಂಟಿಫಿಕ್ ಅಪ್ರೋಚ್ ಇಲ್ಲ ಎಂದು ಹೇಳಿದರು. ಲ್ಯಾಂಡ್ ರೆವಿನ್ಯೂ ಪ್ರೊಗ್ರೆಸ್ಸೀವ್ ಟ್ಯಾಕ್ಸ್ ಅಲ್ಲ, ಅದರಲ್ಲಿ ಪ್ರೊಗ್ರೆಷನ್ ಇಲ್ಲ ಎನ್ನುವ ಮಾತನ್ನೂ ನಾನು ಹೇಳಿದ್ದೇನೆ. ಬೇರೆ ರಾಜ್ಯಗಳಂತೆ ಇದರ ಮೇಲೆ ಶೇಕಡ ನೂರರಷ್ಟು ಸರ್‌ಚಾರ್ಜ್ ಹಾಕುವುದಕ್ಕೆ ನಮ್ಮ ಸರ್ಕಾರದವರು ಕೈ ಹಾಕಿಲ್ಲ ಬೇರೆ ರಾಜ್ಯಗಳಲ್ಲಿ ಲ್ಯಾಂಡ್ ಟ್ಯಾಕ್ಸೇಷನ್ ಮಾಡುವಾಗ ಲ್ಯಾಂಡ್ ರೆವಿನ್ಯೂ ಮೇಲೆ ಶೇಕಡ ನೂರರಷ್ಟು ಸರ್‌ಚಾರ್ಜ್ ಹಾಕಿದ್ದಾರೆ. ಆದರೆ, ಲ್ಯಾಂಡ್ ರೆವಿನ್ಯೂ ಪ್ರೊಗ್ರೆಸ್ಸೀವ್ ಟ್ಯಾಕ್ಸ್ ಅಲ್ಲ. ಆದುದರಿಂದ, ಇದರ ಭಾರ ಹೊರಿಸುವುದು ಬೇಡ ಎಂದು ಸರ್ಕಾರ ತೀರ್ಮಾನ ಮಾಡಿದೆ. ಆದರೆ, ಸೆಸ್ ಏನಿದೆ. ಅದು ಬಹಳ ಸಣ್ಣ ಅಂಶ. ಈಗ ನಮ್ಮ ರಾಜ್ಯದಲ್ಲಿ ನಾಲ್ಕು ಕೋಟಿ ರೂಪಾಯಿಗಳಷ್ಟು ಭೂ ಕಂದಾಯ ಬರುತ್ತಿದೆ ಈಗ ನಾಲ್ಕು ಕೋಟಿ, ನಲವತ್ತು ಲಕ್ಷ ರೂಪಾಯಿಗಳಾಗುತ್ತದೆ. ಈಗ ಎಕ್ಸೈಸ್ ಡ್ಯೂಟಿಯಿಂದ ಹನ್ನೆರಡು ಕೋಟಿ ರೂಪಾಯಿಗಳಷ್ಟು ಬರುತ್ತಿದೆ. ಈ ಹನ್ನೆರಡು ಕೋಟಿ ರೂಪಾಯಿಗಳ ಮೇಲೆ ಸೆಸ್ ಹಾಕುವುದರಿಂದ. ನಮ್ಮ ಸರ್ಕಾರಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ಜಾಸ್ತಿ ಬರುತ್ತದೆ The basis of the cess is Rs. 4 crores land revenue Rs. 12 crores excise duty on various types of liquor and Rs. 4 crores property tax. ವಾಸ್ತವಾಂಶ ಹೀಗಿರುವಾಗ, ನಾವು ರೈತರ ಮೇಲೆ ದೊಡ್ಡ ಭಾರವನ್ನು ಹೇರಿದ್ದೇವೆ ಎಂದು ಮಾನ್ಯ ಸದಸ್ಯರು ಹೇಳುವುದು ಸಮಂಜಸವಲ್ಲವೆಂದು ನಾನು ಹೇಳಬಯಸುತ್ತೇನೆ ಸಾಮಾನ್ಯವಾಗಿ, ಈ ಮಸೂದೆಯ ಉದ್ದೇಶವನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪಿದ್ದಾರೆ. ಇದರಲ್ಲಿ ತೆರಿಗೆ ಹಾಕುವ ವಿಧಾನ ಕೂಡ ಅಷ್ಟೇ ಸಮಂಜಸವಾಗಿದೆ ಎಂದು ಹೇಳಿ; ಈ ಮಸೂದೆಗೆ ಮಾನ್ಯ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿಗೆ ನೀಡುತ್ತಾರೆಂದು ಆಶೆ ವ್ಯಕ್ತ ಮಾಡುತ್ತೇನೆ.

ಶ್ರೀ ಬಿ. ಭೈರಪ್ಪಾಜಿ.—ಶಾಲಾ ಕಟ್ಟಡಗಳಿಗೆ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಡುವಂತೆ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ಬಹಳ ಸಂತೋಷ. ಹಿಂದೆ, ಒಂದು ಶೇಕಡಾವಾರು ಕ್ರಮವಿತ್ತು. ಅದು ಏನೆಂದರೆ, ಶಾಲಾ ಕಟ್ಟಡ ಕಟ್ಟಿಸುವುದಕ್ಕೆ, ಸಂಬಂಧಪಟ್ಟ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಇಪ್ಪತ್ತು ಪರ್ಸೆಂಟ್, ಪಂಚಾಯತಿಯವರು ಮತ್ತು ಊರಿನವರು ಇಪ್ಪತ್ತು ಪರ್ಸೆಂಟ್, ಮತ್ತು ಉಳಿದ ಮೊಬಲಗನ್ನು ಸರ್ಕಾರ ಕೊಡುತ್ತಿತ್ತು. ಆದುದರಿಂದ, ಈಗಲೂ ಕೂಡ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಮತ್ತು ಪಂಚಾಯತಿ ಹಾಗೂ ಊರಿನವರು ವಂತಿಗೆ ಕೊಡುವ ಹಾಗೆ ಮಾಡಬೇಕು. ಏಕೆಂದರೆ, ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ಕಟ್ಟಡ ಕಟ್ಟಿಸುವುದಕ್ಕೆ, ಮುಂತಾದ ಕೆಲಸಗಳಿಗೆ ಜವಾಬ್ದಾರಿ ಇದೆ. ಆದುದರಿಂದ, ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ವಂತಿಗೆಯನ್ನು ಕೊಡುವುದು ಬೇಡ, ಊರಿನವರು ಮತ್ತು ಪಂಚಾಯತಿಯವರು ಕೊಟ್ಟರೆ ಸಾಕು ಎಂದು ಮಾಡುವುದು ಸರಿಯಲ್ಲ. ಆದುದರಿಂದ, ಮಾನ್ಯ ಹಣಕಾಸಿನ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಂ. ವೈ. ಘೋರ್ಪಡೆ.—ಇಲ್ಲಿ ಇರುವ ಮುಖ್ಯಾಂಶವಿಷ್ಟು. ಈ ದೇಶದಲ್ಲಿ ಸಾವಿರಾರು ಶಾಲಾ ಕಟ್ಟಡಗಳನ್ನು ವಂತಿಗೆ ರೂಪದಲ್ಲಿ ಹಣ ಸಂಗ್ರಹಣ ಮಾಡಿ ಕಟ್ಟಿದ್ದಾರೆ. ಹಿಂದೆ, ಸಾಕಷ್ಟು ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳ ಜನರು ವಂತಿಗೆ ಕೊಡುತ್ತಿದ್ದರು; ಅಷ್ಟೇ ಏಕೆ, ಅನೇಕ ಗುಡ್ಡಗಾಡು ಪ್ರದೇಶಗಳ ಜನರೂ ಮುಂದೆ ಬಂದು ಶಾಲಾ ಕಟ್ಟಡಗಳಿಗೆ ವಂತಿಗೆಯನ್ನು ಕೊಟ್ಟಿದ್ದಾರೆ ಆದರೆ, ಈಗ ವಂತಿಗೆ ಕೊಡುವ ಪದ್ಧತಿ ಯಾವುದೋ ಒಂದು ಕಾರಣದಿಂದ ಸ್ವಲ್ಪ ಕಡಿಮೆಯಾಗಿದೆ. ಇದನ್ನು ನಾವು ಪುನಃ ರಿವೈಷ್ ಮಾಡಬೇಕಾಗಿದೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಶ್ರೀಮಂತರ ಮಕ್ಕಳು ಸಾಮಾನ್ಯವಾಗಿ ಪಟ್ಟಣಗಳಲ್ಲಿ ಓದುತ್ತಿರುತ್ತಾರೆ; ಮತ್ತು ಬಡವರು ವಂತಿಗೆ ಕೊಡುವ ಪರಿಸ್ಥಿತಿಯಲ್ಲಿಲ್ಲ. ಹಿಂದೆ, ಇಂಥಾ ಕೆಲಸಗಳನ್ನು ಉತ್ಸಾಹದಿಂದ ಮಾಡುತ್ತಿದ್ದ ಜನರ ಮನಸ್ಸಿನಲ್ಲಿ, ''ಸರ್ಕಾರ ಎಲ್ಲ ಕೆಲಸವನ್ನೂ ಮಾಡಬೇಕು; ನಾವು ಏತಕ್ಕೆ ಸಹಾಯ ಮಾಡಬೇಕು ?'' ಎನ್ನುವ

ವಿಚಾರ ಬರುತ್ತಿದೆ ಒಂದು ಕಡೆ ಸಾರ್ವಜನಿಕರ ವಂತಿಗೆ ಬೇಡ ಎಂದು ಹೇಳಿ, ಇನ್ನೊಂದು ಕಡೆ ಸರ್ಕಾರವೇ ಎಲ್ಲ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕು ಎಂದು ಹೇಳಿದರೆ ಹೇಗೆ? ಈಗ ಸುಮಾರು ಮೂವತ್ತು ಸಾವಿರ ಸ್ಕೂಲ್ ರೂಮುಗಳು ಬೇಕಾಗುತ್ತವೆ. ಇದಕ್ಕೆ ವರ್ಷಗಳು ಬೇಕಾಗುತ್ತದೆ? ಒಂದು ವರ್ಷಕ್ಕೆ ಐದು ಸಾವಿರ ಶಾಲಾ ರೂಮುಗಳನ್ನು ಕಟ್ಟಿಸುತ್ತೇವೆ ಎಂದರೆ, ಮೂವತ್ತು ಸಾವಿರ ಶಾಲಾ ರೂಮುಗಳನ್ನು ಕಟ್ಟಿಸುವುದಕ್ಕೆ ಆರು ವರ್ಷಗಳು ಬೇಕಾಗುತ್ತವೆ? ಈ ಒಂದು ದೃಷ್ಟಿಯನ್ನಿಟ್ಟು ಕೊಂಡು ಮಂತ್ರಿಮಂಡಲದಲ್ಲಿ ಚರ್ಚೆ ಮಾಡಲಾಗಿದೆ. ಈಗ ಪಿ ಡಬ್ಲ್ಯು ಡಿ ಸ್ಪೆಸಿಫಿಕೇಷನ್ ಮೇರೆಗೆ ಕಟ್ಟಿರತಕ್ಕ ಕಟ್ಟಡಗಳು ರಿಪೇರಿಗೆ ಬರುವುದಿಲ್ಲವೇ? ಅದು ಬೀಳುವುದಿಲ್ಲವೆ? ಇವೆಲ್ಲಾ ಪ್ರಶ್ನೆಗಳು ಬರತ್ತವೆ. ಆದುದರಿಂದ, ಲೋಕಲ್ ಇನಿಷಿಯೇಟೀವ್ ಏನು ಇದೆ, ಅದನ್ನೇ ಉಪಯೋಗಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸುವ ವಿಚಾರ ಇದೆ. ಸದ್ಯಕ್ಕೆ, ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ವಂತಿಗೆ ಕೊಡುಕೂಡದು, ಸರ್ಕಾರ ಕೊಡುವ ಹಣದ ಜೊತೆಗೆ ಸಾರ್ವಜನಿಕರಿಂದ ವಂತಿಗೆಯನ್ನು ಸಂಗ್ರಹಣೆ ಮಾಡಬೇಕೆನ್ನುವುದು ಇದೆ. ಇದು ಮುಂದೆ ಏನಾಗುತ್ತದೆ ಎಂಬುದನ್ನು ನೋಡೋಣ. ಮುಂದೆ, ಏನಾದರೂ ಮಾರ್ಪಾಡು ಮಾಡಬೇಕೆಂದರೆ ಮಾಡೋಣ. ಸದ್ಯಕ್ಕೆ ಸರ್ಕಾರದವರು ಈ ವ್ಯವಸ್ಥೆಯನ್ನು ಮಂಜೂರು ಮಾಡಿದ್ದಾರೆ.

MADAM SPEAKER.—The quest on is:

"That the Karnataka (Enhancement of certain Cesses) Bill, 1976 be taken into consideration."

The motion was adopted

MADAM SPEAKER.—The clause by clause consideration of the Bill will be taken up tomorrow.

OBITUARY RESOLUTION

re: Demise of Sri H. K. Veeranna Gowda.

MADAM SPEAKER.—I regret to announce the sad demise of Sri H. K. Veeranna Gouda today who was a former member of this House and a former Minister,

† ಶ್ರೀ ಎಸ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಒಂದು ನಿರ್ಣಯವನ್ನು ಸಭೆಯ ಮುಂದಿಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈ ನಿರ್ಣಯ ವೇನೆಂದರೆ:—

"This House places on record its deep sense of sorrow at the sad and sudden demise of Sri H. K. Veeranna Gowda, a former member of this House and a former Minister and conveys its sympathy to the members of the bereaved family."

ಈ ಘನ ಸಭೆಯ ಅನೇಕ ಮಾನ್ಯ ಸದಸ್ಯರುಗಳಿಗೆ ಗೊತ್ತಿರುವ ಹಾಗೆ, ದಿವಗಂತ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ದೇಶದ ಸ್ವಾತಂತ್ರ ಪ್ರಾಪ್ತಿಗಾಗಿ ಹೋರಾಟವನ್ನು ನಡೆಸಿದಂತವರು. ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ರಾಷ್ಟ್ರದಲ್ಲೇ ಅವರ ಕೀರ್ತಿ ಹರಡಿತ್ತು ಎಂದು ಹೇಳಿದರೆ, ಅದು ಉತ್ಪ್ರೇಕ್ಷೆಯಾಗಲಾರದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಅನೇಕ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ, ೧೯೩೮ನೇ ಇಸವಿಯಲ್ಲಿ ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ, ಶ್ರೀಮಾನ್ ಎಚ್. ಕೆ. ವೀರಣ್ಣ ಗೌಡರು ಸ್ವಾತಂತ್ರ್ಯಕ್ಕಾಗಿ ದೊಡ್ಡಹೋರಾಟವನ್ನೇ ಪ್ರಾರಂಭ ಮಾಡಿದರು. ಅವರು, ಅಂದಿನಿಂದ